ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಆರ್.ಟಿ.ಐ. ಕಾರ್ಯಕರ್ತ

ಬಾಳಿಗ ಹತ್ಯೆ



ಸಂಪುಟ 10 | ಸಂಚಿಕೆ 15 | ಪುಟ 16 | ಏಪ್ರಿಲ್ 10, 2016 | ರೂ. 10/-

web: www.janashakthi.co.in e-mail : js_weekly@yahoo.com



BBMP ಬಜೆಟ್ ಬರಿಯ ಅಹಿಂದ ಜಪ



ಲಾಭ 'ಓಲಾ'ಗೆ ರಿಸ್ಕ್ ಡ್ರೈವರ್‌ಗೆ

- ಸೆಪ್ಟೆಂಬರ್ 2: ಸಾರ್ವತ್ರಿಕ ಮುಷ್ಕರಕ್ಕೆ ಕರೆ
- ಉತ್ತರಾಖಂಡ : ಪ್ರಜಾಪ್ರಭುತ್ವದ ಮೇಲೆ ಹಲ್ಲೆ



ಹೆಣ್ಮಕ್ಳೇ ಸ್ಟ್ರಾಂಗು ಗುರು!

ವಿದ್ಯುತ್ ಬೆಲೆ ಏರಿಕೆ





ಸಪ್ಟಂಬರ್ 2, 2016 ರಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ರಾಷ್ಟ್ರೀಯ ಸಮಾವೇಶದ ಕರೆ

ನವದೆಹಲಿಯಲ್ಲಿ ಮಾರ್ಚ್ 30ರಂದು ನಡೆದ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಉದ್ದಿಮೆವಾರು ಒಕ್ಕೂಟಗಳ ರಾಷ್ಟ್ರೀಯ ಸಮಾವೇಶ ಎನ್‌ಡಿಎ ಸರಕಾರದ ಜನ–ವಿರೋಧಿ, ರಾಷ್ಟ್ರ–ವಿರೋಧಿ ಮತ್ತು ಕಾರ್ಮಿಕ–ವಿರೋಧಿ ಧೋರಣೆಗಳ ವಿರುದ್ಧ ಸಪ್ಟಂಬರ್2, 2016ರಂದು ಒಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸಲು ಕರೆ ನೀಡಿದೆ.

ಈ ಸಮಾವೇಶದಲ್ಲಿ ದೇಶದ ಎಲ್ಲೆಡೆಗಳಿಂದ ಬಂದ ವಿವಿಧ ಸಾರ್ವಜನಿಕ ಮತ್ತು ಖಾಸಗೀ ವಲಯಗಳ ಉದ್ದಿಮೆಗಳ ಮತ್ತು ಸಂಘಟಿತ ಹಾಗೂ ಅಸಂಘಟಿತ ವಲಯಗಳ ಕಾರ್ಮಿಕರ, ನೌಕರರ ನೂರಾರು ಪ್ರತಿನಿಧಿಗಳು ಭಾಗವಹಿಸಿದ್ದರು. ಸಾರ್ವಜನಿಕ ವಲಯದ ಉದ್ದಿಮೆಗಳು, ಬ್ಯಾಂಕುಗಳು, ವಿಮೆ, ರಕ್ಷಣೆ, ರಾಜ್ಯ ಮ್ತು ಕೇಂದ್ರ ಸರಕಾರೀ ಇಲಾಖೆಗಳು, ರೈಲ್ವೆ, ಟೆಲಿಕಾಂ, ಬಂದರು, ರಸ್ತೆ ಸಾರಿಗೆ, ವಿದ್ಯುತ್, ಕಟ್ಟಡ ನಿರ್ಮಾಣ, ಭಾರತದ ವಿವಿಧ ಸ್ಕೀಮುಗಳಲ್ಲಿ ಕೆಲಸ ಮಾಡುವ ನೌಕರರು, ಮನೆಗೆಲಸದವರು ಮತ್ತಿತರರು ಭಾಗವಹಿಸಿದರು.

ದೇಶದ ಕಾರ್ಮಿಕ ಆಂದೋಲನ ಸತತವಾಗಿ ಐಕ್ಯತೆಯಿಂದ ಎತ್ತುತ್ತಿರುವ 12 ನೈಜ ಬೇಡಿಕೆಗಳ ಬಗ್ಗೆ ಸರಕಾರ ಸಂಪೂರ್ಣ ಉಪೇಕ್ಷೆಯಿಂದ ವರ್ತಿಸುತ್ತಿದೆ ಎಂದು ಸಮಾವೇಶ ಬಲವಾಗಿ ಟೀಕಿಸಿದೆ. ಸಂಸತ್ತನ್ನು ಬದಿಗೊತ್ತಿ, ಕಾರ್ಯಾಂಗದ ಆದೇಶಗಳ ಮೂಲಕ ಮಾಲಕ ವರ್ಗದವರ ಪರವಾದ ಕ್ರಮಗಳನ್ನು ಸರಕಾರ ಜಾರಿಗೊಳಿಸುತ್ತಿದೆ, ಕನಿಷ್ಟ ಕೂಲಿ, ಕಾಂಟ್ರಾಕ್ಟ್ ಕಾರ್ಮಿಕರು ಮತ್ತು ಸ್ಕೀಮ್ ನೌಕರರಿಗೆ ಸಂಬಂಧಪಟ್ಟ ಭಾರತೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ)ದ ಸರ್ವಸಮ್ಮತ ಶಿಫಾರಸುಗಳನ್ನೂ ಸರಕಾರ ಸಂಪೂರ್ಣವಾಗಿ ಉಪೇಕ್ಷಿಸುತ್ತಿದೆ ಎಂದೂ ಸಮಾವೇಶ ಬಲವಾಗಿ ಖಂಡಿಸಿದೆ.

ಸಮಾವೇಶ ಹರಿಯಾಣ ಸರಕಾರ ರಾಜಸ್ಥಾನ ಮಾದರಿಯಲ್ಲಿ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿರುವುದುನ್ನು ಖಂಡಿಸುವ ನಿರ್ಣಯವನ್ನು ಸರ್ವಸಮ್ಮತಿಯಿಂದ ಅಂಗೀಕರಿಸಿತು. ಅದೇ ರೀತಿಯಲ್ಲಿ ರಾಜಸ್ಥಾನ ಸರಕಾರ ಹೊಂಡಾ ಕಾರ್ಮಿಕರ ಮೇಲೆ ಲಾಠೀ ಪ್ರಹಾರ ನಡೆಸಿರುವುದನ್ನು ಖಂಡಿಸಿ, ಬಹುರಾಷ್ಟ್ರೀಯ ಕಂಪನಿಗಳಿಂದ ಕಾರ್ಮಿಕ ಕಾನೂನುಗಳ ಉಲ್ಲಂಘನೆಗಳ ವಿರುದ್ಧ ಮತ್ತು ತಮಿಳುನಾಡಿನ ಪ್ರೈಕೊಲ್ ಕಾರ್ಮಿಕರು ಹಾಗೂ ಹರಿಯಾಣದ ಮಾರುತಿ ಕಾರ್ಮಿಕರೊಂದಿಗೆ ಸೌಹಾರ್ದ ವ್ಯಕ್ತಪಡಿಸುವ ನಿರ್ಣಯಗಳನ್ನು ಸರ್ವಸಮ್ಮತಿಯಿಂದ ಅಂಗೀಕರಿಸಿತು.

ಸಪ್ಟಂಬರ್ 2, 2016ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಬೃಹತ್ ಪ್ರಮಾಣದ ಜಂಟಿ ಸಿದ್ಧತೆಗಳನ್ನು ಈಗಲೇ ಆರಂಭಿಸಬೇಕು ಎಂದು ಸಮಾವೇಶ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ. ಕಳೆದ ವರ್ಷ ಇದೇ ದಿನದಂದು ನಡೆದ ಸಾರ್ವತ್ರಿಕ ಮುಷ್ಕರವನ್ನೂ ಮೀರುವ ರೀತಿಯಲ್ಲಿ ಕಾರ್ಮಿಕರು ಇದರಲ್ಲಿ ಭಾಗವಹಿಸುವಂತಾಗಬೇಕು ಎಂದು ಹೇಳಿರುವ ಸಮಾವೇಶದ ಘೋಷಣೆ, ರಾಷ್ಟ್ರೀಯ ಮಟ್ಟದಲ್ಲಿ ಸಾಧಿಸಿರುವ ಐಕ್ಯತೆಯನ್ನು ಬುಡಮಟ್ಟಕ್ಕೆ ಮತ್ತು ಕೆಲಸದ ಸ್ಥಳಗಳ ಮಟ್ಟಕ್ಕೆ ಒಯ್ಯಬೇಕು ಹಾಗೂ ಈ ಐಕ್ಯತೆಯನ್ನು ರೈತರು, ಕೃಷಿ ಕೂಲಿಕಾರರು ಮತ್ತು ಸಮಾಜದ ಇತರ ಶ್ರಮಜೀವಿ ವಿಭಾಗಗಳಿಗೆ ವಿಸ್ತರಿಸಬೇಕು ಎಂದೂ ಕರೆ ನೀಡಿದೆ.

ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮಾವೇಶ ಒಮ್ಮತದಿಂದ ಅಂಗೀಕರಿಸಿದ ಘೋಷಣೆಯಲ್ಲಿ ನಮೂದಿಸಿರುವ ಕಾರ್ಯಕ್ರಮಗಳು ಹೀಗಿವೆ:

1. **ಜೂನ್–ಜುಲೈ 2016ರಲ್ಲಿ ರಾಜ್ಯಗಳು, ಜಿಲ್ಲೆಗಳು ಮತ್ತು ಉದ್ದಿಮೆಗಳ ಮಟ್ಟದಲ್ಲಿ ಜಂಟಿ ಸಮಾವೇಶಗಳು–ಇವುಗಳಲ್ಲಿ ರೈತರು, ಕೃಷಿ ಕೂಲಿಕಾರರು ಮತ್ತು ಇತರ ಜನಸಮೂಹಗಳನ್ನು ಒಳಗೊಳ್ಳಲು ಮುತುವರ್ಜಿ ವಹಿಸುವುದು.**
2. **ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆಯಾಗಿ ರಾಜ್ಯಗಳ ರಾಜಧಾನಿಗಳಲ್ಲಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ದಿನವಿಡೀ ಸಾಮೂಹಿಕ ಧರಣಿ/ ಸತ್ಯಾಗ್ರಹ– 'ಕ್ವಿಟ್ ಇಂಡಿಯಾ'(ಚಲೇಜಾವ್ ಅಥವ ಭಾರತ ಬಿಟ್ಟು ತೊಲಗಿ) ದಿನವಾದ ಆಗಸ್ಟ್ 9, 2016 ರಂದು ಏರ್ಪಡಿಸಿದರೆ ಒಳ್ಳೆಯದು.**
3. **ಸಪ್ಟಂಬರ್ 2, 2016– ಅಖಿಲ ಭಾರತ ಸಾರ್ವತ್ರಿಕ ಮುಷ್ಕರ.**

ಇವಲ್ಲದೆ ರಾಜ್ಯಮಟ್ಟಗಳಲ್ಲಿ ನವೀನ ವಿಧಾನಗಳಲ್ಲಿ ಪ್ರಚಾರ ನಡೆಸುವ ಬಗ್ಗೆ ಚರ್ಚಿಸಿ ನಿರ್ಧರಿಸಬಹುದು ಎಂದು ರಾಷ್ಟ್ರೀಯ ಸಮಾವೇಶ ಹೇಳಿದೆ.

ತಮ್ಮ 12 ಅಂಶಗಳ ಬೇಡಿಕೆಗಳ ಪಟ್ಟಿಯ ಮೇಲೆ ಸರಕಾರದೊಂದಿಗೆ ಮಾತುಕತೆಯ ಮೂಲಕ ಸ್ವೀಕಾರಯೋಗ್ಯ ಇತ್ಯರ್ಥಕ್ಕೆ ಬರಲು ಕೇಂದ್ರೀಯ ಕಾರ್ಮಿಕ ಸಂಘಗಳು ಈಗಲೂ ಸಿದ್ಧವಾಗಿವೆ ಎಂದು ರಾಷ್ಟ್ರೀಯ ಸಮಾವೇಶ ಪುನರುಚ್ಚರಿಸಿದೆ. ಸರಕಾರದೊಂದಿಗೆ ಇಂತಹ ಸಂವಾದ ನಡೆಯಲು ತ್ರಿಪಕ್ಷೀಯ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ಗಳ ಕನಿಷ್ಟ ಕೂಲಿ, ಕಾಂಟ್ರಾಕ್ಟ್ ಕಾರ್ಮಿಕರು ಮತ್ತು ಸ್ಕೀಮ್ ಕಾರ್ಮಿಕರ ಕುರಿತಾದ ಸರ್ವಸಮ್ಮತಿಯ ಶಿಫಾರಸುಗಳ ಪರಿಣಾಮಕಾರಿ ಜಾರಿ ಬಹುಮುಖ್ಯವಾಗುತ್ತದೆ ಎಂದೂ ರಾಷ್ಟ್ರೀಯ ಸಮಾವೇಶ ನೆನಪಿಸಿದೆ.

ಕಾರ್ಮಿಕ ಸಂಘಗಳು ಮತ್ತು ದುಡಿಯುವ ಜನತೆ ತಾವು ಯಾವುದೇ ಸಂಘಟನೆಗಳಿಗೆ ಸೇರಿದ್ದರೂ ಕೂಡ, ಅಂತಹ ಯಾವ ಭೇದ–ಭಾವವೂ ಇಲ್ಲದೆ ಒಂದಾಗಿ ಈ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಬೇಕು ಎಂದು ಕಾರ್ಮಿಕರ ರಾಷ್ಟ್ರೀಯ ಸಮಾವೇಶ ಕರೆ ನೀಡಿದೆ. ಹೋರಾಟಗಳ ಪ್ರಕ್ರಿಯೆಯ ಮೂಲಕ ಮಾತ್ರವೇ ದುಡಿಯುವ ಜನಸಮೂಹಗಳ ಐಕ್ಯತೆಯನ್ನು ರಕ್ಷಿಸಿಕೊಳ್ಳಲು ಮತ್ತು ಬಲಪಡಿಸಿಕೊಳ್ಳಲು ಸಾಧ್ಯ ಎಂದಿರುವ ರಾಷ್ಟ್ರೀಯ ಸಮಾವೇಶ ರೈತರು, ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳ ಶ್ರಮಜೀವಿಗಳು ಈ ಸಪ್ಟಂಬರ್ 2, 2016ರ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಬೇಕು, ಅದರಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದೆ.

ಐಎನ್‌ಟಿಯುಸಿಯ ಅಮಿತ್ ಯಾದವ್, ಎಐಟಿಯುಸಿಯ ಅಮರಜಿತ್ ಕೌರ್, ಹೆಚ್‌ಎಂಎಸ್‌ನ ರಾಜಾ ಶ್ರೀಧರ್, ಸಿಐಟಿಯುನ ಎ.ಕೆ.ಪದ್ಮನಾಭನ್, ಎಐಯುಟಿಯುಸಿಯ ಸತ್ಯವಾನ್ ಸಿಂಗ್, ಎಸ್‌ಇಡಬ್ಲ್ಯುಎನ ಸಂಜನಾ, ಎಐಸಿಸಿಟಿಯುನ ಸಂತೋಷ್ ರಾಯ್, ಯುಟಿಯುಸಿಯ ಶತ್ರುಜಿತ್ ಸಿಂಗ್ ಮತ್ತು ಎಲ್‌ಪಿಎಫ್‌ನ ಮೋಹನ ಕುಮಾರ್ ಸಮಾವೇಶದ ಅಧ್ಯಕ್ಷ ಮಂಡಳಿಯಲ್ಲಿದ್ದರು.

ಐಎನ್‌ಟಿಯುಸಿಯ ಜಿ.ಸಂಜೀವ ರೆಡ್ಡಿ, ಸಿಐಟಿಯುನ ತಪನ್ ಸೇನ್, ಎಐಯುಟಿಯುಸಿಯ ಶಂಕರ್ ಸಾಹಾ, ಎಸ್‌ಇಡಬ್ಲ್ಯುಎನ ಲತಾ ಯಾದವ್, ಎಐಸಿಸಿಟಿಯುನ ಸಂತೋಷ್ ರಾಯ್, ಯುಟಿಯುಸಿಯ ಅಬನಿ ರಾಯ್ ಮತ್ತು ಎಲ್‌ಪಿಎಫ್‌ನ ಸುಬ್ಬರಾಮನ್ ಸಮಾವೇಶವನ್ನು ಉದ್ದೇಶಿಸಿ ಮಾತಡಿದರು.

ಮಾರ್ಚ್ 30, 2016ರಂದು ಈ ರಾಷ್ಟ್ರೀಯ ಸಮಾವೇಶವನ್ನು ನಡೆಸಬೇಕು ಎಂಬ ನಿರ್ಧಾರದಲ್ಲಿ ಭಾಗಿಯಾಗಿದ್ದ ಬಿಎಂಎಸ್ ಇದರಲ್ಲಿ ಭಾಗವಹಿಸಲಿಲ್ಲ. ■

ಪ್ರಧಾನಿಗಳಿಗೆ ಅಂಬೇಡ್ಕರ್ ಮಾತುಗಳ ಬಗ್ಗೆಯೂ ಗೌರವವಿಲ್ಲ, ಸಂವಿಧಾನದ ಬಗ್ಗೆಯೂ ಗೌರವವಿಲ್ಲ –ಸೀತಾರಾಂ ಯೆಚೂರಿ

ಮಾರ್ಚ್ 28 ರಂದು ಉತ್ತರಾಖಂಡ ವಿಧಾನಸಭೆಯಲ್ಲಿ ಮುಖ್ಯಮಂತ್ರಿಗಳ ಬಹುಮತದ ಪರೀಕ್ಷೆ ನಡೆಯಬೇಕಿದ್ದ ಹಿಂದಿನ ದಿನವೇ ಅವರ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಗಿದೆ. ಇದು ಪ್ರಜಾಪ್ರಭುತ್ವದ ಮೇಲೊಂದು ನಾಚಿಕೆಗೆಟ್ಟ ಪ್ರಹಾರ ಮತ್ತು ಸಂವಿಧಾನದ ವಿಧಿ–ವಿಧಾನಗಳ ನಗ್ನ ಉಲ್ಲಂಘನೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ರಾಜ್ಯಪಾಲರ ಕೇಳಿಕೆಯಂತೆ ವಿಧಾನ ಸಭೆಯಲ್ಲಿ ಅವರ ಬಹುಮತದ ಪರೀಕ್ಷೆ ನಡೆಯಲಿದ್ದಾಗ ಈ ಹಸ್ತಕ್ಷೇಪ ಖಂಡಿತಾ ಕಾನೂನುಬಾಹಿರ ಮತ್ತು ಸಂವಿಧಾನಬಾಹಿರ ಎಂದು ಸಿಪಿಐ(ಎಂ) ಹೇಳಿದೆ.

ಸದಾ ಅಂಬೇಡ್ಕರ್ ಬಗ್ಗೆ ದೊಡ್ಡದಾಗಿ ಪ್ರವಚನ ಮಾಡುವ ಹವ್ಯಾಸ ಬೆಳೆಸಿಕೊಂಡಿರುವ, ಸಂವಿಧಾನ ಮಾತ್ರವೇ ತನ್ನ ಪವಿತ್ರ ಗ್ರಂಥ ಎಂದು ಮಾತಿನ ಹೊಳೆಯನ್ನೇ ಹರಿಸುವ ಪ್ರಧಾನ ಮಂತ್ರಿಗಳಿಗೆ ವಾಸ್ತವವಾಗಿ ಅಂಬೇಡ್ಕರ್‌ರವರ ಮಾತುಗಳ ಬಗ್ಗೆಯೂ ಗೌರವವಿಲ್ಲ, ಸಂವಿಧಾನಿಕ ಔಚಿತ್ಯತೆ ಬಗ್ಗೆಯೂ ಗೌರವವಿಲ್ಲ ಎಂಬುದನ್ನು ಇದು ತೋರಿಸುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಟಿಪ್ಪಣಿ ಮಾಡಿದ್ದಾರೆ.

ಒಂದು ರಾಜ್ಯ ಸರಕಾರವನ್ನು ವಜಾ ಮಾಡುವ ತುರ್ತು ಅಧಿಕಾರ ಕೊಡುವ, ಮುಂದೆ ಸಂವಿಧಾನದ 356ನೇ ಕಲಮು ಆದ ವಿಷಯದ ಬಗ್ಗೆ ಸಂವಿಧಾನ ಸಭೆಯಲ್ಲಿ ಬಹಳಷ್ಟು ಚರ್ಚೆ ನಡೆದಿತ್ತು. ಆ ಚರ್ಚೆಗಳಿಗೆ ಉತ್ತರಿಸುತ್ತ ಡಾ. ಬಿ,ಆರ್.ಅಂಬೇಡ್ಕರ್‌ರವರು "ಇಲ್ಲಿ ವ್ಯಕ್ತವಾದ ಭಾವನೆಗಳು ನನ್ನ ಭಾವನೆಗಳು ಕೂಡ... ಇಂತಹ ಕಲಮುಗಳನ್ನು ಎಂದೂ ಕ್ರಿಯೆಗಿಳಿಸಬಾರದು, ಅದು ಒಂದು ಸತ್ತ ಅಕ್ಷರವಾಗಿ ಉಳಿಯಬೇಕು ಎಂದು ನಿರೀಕ್ಷಿಸುವುದೇ ಸರಿಯಾದ ಸಂಗತಿ. ಅದನ್ನು ಕ್ರಿಯೆಗೆ ಇಳಿಸಬೇಕಲೇ ಬೇಕಾಗಿ ಬಂದರೆ, ಈ ಎಲ್ಲ ಅಧಿಕಾರಗಳು ಇರುವ ರಾಷ್ಟ್ರಪತಿಗಳು ಪ್ರಾಂತಗಳ ಆಡಳಿತವನ್ನು ಅಮಾನತು ಮಾಡುವ ಮೊದಲು ಸರಿಯಾದ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ಆಶಿಸುತ್ತೇನೆ. ಮೊತ್ತಮೊದಲಿಗೆ ಅವರು ತಪ್ಪು ಮಾಡಿರುವ ಪ್ರಾಂತ್ಯಕ್ಕೆ, ಸಂಗತಿಗಳು ಸಂವಿಧಾನದಲ್ಲಿ ಆಶಿಸಿರುವ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ಒಂದು ಎಚ್ಚರಿಕೆಯನ್ನಷ್ಟೇ ಕೊಡುತ್ತಾರೆ ಎಂಬುದು ನನ್ನ ನಿರೀಕ್ಷೆ" ಎಂದಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ನೆನಪಿಸಿದ್ದಾರೆ.

ವಿಧಾನ ಸಭೆಯಲ್ಲಿ ಬಲಪರೀಕ್ಷೆ ನಡೆಯುವ ಕೆಲವೇ ಗಂಟೆಗಳ ಮೊದಲು ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿರುವುದು ಪ್ರಧಾನ ಮಂತ್ರಿಗಳ ಅಥವ ಬಿಜೆಪಿಯ ಗೋಸುಂಬೆತನವನ್ನಷ್ಟೇ ಪ್ರದರ್ಶಿಸುತ್ತಿಲ್ಲ, ಸಂವಿಧಾನದ ಮೇಲೆ ಅಕ್ಷರಶಃ ಮನಬಂದಂತೆ ಸವಾರಿ ಮಾಡುವ ಅವರ ತಿರಸ್ಕಾರವನ್ನು ಇದು ಪ್ರದರ್ಶಿಸಿದೆ ಎಂದು ಯೆಚೂರಿಯವರು ಖೇದ ವ್ಯಕ್ತಪಡಿಸಿದ್ದಾರೆ.

ದೇಶದ ಸರ್ವೋಚ್ಚ ನ್ಯಾಯಾಲಯ ಮಾರ್ಚ್ 11, 1994ರಲ್ಲಿ ನೀಡಿದ, ಎಸ್ ಆರ್ ಬೊಮ್ಮಾಯಿ ತೀರ್ಪು ಎಂದು ಈಗ ಪ್ರಸಿದ್ಧವಾಗಿರುವ ತೀರ್ಪಿನಲ್ಲಿ ಸಂವಿಧಾನದ ಪ್ರಕಾರ ರಾಷ್ಟ್ರಪತಿ ಆಳ್ವಿಕೆಯನ್ನು ಯಾವ ಪರಿಸ್ಥಿತಿಗಳಲ್ಲಿ ತರಬಹುದು ಎಂದು ವಿವರವಾಗಿ ವಿಶದಪಡಿಸಿದೆ ಎಂಬುದನ್ನೂ ಯೆಚೂರಿಯವರು ನೆನಪಿಸಿದ್ದಾರೆ. ಈ ತೀರ್ಪಿನ ನಂತರ ರಾಷ್ಟ್ರಪತಿ ಆಳ್ವಿಕೆಯನ್ನು ಪರಿಶೀಲಿಸುವ ಮೊದಲು ಕೇಂದ್ರ ಸರಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಯಾವ ಗೊಂದಲ, ಸಂದೇಹಗಳಿಗೂ ಅವಕಾಶ ಉಳಿದಿಲ್ಲ ಎನ್ನುತ್ತ ಅವರು ತೀರ್ಪಿನ ಮೂರು ಆಂಶಗಳತ್ತ ಗಮನ ಸೆಳೆದಿದ್ದಾರೆ:

ಪರಿಚ್ಛೇದ 118... "ರಾಜ್ಯಪಾಲರಿಗೆ, ಶಾಸಕರ ನಡುವೆ ಕುದುರೆ ವ್ಯಾಪಾರ ನಡೆಯುತ್ತಿದೆ ಎಂದು ಎಲ್ಲಿಂದ ಮಾಹಿತಿ ದೊರೆಯಿತೋ ಗೊತ್ತಿಲ್ಲ. ಅದು ನಡೆದಿದೆ ಎಂದಿಟ್ಟುಕೊಂಡರೂ, ಅವರು ಅನುಸರಿಸಬೇಕಾಗಿದ್ದ ಸರಿಯಾದ ಮತ್ತು ಉಚಿತವಾದ ದಾರಿಯೆಂದರೆ, ರಾಜ್ಯಪಾಲರು ಆರಿಸಿದ ಯಾವುದೇ ದಿನದಂದು ಪರೀಕ್ಷೆಗೆ ಮುಖ್ಯಮಂತ್ರಿಗಳು ಸಿದ್ಧವಾಗಿರುವಾಗ, ಆ ಪರೀಕ್ಷೆ ಸದನದಲ್ಲಿ ನಡೆಯುವ ವರೆಗೆ ಕಾಯುವುದು. ನಿಜವಾಗಿ ಹೇಳಬೇಕೆಂದರೆ, ರಾಜ್ಯ ಸಂಪುಟವೇ ಎಪ್ರಿಲ್ 27, 1989ರಂದು, ಅಂದರೆ ರಾಜ್ಯಪಾಲರು ರಾಷ್ಟ್ರಪತಿಗಳಿಗೆ ತಮ್ಮ ವರದಿ ಕಳಿಸಲು ಆರಿಸಿಕೊಂಡ ದಿನಕ್ಕಿಂತ ಒಂದು ವಾರದ ಮೊದಲಷ್ಟೇ ವಿಧಾನಸಭೆಯನ್ನು ಕರೆಯುವ ಮುತುವರ್ಜಿ ವಹಿಸಿದ್ದರು."

ಪರಿಚ್ಛೇದ 119... "ಇದಕ್ಕೆ ಸಂಬಂಧಪಟ್ಟಂತೆ, ಕೆಲವು ಶಾಸಕರು ಮಂತ್ರಿಮಂಡಲಕ್ಕೆ ಬೆಂಬಲವನ್ನು ಹಿಂತೆಗೆದುಕೊಂಡಿದ್ದೇವೆ ಎಂದು ಹೇಳಿಕೊಳ್ಳುವ ಎಲ್ಲ ಸಂದರ್ಭಗಳಲ್ಲೂ, ಮಂತ್ರಿಮಂಡಲದ ಶಕ್ತಿಯನ್ನು

ಪುಟ 7 ಕ್ಕೆ

aAiAvEAzAgE EzÀÄ



ಉಪಜಾತಿಗಳ ನಿರ್ಮೂಲನೆ ಜಾತಿಗಳನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ, ಇನ್ನಷ್ಟು ಶಕ್ತಿಶಾಲಿ ಮತ್ತು ಕಿಡಿಗೇಡಿಯಾಗಿಸುತ್ತದೆ. ಆದ್ದರಿಂದ ಈ ಪರಿಹಾರ ಕಾರ್ಯಸಾಧ್ಯವೂ ಅಲ್ಲ, ಪರಿಣಾಮಕಾರಿಯೂ ಅಲ್ಲ.

–ಡಾ. ಬಿ. ಆರ್. ಅಂಬೇಡ್ಕರ್

ವಿದ್ಯುತ್ ಬೆಲೆ ಏರಿಕೆ – ಗಾಯದ ಮೇಲೆ ಬರೆ!

ಸಂಪಾದಕೀಯ

ಏಪ್ರಿಲ್ 1 ರಂದು ಜನತೆಯನ್ನು ಕೇಂದ್ರ/ರಾಜ್ಯ ಸರಕಾರಗಳು ಯಾವಾಗಲೂ 'ಫೂಲ್' ಮಾಡುತ್ತವೆ. ಅಂದೇ ಎರಡೂ ಸರಕಾರಗಳು ಏರಿಸಿದ ತೆರಿಗೆ, ಕರ ಇತ್ಯಾದಿ ಜಾರಿಗೆ ಬರುತ್ತವೆ. ಈ ಬಾರಿ ವಿವಿಧ ಎಸ್ಕಾಂಗಳು ಸರಕಾರದ ಜತೆ ಸೇರಿವೆ. ವಿದ್ಯುತ್ ಬೆಲೆಯನ್ನು ಪ್ರತಿ ಯುನಿಟಿಗೆ 15ರಿಂದ 50 ಪೈಸೆಯಷ್ಟು ಏರಿಸಿವೆ. ಈಗಾಗಲೇ ತೈಲ ಉತ್ಪನ್ನಗಳು ಮತ್ತಿತರ ಹಲವು ಅಗತ್ಯ ವಸ್ತುಗಳ ಬೆಲೆ ಏರಿಕೆಯ ಗಾಯದ ಮೇಲೆ ವಿದ್ಯುತ್ ಬೆಲೆ ಏರಿಕೆ ಬರೆ ಎಳೆದಂತೆ ಆಗಿದೆ. ವಿವಿಧ ಎಸ್ಕಾಂಗಳು ಪ್ರತಿ ಯುನಿಟಿಗೆ 1.02 ರೂ. ಏರಿಸುವಂತೆ ಬೆಲೆ ನಿಬಂಧನೆ ಮಾಡುವ ಕೆ.ಇ.ಆರ್.ಸಿ.ಗೆ ಮನವಿ ಸಲ್ಲಿಸಿದ್ದವು. ವಿದ್ಯುತ್ ಬೆಲೆ ವಿವಿಧ ವಿಭಾಗಗಳ ಗ್ರಾಹಕರಿಗೆ ಸರಾಸರಿ ಸುಮಾರು ಶೇ. 9 ರಷ್ಟು ಏರಿಸಲಾಗಿದೆ. ಇದು ಕಳೆದ ಸಾಲಿನ ಏರಿಕೆಯ ಎರಡು ಪಟ್ಟು.

ಗೃಹಬಳಕೆ ದರವನ್ನು ಪ್ರತಿ ಯುನಿಟಿಗೆ 30ರಿಂದ 50 ಪೈಸೆಯಷ್ಟು, ಕೈಗಾರಿಕಾ ಬಳಕೆಗೆ 15ರಿಂದ 45 ಪೈಸೆಯಷ್ಟು ಮತ್ತು ವಾಣಿಜ್ಯ ಬಳಕೆ ದರವನ್ನು 20ರಿಂದ 50 ಪೈಸೆಯಷ್ಟು ಏರಿಸಲಾಗಿದೆ. ನೀರಾವರಿ ಪಂಪ್ ಸೆಟ್ ಗ್ರಾಹಕರನ್ನು ಹೊರತು ಪಡಿಸಿ ಎಲ್ಲ ವಿಭಾಗಗಳಿಗೂ ಪ್ರತಿ ಯುನಿಟಿಗೆ ಸರಾಸರಿ 48 ಪೈಸೆಯಷ್ಟು ಬೆಲೆ ಏರಿಸಲಾಗಿದೆ. ಈಗಾಗಲೇ ತೀವ್ರ ಲೋಡ್ ಶೆಡ್ಡಿಂಗ್ ಮತ್ತು ಕಳಪೆ ಗುಣಮಟ್ಟದ ಗಾಯದ ಮೇಲೆ ಎಸ್ಕಾಂಗಳು ಈ ಬೆಲೆಏರಿಕೆಯ ಬರೆ ಎಳೆದಿವೆ. ಹಿಂದಿನ ನಿಯಂತ್ರಣ ಆಸ್ತಿ ಬಾಬ್ತು 1105 ಕೋಟಿ ವಸೂಲಾಗದಿರುವುದರಿಂದ 20 ಪೈಸೆ, ಕಲ್ಲಿದ್ದಲು ಮೇಲಿನ ಸುಂಕ ಏರಿಕೆ ತೂಗಿಸಿಕೊಳ್ಳಲು 8 ಪೈಸೆ, ಶರಾವತಿ ಜಲವಿದ್ಯುತ್ ಘಟಕದ ದುರಸ್ತಿಯಿಂದ ದುಬಾರಿ ವಿದ್ಯುತ್ ಖರೀದಿ ಪರಿಣಾಮವಾಗಿ 5 ಪೈಸೆ, ಹಾಗೂ ಶಾಖೋತ್ಪನ್ನ ಮೂಲಗಳ ಸೇರ್ಪಡೆಯಿಂದ ವಿದ್ಯುತ್ ಖರೀದಿ ವೆಚ್ಚ/ಎಸ್ಕಾಂಗಳ ಕಾರ್ಯಾಚರಣೆ ವೆಚ್ಚ ಏರಿಕೆಗೆ 15 ಪೈಸೆ ಸೇರಿ ಒಟ್ಟು 48 ಪೈಸೆ ಏರಿಸಬೇಕಾಗಿದೆ ಎಂದು ಕೆ.ಇ.ಆರ್.ಸಿ. ಹೇಳಿದೆ. ಬೆಲೆ ಏರಿಕೆಗೆ ಎಸ್ಕಾಂ ಮತ್ತು ಕೆ.ಇ.ಆರ್.ಸಿ. ಕೊಟ್ಟಿರುವ ಕಾರಣಗಳಲ್ಲಿ ದೊಡ್ಡ ಭಾಗ ವಿದ್ಯುತ್ ಉತ್ಪಾದನೆ, ವಿತರಣೆಯಲ್ಲಿ ಇರುವ ಅದಕ್ಷತೆ, ನಿರ್ಲಕ್ಷದಿಂದ ಆದವುಗಳು. ಇದಕ್ಕಾಗಿ ಗ್ರಾಹಕರನ್ನು ಶಿಕ್ಷಿಸುವುದು ಯಾವ ನ್ಯಾಯ?

ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆಯನ್ನು ಗಮನಾರ್ಹವಾಗಿ ಕಡಿಮೆ ಮಾಡಲು ಹಲವು ದಶಕಗಳ ನಂತರವೂ ಗಂಭೀರ ಪ್ರಯತ್ನ ನಡೆಸದಿರುವುದು, ಕೊರತೆ ವಿದ್ಯುತ್ ಖರೀದಿಗೆ ಅಲ್ಪಾವಧಿ ಬದಲು ದೀರ್ಘಾವಧಿ ನೀತಿ ರೂಪಿಸುವುದು, ಬೇಡಿಕೆ–ಪೂರೈಕೆ ಬಗ್ಗೆ ನಿಖರ ಯೋಜನೆ ಮೇಲುಸ್ತುವಾರಿ, ವಿದ್ಯುತ್ ಸೋರಿಕಗೆ ತಡೆ, ಮಿತಬಳಕೆ ಮುಂತಾದ ಹಲವು ಕ್ರಮಗಳನ್ನು ಎಸ್ಕಾಂಗಳು ಮುತುವರ್ಜಿಯಿಂದ ಕೈಗೊಳ್ಳಬೇಕು ಎಂದೂ ಕೆ.ಇ.ಆರ್.ಸಿ. ವಿಧಿಸಿದೆ. ಈ ಕ್ರಮಗಳನ್ನು ಸರಿಯಾಗಿ ಜಾರಿ ಮಾಡಿದ್ದರೆ ಈ ಬೆಲೆ ಏರಿಕೆಯ ಅಗತ್ಯ ಇರುತ್ತಿರಲಿಲ್ಲ.

ಈ ವಿದ್ಯುತ್ ಬೆಲೆ ಏರಿಕೆಯನ್ನು ಹಿಂತೆಗೆಯಬೇಕು. ಇಲ್ಲದಿದ್ದರೆ ಅದರ ವಿರುದ್ಧ ತೀವ್ರ ಚಳುವಳಿ ಹೂಡಬೇಕು.

ಮಾಣಿಪ್ಪಾಡಿ ವರದಿ ಬಿಕ್ಕಟ್ಟು

ವಕ್ಫ್ ಆಸ್ತಿ ದುರ್ಬಳಕೆ ಸಂಬಂಧ ನೇಮಿಸಲಾಗಿದ್ದ ಅನ್ವರ್ ಮಾಣಿಪ್ಪಾಡಿ ವರದಿಯನ್ನು ಸದನದಲ್ಲಿ ಮಂಡಿಸುವ ವಿಷಯದಲ್ಲಿ ಸಿದ್ಧರಾಮಯ್ಯ ಸರಕಾರಕ್ಕೆ ಇನ್ನೊಂದು ಬಿಕ್ಕಟ್ಟು ಉಂಟಾಗಿದೆ. ಮಾರ್ಚ್ 2012ರಲ್ಲಿ ರಾಜ್ಯ ಅಲ್ಪಸಂಖ್ಯಾತರ ಕಮಿಶನಿನ ಅಧ್ಯಕ್ಷರಾಗಿದ್ದ ಅನ್ವರ್ ಮಾಣಿಪ್ಪಾಡಿ ಕರ್ನಾಟಕ ವಕ್ಫ್ ಬೋರ್ಡಿನ ಕೆಲಸಗಳ ಬಗ್ಗೆ ಅಧ್ಯಯನ ಮಾಡಿ ಆಗಿನ ಬಿಜೆಪಿ ಸರಕಾರಕ್ಕೆ ಒಂದು ವಿಶೇಷ ವರದಿ ಸಲ್ಲಿಸಿದ್ದರು. ಈಗಿನ ಸರಕಾರ ಕಮಿಶನಿನ ಶಿಫಾರಸಿನ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ಮಂಡಿಸಿತು. ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷ ಬಿಜೆಪಿಯ ಸದಸ್ಯರು ತೆಗೆದುಕೊಂಡ ಕ್ರಮಗಳ ಬಗ್ಗೆ ಮಾತ್ರವಲ್ಲ, ಇಡೀ ಮಾಣಿಪ್ಪಾಡಿ ವರದಿ ಮಂಡಿಸಬೇಕೆಂದು ಆಗ್ರಹ ಪಡಿಸಿದರು. ಪರಿಷತ್ತಿನ ಸಭಾಪತಿ ಡಿ.ಎಚ್.ಶಂಕರಮೂರ್ತಿ ಇಡೀ ವರದಿ ಮಂಡಿಸಬೇಕೆಂದು ರೂಲಿಂಗ್ ಕೊಟ್ಟರು. ಇದಕ್ಕೆ ಮೊದಲಿಗೆ ಒಪ್ಪಿಕೊಂಡ ಸರಕಾರ ಅದನ್ನು ಮಾಡದಿದ್ದಾಗ ಬಿಜೆಪಿ ಸದಸ್ಯರು ಪರಿಷತ್ತಿನಲ್ಲಿ ಕಲಾಪ ನಡೆಯದಂತೆ ಗಲಭೆ ಮಾಡಿದರು.

ಪರಿಷತ್ತಿನಲ್ಲಿ ಬೇರೆ ಯಾವುದೇ ಕಲಾಪಗಳಿಗೆ ಬಿಜೆಪಿ ಸದಸ್ಯರ ಸತತ ತಡೆಯಿಂದಾಗಿ ಪದೇ ಪದೇ ಮುಂದಕ್ಕೆ ಹಾಕಲಾದ ಪರಿಷತ್ತಿನ ಪ್ರಸ್ತುತ ಅಧಿವೇಶನವನ್ನು 4 ದಿನಗಳ ನಂತರ 1 ದಿನ ಮೊಟಕುಗೊಳಿಸಿ ಮುಗಿಸಲಾಯಿತು. ಈ ನಡುವೆ ಸಭಾಪತಿ ರೂಲಿಂಗ್ ಉಲ್ಲಂಘಿಸಿದ ಆಳುವ ಪಕ್ಷದ ಸದಸ್ಯರ ಮೇಲೆ ಹಕ್ಕು ಚ್ಯುತಿ ನಿರ್ಣಯ ಮಂಡಿಸುವ ಬೆದರಿಕೆ ಹಾಕಲಾಯಿತು. ಪರಿಷತ್ ಸಭಾಪತಿ ರಾಜ್ಯಪಾಲರನ್ನು ಭೇಟಿ ಮಾಡಿ ಈ ಬಗ್ಗೆ ಅವರಿಗೆ ಮಾಹಿತಿ ಕೊಟ್ಟರು. ರಾಜ್ಯಪಾಲರು ಕಲಾಪದ ವರದಿ ಕೇಳಿದರು. ಪರಿಸ್ಥಿತಿ ಸಾಂವಿಧಾನಿಕ ಬಿಕ್ಕಟ್ಟಿಗೆ ಹತ್ತಿರ ಬಂದಿತ್ತು.

ಮಾಣಿಪ್ಪಾಡಿ ವರದಿ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗೆಗಿನ ವರದಿ ಅದು ಕೊಟ್ಟಿರುವ 16 ಶಿಫಾರಸುಗಳಲ್ಲಿ ಹೆಚ್ಚಿನವನ್ನು ರಾಜ್ಯದ ಅಧಿಕಾರದ ಅಳವಿಗೆ ಬರುವುದಿಲ್ಲ ಎಂತಲೋ, ಕೋರ್ಟಿನ ಮುಂದೆ ನ್ಯಾಯ ಪ್ರಕ್ರಿಯೆಯಲ್ಲಿ ಇದೇ ಅಂತಲೋ ತಿರಸ್ಕರಿಸಿದೆ. ವಕ್ಫ್ ಬೋರ್ಡಿನ ಆಸ್ತಿಯ ಅರ್ಧದಷ್ಟನ್ನು ಬೋರ್ಡಿನ ಸದಸ್ಯರು ಮತ್ತು ರಾಜಕಾರಣಿಗಳ ದುರ್ಬಳಕೆ (ಮಾರಾಟ ಅಥವಾ ಹಸ್ತಾಂತರ) ಮಾಡಲು ಬಿಟ್ಟಿದೆ. ಸುಮಾರು ರೂ. 2 ಲಕ್ಷ ಕೋಟಿಯಷ್ಟು ಬೆಲೆ ಬಾಳುವ 27 ಸಾವಿರ ಎಕರೆಯಷ್ಟು ವಕ್ಫ್ ಆಸ್ತಿಯ ದುರ್ಬಳಕೆ ಆಗಿದೆ ಎಂದು ಮಾಣಿಪ್ಪಾಡಿ ವರದಿ ತಿಳಿಸಿದೆ ಎಂದು ಪತ್ರಿಕಾ ವರದಿಗಳೂ ಹೇಳಿದ್ದವು.

ವಕ್ಫ್ ಬೋರ್ಡಿನಲ್ಲಿ ನಡೆದಿರುವ ಭ್ರಷ್ಟಾಚಾರದ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಬೇಕೆಂದು, ಆ ವರೆಗೆ ವಕ್ಫ್ ಬೋರ್ಡನ್ನು ಅಮಾನತಿನಲ್ಲಿ ಇಡಬೇಕು ಎಂದು ಮಾಣಿಪ್ಪಾಡಿ ವರದಿ ಶಿಫಾರಸು ಮಾಡಿದೆ. ಆ ಬಗ್ಗೆ, ಇದು ರಾಜ್ಯ ಸರಕಾರದ ಅಳವಿಗೆ ಬರುವುದಿಲ್ಲ. ಏಕೆಂದರೆ ವಕ್ಫ್ ಬೋರ್ಡನ್ನು ರಚಿಸಿರುವುದು ಕೇಂದ್ರ ಸರಕಾರದ ಕಾನೂನಿನ ಪ್ರಕಾರ ಎಂದು ಸರಕಾರದ ವರದಿ ಹೇಳಿದೆ. ವಕ್ಫ್ ಆಸ್ತಿಯ ಆಡಿಟ್ ಮಾಡಲು ಮಾಣಿಪ್ಪಾಡಿ ಶಿಫಾರಸು ಮಾಡಿದ್ದರು. ಆಢಿಟ್‌ಗೆ ವಕ್ಫ್ ಕಾನೂನಿನಲ್ಲಿ ಅವಕಾಶವಿಲ್ಲ. ಆದರೆ ಸರಕಾರದ ಸರ್ವೇ ಮತ್ತು ಸೆಟ್ಲ್‌ಮೆಂಟ್ ಇಲಾಖೆ ವಕ್ಫ್ ಆಸ್ತಿಯ ಸರ್ವೇ ಮಾಡುತ್ತಿದ್ದು ಅದು ಶೇ. 60ರಷ್ಟು ಮುಗಿದಿದೆ ಎಂದಿದೆ ಸರಕಾರ.

ಒತ್ತುವರಿಯಾದ ವಕ್ಫ್ ಆಸ್ತಿಯನ್ನು ವಶ ಪಡಿಸಿಕೊಳ್ಳಲು ಒಂದು ಕಾರ್ಯದಳ ನೇಮಿಸಬೇಕು ಎಂದು ಶಿಫಾರಸು ಮಾಡಲಾಗಿತ್ತು. ಒತ್ತುವರಿಯಾದ ಆಸ್ತಿಯನ್ನು ವಶ ಪಡಿಸಿಕೊಳ್ಳಲು ಬಿ.ಡಿ.ಎ. ಮತ್ತು ಬಿ.ಬಿ.ಎಂ.ಪಿ.ಗೆ ಈಗಾಗಲೇ ಅಧಿಕಾರ ಇರುವುದರಿಂದ ಇನ್ನೊಂದು ಕಾರ್ಯದಳ ನೇಮಿಸುವ ಅಗತ್ಯ ಇಲ್ಲ ಎಂಬುದು ಇದಕ್ಕೆ ಸರಕಾರದ ಉತ್ತರ. ವಕ್ಫ್ ಆಸ್ತಿ ದುರ್ಬಳಕೆಗೆ ಕಾರಣರಾದ ಬೋರ್ಡಿನ ಮಾಜಿ ಅಧ್ಯಕ್ಷ ಅಬ್ದುಲ್ ರಿಯಾಜ್ ಖಾನ್ ಅವರ ವಿರುದ್ಧ ಕ್ರಿಮಿನಲ್ ಕ್ರಮ ಕೈಗೊಳ್ಳಬೇಕೆಂಬ ಶಿಫಾರಸಿನ ಬಗ್ಗೆ, ಇದು ಈಗ ನ್ಯಾಯಾಂಗದ ಮುಂದೆ ಇದೆ ಎಂಬುದು ಸರಕಾರದ ಉತ್ತರ.

ಇಡೀ ಮಾಣಿಪ್ಪಾಡಿ ವರದಿಯನ್ನು ತಿರಸ್ಕರಿಸುವ ಅಧಿಕಾರ ಸರಕಾರಕ್ಕೆ ಇದೆ. ವರದಿಯನ್ನು ಇಡಿಯಾಗಿ ತಿರಸ್ಕರಿಸದೆ ಅದರ ಬಗ್ಗೆ ಕ್ರಮ ಕೈಗೊಂಡ ವರದಿಯನ್ನು ಮಂಡಿಸಲು ಹೋಗಿದ್ದು, ಒಂದು ಹಂತದಲ್ಲಿ ಇಡೀ ವರದಿಯನ್ನು ಮಂಡಿಸಲು ಒಪ್ಪಿಕೊಂಡಿದ್ದು ಸರಕಾರವನ್ನು ಈ ಬಿಕ್ಕಟ್ಟಿಗೆ ಸಿಕ್ಕಿಸಿದೆ. ಸಭಾಪತಿ ರೂಲಿಂಗ್ ಕೊಟ್ಟ ಮೇಲೂ ಅದನ್ನು ಪುನರ್ವಿಮರ್ಶೆ ಮಾಡಲು ಕೇಳಬಹುದು ಎಂದು ಕಾನೂನು ತಜ್ಞರು ಹೇಳುತ್ತಾರೆ. ಆದರೆ ಪ್ರಶ್ನೆ ಕಾನೂನು, ನಿಯಮಗಳದ್ದು ಮಾತ್ರವಲ್ಲ. ಸರಕಾರ ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳಲು ಎಷ್ಟರ ಮಟ್ಟಿಗೆ ಬದ್ಧವಾಗಿದೆ ಎಂಬ ರಾಜಕೀಯ ಪ್ರಶ್ನೆ ಇಲ್ಲಿದೆ. ವಕ್ಫ್ ಬೋರ್ಡಿನ ಆಸ್ತಿ ದುರ್ಬಳಕೆ ವ್ಯಾಪಕವಾಗಿ ಆಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಬೆಂಗಳೂರಿನ ವೆಸ್ಟ್ ಎಂಡ್ ಹೊಟೆಲ್ ಇರುವ ಜಾಗ ವಕ್ಫ್ ಬೋರ್ಡಿನ ಆಸ್ತಿಯಾಗಿದ್ದು ಅದನ್ನು ಖಾಸಗಿಯವರಿಗೆ ಮೂರು ಕಾಸಿಗೆ 99 ವರ್ಷಗಳ ಲೀಸ್ ಕೊಡಲಾಗಿತ್ತು ಎಂಬುದು ಸಾರ್ವಜನಿಕ ಗುಟ್ಟು. ಇಂತಹ ಹಲವಾರು ಪ್ರಕರಣಗಳು ರಾಜ್ಯದ ತುಂಬಾ ನಡೆದಿವೆ ಎಂದು ಹೇಳಲಾಗಿದೆ.

ಮಾಣಿಪ್ಪಾಡಿ ವರದಿ ಹಲವು ಹಿರಿಯ ಕಾಂಗ್ರೆಸಿಗರನ್ನು ವಕ್ಫ್ ಆಸ್ತಿ ದುರ್ಬಳಕೆ ಸಂಬಂಧ ಹೆಸರಿಸಿರುವುದೇ ಅದನ್ನು ಮಂಡಿಸದಿರಲು ಕಾರಣ ಎಂಬ ಭಾವನೆ ವ್ಯಾಪಕವಾಗಿದೆ. ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸಿ ಹೆಚ್ಚು ಕಡಿಮೆ ಮುಚ್ಚಿ ಎಸಿಬಿ ಸ್ಥಾಪಿಸ ಹೊರಟಿರುವುದರಿಂದ ಈ ಸರಕಾರ ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳಲು ತಯಾರಿಲ್ಲ ಎಂಬ ಭಾವನೆ ಗಟ್ಟಿಯಾಗುತ್ತಿದೆ. ಬಿಜೆಪಿ ಸರಕಾರದ ಸಹಿಸಲಾಗದ ಕೋಮುವಾದ ಮತ್ತು ಭ್ರಷ್ಟಾಚಾರದಿಂದ ಬೇಸತ್ತು ಜನತೆ ಸಿದ್ಧರಾಮಯ್ಯನವರ ನಾಯಕತ್ವದ ಕಾಂಗ್ರೆಸ್ ಸರಕಾರ ಚುನಾಯಿಸಿದ್ದರು ಎಂಬುದನ್ನು ಅವರು ಮರೆಯಬಾರದು. ಆದ್ದರಿಂದ ಈ ಎರಡೂ ಅಂಶಗಳ ಬಗ್ಗೆ ಜನತೆ ಸ್ಪಷ್ಟ ದಿಟ್ಟ ಕ್ರಮ ಬಯಸುತ್ತಾರೆ. ಇವರೆಡರಲ್ಲೂ ಸರಕಾರ ಪದೇ ಪದೇ ಎಡವುತ್ತಿದೆ. ಆದ್ದರಿಂದ ಮಾಣಿಪ್ಪಾಡಿ ವರದಿಯನ್ನು ಮಂಡಿಸುವುದು ಮತ್ತು ಎಸಿಬಿ ರಚನೆಯ ಕ್ರಮ ವಾಪಸು ತೆಗೆದುಕೊಳ್ಳಬೇಕು. ಆದರೆ ಸರಕಾರ ಇದಕ್ಕೆ ತಯಾರಿಲ್ಲ. ಇದಕ್ಕಾಗಿ ಸಾರ್ವಜನಿಕ ಒತ್ತಡ ಅಗತ್ಯವಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ವೆಬ್ ಸೈಟಿನಲ್ಲಿ ಏನಿದೆ?

janashakthi.co.in

1. ಜನವಿರೋಧಿ ಬಜೆಟ್ ಖಂಡಿಸಿ ತುಮಕೂರಿನಲ್ಲಿ ಪ್ರತಿಭಟನೆ
2. ಹಾವೇರಿಯಲ್ಲಿ ಎಸ್‌ಎಫ್‌ಐ ವತಿಯಿಂದ ಮೈಲಾರ ಮಹದೇವಪ್ಪ ಹುತಾತ್ಮ ದಿನಾಚರಣೆ
3. ಪಿಯು ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ : ಹಾವೇರಿ
4. ಉಡುಪಿ ಜಿಲ್ಲಾ ರೈತರ ರಕ್ಷಣೆಗೆ ಧಾವಿಸಲು ಮುಖ್ಯಮಂತ್ರಿಗಳಿಗೆ ಸಿಪಿಐ(ಎಂ) ಮನವಿ
5. ಸಿಗರನಹಳ್ಳಿ ಜಾತ್ರೆಗೆ ದಲಿತರ ಪ್ರವೇಶಕ್ಕೆ ಆಗ್ರಹ : ಹಾಸನ
6. ಸಹಯಾನದಿಂದ ಜಲಹಳ್ಳಿ ವೆಂಕಟೇಶ್ ರಾವ್‌ರವರಿಗೆ ಸನ್ಮಾನ : ಉತ್ತರ ಕನ್ನಡ

ನಾಳಿನ ಕಾರ್ಯಕ್ರಮಗಳು :

1. **ಏಪ್ರಿಲ್ 11:** ಕೇಂದ್ರ ಸರ್ಕಾರಿ ನೌಕರರ; ರೈಲ್ವೇ ಮತ್ತು ರಕ್ಷಣಾ ಕ್ಷೇತ್ರದ ನೌಕರರ ಮುಷ್ಕರ.
2. **ಏಪ್ರಿಲ್ 8 ರಿಂದ 14:** ದೇಶವ್ಯಾಪ್ತಿ ರೈತರ ಪ್ರತಿಭಟನಾ ವಾರಾಚರಣೆ: ಎಐಕೆಎಸ್
3. **ಏಪ್ರಿಲ್ 1 ರಿಂದ 12:** ರಾಜ್ಯಾದ್ಯಂತ ಅಸ್ಪೃಶ್ಯತಾ ವಿರೋಧಿ ಜನಾಂದೋಲನ: ದಲಿತ ಹಕ್ಕುಗಳ ಸಮಿತಿ
4. **ಏಪ್ರಿಲ್ 13:** 'ಸಮಾನತ ಸಂಕಲ್ಪ ದಿನ' ಅಂಗವಾಗಿ ಸಾಮೂಹಿಕ ಉಪವಾಸ ಸತ್ಯಾಗ್ರಹ. ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ: ದಲಿತ ಹಕ್ಕುಗಳ ಸಮಿತಿ
5. **ಏಪ್ರಿಲ್ 14:** ಡಾ॥ಬಿ.ಆರ್.ಅಂಬೇಡ್ಕರ್ 125ನೇ ಜನ್ಮದಿನ. ವಿವಿದೆಡೆ ಕಾರ್ಯಕ್ರಮಗಳು.

ಅಂಬೇಡ್ಕರ್ 125 ವೀಶೇಷಾಂಕ

ಡಾ|. ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ದಿನದ ಅಂಗವಾಗಿ ಮುಂದಿನ ವಾರದ ಜನಶಕ್ತಿ ಸಂಚಿಕೆ ವಿಶೇಷ ಸಂಚಿಕೆಯಾಗಿ ಬರುತ್ತಿದೆ. ಹೆಚ್ಚಿನ ಪ್ರತಿಗಳಿಗೆ ಜನಶಕ್ತಿ ಕಚೇರಿಯನ್ನು ಸಂಪರ್ಕಿಸಿ.

ಕಾಂಗ್ರೆಸ್‌ನಲ್ಲಿ ಹೆಚ್ಚುತ್ತಿರುವ ಒಳ ಜಗಳದ ಭಾರ!

ಎಸ್. ವೈ. ಗುರುಶಾಂತ್

ದೇಶದಲ್ಲಿ ಬಿಜೆಪಿ ಪಕ್ಷವು ಕಾಂಗ್ರೆಸ್ ಮುಕ್ತ ಅಭಿಯಾನವನ್ನು ನಡೆಸುತ್ತಿದ್ದರೆ

ಇಲ್ಲಿ ಕಾಂಗ್ರೆಸ್ ಪಕ್ಷ ತನ್ನದೇ ಭಾರದಿಂದ ಕುಸಿಯುತ್ತಿರುವುದು ವಿಶೇಷ!

ಕರ್ನಾಟಕ ವಿಧಾನಸಭೆಯ ಬಜೆಟ್ ಅಧಿವೇಶನಕ್ಕೆ ಸೇರಿದ್ದ ಸದನದ ಕದ ಮುಚ್ಚಿತು. ಮತ್ತೇ ತೆರೆಯುವುದು ಯಾವಾಗ ಎಂಬುದರ ಸುಳಿವಂತೂ ಸದ್ಯಕ್ಕಿಲ್ಲ. ಈಗ ನಡೆದ ಮಹತ್ವದ ಅಧಿವೇಶನದ ಕೊಡುಗೆಯೆಂದರೆ ತೆರಿಗೆಗಳ ಹೆಚ್ಚಳ, ವಿದ್ಯುತ್, ಪೆಟ್ರೋಲ್, ಡಿಸೆಲ್ ಗಳ ಬೆಲೆ ಏರಿಕೆ-ಯ ಮೂಲಕ ಜನಸಾಮಾನ್ಯರ ಬೆನ್ನ ಮೇಲೆ ಮತ್ತೇ ಹೊರೆಗಳ ಏರಿಕೆ! ಅದು ಬಿಟ್ಟರೆ ಸದನದಲ್ಲಿ ನಡೆದ ಗದ್ದಲ-ಗುದ್ದಾಟಗಳು ಅಧಿಕಾರದ ರಾಜಕಾರಣದ ಸುತ್ತಲೇ.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷ ತನ್ನ ಸರಕಾರದ ಮೇಲೆ ವಿರೋಧ ಪಕ್ಷಗಳು ಸದನದಲ್ಲಿ ಹಲವಾರು ವಿಷಯಗಳನ್ನಿಡಿದು ಧಾಳಿ ಮಾಡಿದಾಗ ಸಮರ್ಪಕ ಉತ್ತರ ನೀಡುವಲ್ಲಿ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮತ್ತು ರಾಜಕೀಯವಾಗಿ ಎದುರಿಸುವಲ್ಲಿ ವಿಫಲವಾಯಿತು. ಮಾತ್ರವಲ್ಲ ತನ್ನದೇ ನಡೆಗಳಿಂದ ಮತ್ತಷ್ಟು ಗೊಂದಲ ಗೋಜುಗಳನ್ನು ಹುಟ್ಟು ಹಾಕಿತು. ಬರದ ಬವಣೆಗಳನ್ನು ಪರಿಹರಿಸಿ ಜನ-ಜಾನುವಾರುಗಳನ್ನು ರಕ್ಷಿಸುವ ಕ್ರಮಗಳೂ ಇಲ್ಲವಾಗಿ ಹತಾಶೆಯ ವಾತಾವರಣವೇ ಕಾಣುತ್ತಿದೆ. ಈ ಎಲ್ಲಾ ಬೆಳವಣಿಗೆಗಳು ಮೂರು ವರುಷಗಳನ್ನು ಪೂರೈಸುತ್ತಿರುವ ಸಿದ್ದು ಸರಕಾರದ ವಿರುದ್ಧ ಹೆಚ್ಚುತ್ತಿರುವ ಅತೃಪ್ತಿಯನ್ನು ವಿರೋಧ ಪಕ್ಷಗಳು ಅದರಲ್ಲೂ ಬಿಜೆಪಿ ಪಕ್ಷ ಬಳಸಿಕೊಳ್ಳಲು ಅವಕಾಶ ಒದಗಿಸಿತು.

ದೇಶದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಾಮಾನಗಳ ಹಿನ್ನೆಲೆಯಲ್ಲೇ ರಾಜ್ಯದ ವಿಯಾಮಾನಗಳನ್ನು ಅರಿಯಬೇಕಾಗುತ್ತದೆ. ಕೇಂದ್ರದಲ್ಲಿರುವ ಮೋದಿ ಸರಕಾರದ ಅಧಿಕಾರವನ್ನು ಆರೆಸ್ಸೆಸ್ ಬಳಸಿ ಪ್ರಜಾಸತ್ತಾತ್ಮಕ, ಜ್ಯಾತ್ಯಾತೀತ, ಪ್ರಗತಿಪರ ಶಕ್ತಿಗಳ ಮೇಲೆ ಧಾಳಿಯನ್ನು ತೀವ್ರಗೊಳಿಸುತ್ತಿದೆ. ವಿಶೇಷವಾಗಿ ಬಿಜೆಪಿಯೇತರ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸಿ, ಅಧಿಕಾರದಿಂದ ಉರುಳಿಸಿ ತನ್ನ ನೇರ ಹಿಡಿತಲ್ಲಿರುವಂತೆ ಧಾಳಿಗಳನ್ನು ನಡೆಸುತ್ತಿದೆ. ಈ ಹಿಂದೆಯೇ ಬಿಜೆಪಿ ಅಧ್ಯಕ್ಷ ಅಮಿತ್ ಷಾ 'ಕಾಂಗ್ರೆಸ್ ಮುಕ್ತ ಭಾರತ' ನಿರ್ಮಾಣ ತನ್ನ ಗುರಿಯೆಂದು ಸಾರಿದ್ದರಲ್ಲವೇ? (ಅದರರ್ಥ ಕಮ್ಯೂನಿಸ್ಟ್ ಮುಕ್ತ ಎಂದೂ ಸಹ). ಈಗ ಸಂಘಪರಿವಾರ ಈ ಆಪರೇಷನ್ ಆರಂಭಿಸಿರುವುದನ್ನು ಉತ್ತರಖಾಂಡ, ಅರುಣಾಚಲ ಪ್ರದೇಶಗಳಲ್ಲಿ ಕಾಣಬಹುದು. ಅಲ್ಲಿ ಅತೃಪ್ತ ಕಾಂಗ್ರೆಸ್ ಶಾಸಕರನ್ನು ಸರಕಾರಗಳ ಪತನಕ್ಕೆ ಬಳಸಲಾಗಿದೆ. ಇಂತಹ ಪಿತೂರಿ ರಾಜಕಾರಣದಲ್ಲಿ ಸಂಘಪರಿವಾರದ ಸ್ವಯಂಸೇವಕ, ಯೋಗೋದ್ಯಮಿ ಬಾಬಾ ರಾಮದೇವ್ ರ 'ಸೇವೆ'ಯನ್ನು ಪಡೆಯಲಾಗಿದೆ! ಇಂತಹ ಮದ್ಯವರ್ತಿ ಕರ್ನಾಟಕದಲ್ಲಿಯೂ ಯೋಗ ಕಾರ್ಯಕ್ರಮದ ಹೆಸರಿನಲ್ಲಿ ಬಂದು ಹೋಗಿಯಾಗಿದೆ. ವಿಚಿತ್ರವೆಂದರೆ ಯೋಗ ಅದೆಷ್ಟು ಹೇಳಿ ಹೋದರೆಂದು ಜನ ಹೇಳಬೇಕು ಆದರೆ ಇವರು ಕಮ್ಯೂನಿಸ್ಟರನ್ನೂ ಬಾಯಿ ತುಂಬಾ ಬೈಯ್ದು ಚಪಲ ತೀರಿಸಿಕೊಂಡಿರುವುದು!

ಇನ್ನು ಚುನಾವಣೆಗೆ ಎರಡು ವರುಷಗಳಿರುವಾಗ 'ಸಂಘ'ವು ಬಿಜೆಪಿ ಅಧಿಕಾರ ಹಿಡಿಯುವಂತಾಗಲು ಬೇಕಾದ ತಂತ್ರಗಳನ್ನು ಹೆಣೆದಿದೆ ಎಂಬ ಸುದ್ದಿ ಮಾಧ್ಯಮಗಳಲ್ಲಿದೆ. ಈ ಕುರಿತ ಎಚ್ಚರ ಅಗತ್ಯವಿದೆ.

ಇದು ಒಂದು ಕಡೆಯಾದರೆ ಕಾಂಗ್ರೆಸ್‌ನಲ್ಲಿಯ ಒಳ ಜಗಳ ಮತ್ತೇ ಬೀದಿಗೆ ಬಂದಿದೆ. ಮಾತ್ರವಲ್ಲ, ಅದು ಗಂಭೀರ ಸ್ವರೂಪವನ್ನು ತಾಳುವುದಕ್ಕೆ ಕಾರಣವೂ ಆಗಬಲ್ಲುದು. ಈ ವಾರಗಳಲ್ಲಿ ಸದನದ ಒಳಗೆ ಮತ್ತು ಹೊರಗೆ ಹಲವಾರು ಗಂಭೀರ ವಿಷಯಗಳು ಸಂಭವಿಸಿದವು. ಪಿಯುಸಿ ದ್ವಿತೀಯ (ರಸಾಯನಶಾಸ್ತ್ರ) ಪ್ರಶ್ನೆ ಪತ್ರಿಕೆ ಎರಡು ಬಾರಿಯೂ ಬಯಲಾದದ್ದು ಸರಕಾರದ ಸಾಮರ್ಥ್ಯದ ವಿಫಲತೆಯ ವಿರುದ್ಧ ವಿದ್ಯಾರ್ಥಿ-ಪೋಷಕರನ್ನು ಎದ್ದು ನಿಲ್ಲಿಸಿತು. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಹೆಸರಿನಲ್ಲಿದ್ದ ಪುತ್ತೂರು ದೇವಸ್ಥಾನದ ಆಹ್ವಾನ ಪತ್ರದ ಬಗ್ಗೆ ಸಂಘ ಪರಿವಾರ ಭಾರೀ ಸದ್ದಲವೆಬ್ಬಿಸಿ ಸದನದಲ್ಲಿಯೂ ಚರ್ಚೆಯಾಗಿ, ಅದು ಹೈಕೋರ್ಟ್ ಮೆಟ್ಟಿಲೇರಿದರೂ ಸಿದ್ದು ಸರಕಾರ ಬರೀ ವ್ಯಾಖ್ಯಾನಗಳಲ್ಲಿ ತೊಡಗಿತೇ ವಿನಃ ಸಭಾಧ್ಯಕ್ಷರೇ ಬಾಯಿ ಬಿಟ್ಟು ಹೇಳಿದ ಮೇಲೂ ಕಾನೂನಿಗೆ ತಿದ್ದುಪಡಿ ತಂದು ಸಂವಿಧಾನಾತ್ಮಕ ಹಕ್ಕನ್ನು ಎತ್ತಿ ಹಿಡಿಯಲು ಕ್ರಮ ವಹಿಸಲಿಲ್ಲ. ವಕ್ಫ್ ಆಸ್ತಿ ಅಕ್ರಮಗಳ ಬಗ್ಗೆ ಮಣಪ್ಪಾಡಿ ವರದಿ ಬಗ್ಗೆ ಏನಾದರೊಂದು ಕ್ರಮವನ್ನು ವಹಿಸಬೇಕಿತ್ತು. ಅಂಗೀಕರಿಸುವ, ಇಲ್ಲವೇ ತಿರಸ್ಕರಿಸುವ, ಹೊಸತೊಂದು ಆಯೋಗವನ್ನು ರಚಿಸುವ ಏನಾಧರೂ ತೀರ್ಮಾನಕ್ಕೆ ಬರಬೇಕಿತ್ತು. ತಮ್ಮ ಅಧಿಕಾರದ ಅವಧಿಯಲ್ಲಿ ರಾಜಕೀಯ ಕಾರಣಗಳಿಗಾಗಿ ತಾವೇ ರಚಿಸಿದ್ದ ವರದಿಯನ್ನೇ ಬಿಜೆಪಿ ಹಿಡಿದು ನಿಂತಿತು. ಸದನದಲ್ಲಿ ಗದ್ದಲವೆಬ್ಬಿಸಿದ್ದಲ್ಲದೇ, ರಾಜಭವನಕ್ಕೂ ಹೋಗಿ ಕಾಂಗ್ರೆಸ್‌ನ್ನು ಹಿಡಿದು ಹಿಗ್ಗಾಮುಗ್ಗ ಬಿಜೆಪಿ ಎಳೆದಾಡುತ್ತಿದ್ದರೆ ಸರಕಾರ ಮೌನ ವಹಿಸಿದ್ದು ಇದರಲ್ಲಿ ಕಾಂಗ್ರೆಸ್‌ನ ಹಲವರು ನಾಯಕರು ಭಾಗಿ ಎಂಬ ಸಾರ್ವಜನಿಕರಲ್ಲಿದ್ದ ಅನುಮಾನಗಳನ್ನು ಮತ್ತಷ್ಟು ಗಟ್ಟಿಗೊಳಿಸಿತು.

ಇವುಗಳ ಜೊತೆಗೆ ಸರಕಾರ ಲೋಕಾಯುಕ್ತವನ್ನು ದುರ್ಬಲಗೊಳಿಸಲೆಂದೇ ತಂದಿದೆ ಎಂಬ ಪ್ರಬಲ ಆರೋಪವಿರುವ ಎ.ಸಿ.ಬಿ. ಯ ವಿರುದ್ಧ ವಿರೋಧ ಪಕ್ಷಗಳಿರಲಿ ಜನಾರ್ಧನ ಪೂಜಾರಿ, ಎಸ್.ಎಂ.ಕೃಷ್ಣ ರಂಥಹ ಹಿರಿಯ ಕಾಂಗ್ರೆಸ್ ನಾಯಕರು ಬಹಿರಂಗವಾಗಿಯೇ ಮಾತನಾಡುತ್ತಿದ್ದಾರೆ. ಸಾರ್ವಜನಿಕರಲ್ಲಿ ಸರಕಾರದ ನಡೆಯ ಬಗ್ಗೆ ಸದಾಭಿಪ್ರಾಯವಿಲ್ಲ. ಇಷ್ಟೆಲ್ಲಾ ವಿರೋಧಗಳಿದ್ದರೂ ಸರಕಾರ ಅದನ್ನು ಜಾರಿಗೊಳಿಸುವ ಕ್ರಮಕ್ಕೆ ಮುಂದಾಗಿದ್ದು ಆಕ್ರೋಶ ಹುಟ್ಟಿಸಿದೆ.

ಕಾಂಗ್ರೆಸ್ ಒಳಗಿನ ಭಿನ್ನಮತ ಈ ವಿಷಯಗಳಿಗೆ ಮಾತ್ರವೇ ಸೀಮಿತವಾಗಿಲ್ಲ. ಅದು ಮುಖ್ಯವಾಗಿ ಸಿ.ಎಂ.ಸಿದ್ಧರಾಮಯ್ಯನವರ ನಾಯಕತ್ವವನ್ನೇ ಪ್ರಶ್ನಿಸುವರೆಗೂ ಬೆಳೆದಿದೆ. ಅವರು ಸರ್ವಾಧಿಕಾರಿ, ಒಂದು ಜಾತಿಯ ಬಾಹುಗಳಲ್ಲಿ ಬಂಧಿ, ನಿಷ್ಕ್ರಿಯ ಸರಕಾರ ಎಂಬಂತಹ ಟೀಕೆಗಳನ್ನು ಅವರ ಪಕ್ಷದವರೇ ಮಾಡ ತೊಡಗಿದ್ದಾರೆ. ಈ ಬಗ್ಗೆ ಎಸ್.ಎಂ.ಕೃಷ್ಣ ಇತ್ತೀಚೆಗೆ ದೆಹಲಿಗೆ ಹೋಗಿ ಸೋನಿಯಾ ಮೇಡಮ್‌ನ್ನು ಕಂಡು ಹೈಕಮಾಂಡ್‌ಗೆ ಅಪ್‌ಡೇಟ್ ಮಾಡಿದ್ದಾರೆ. ಸಂಪುಟ ಪುರ್ರಚಿಸುವುದೂ ಒಳಗೊಂಡು ದೂರು ನೀಡಿಯೂ ಬಂದಾಗಿದೆ. ಇಲ್ಲಿ ರಾಜ್ಯದಲ್ಲಿ ಕಾಂಗ್ರೆಸ್‌ನ 29 ಸಮಾನ 'ಮನಸ್ಕ' ಶಾಸಕರು ಹೆಚ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಸಭೆ ನಡೆಸಿ ಕನಿಷ್ಠ 25 ಹಾಲಿ ಮಂತ್ರಿಗಳನ್ನು ಕೈ ಬಿಟ್ಟು ಕ್ರಿಯಾಶೀಲರಾಗಿರುವ ಮತ್ತು ಬಿಟ್ಟಿರುವ ಪ್ರಬಲ ಜಾತಿಗಳ ಹೊಸಬರನ್ನು ತೆಗೆದುಕೊಳ್ಳಲು ಆಗ್ರಹಿಸಿದೆ. ರಾಜ್ಯಾಧ್ಯಕ್ಷರ ನೇಮಕದ ಬಗ್ಗೆಯೂ ಚರ್ಚಿಸಿದೆ. ಹಿರಿಯ ಕಾಂಗ್ರೆಸ್ ನಾಯಕರಾದ ಕೆ.ಆರ್.ರಮೇಶ್ ಕುಮಾರ್‌ರವರು ಸದನದಲ್ಲೇ ಮುಖ್ಯಮಂತ್ರಿಯವರನ್ನು ಅತ್ಯಂತ ಮಾರ್ಮಿಕವಾಗಿ ಟೀಕಿಸಿ ಎಚ್ಚರಿಕೆಯನ್ನೂ ನೀಡಿದ್ದಾರೆ. ಇನ್ನು ಸಭಾಧ್ಯಕ್ಷರೋ ಎಂದಿನಂತೆ ಸರಕಾರದ ವಿರುದ್ಧವೇ ದನಿಯೆತ್ತಿದ್ದಾರೆ.

ಸಿದ್ದರಾಮಯ್ಯನವರು 5 ರಾಜ್ಯಗಳ ಚುನಾವಣೆ ಬಳಿಕ 10 ರಿಂದ 12 ಸಚಿವರನ್ನು ಕೈ ಬಿಟ್ಟು ಸಂಪುಟ ಪುನರ್ರಚಿಸುವ ಇಂಗಿತ ವ್ಯಕ್ತಪಡಿಸಿರುವುದನ್ನು ಈ ಬಣ ಒಪ್ಪಿಲ್ಲ. ಅಲ್ಲದೇ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೈಕಮಾಂಡ್‌ನಿಂದ ರಾಜ್ಯಕ್ಕೆ ಉಸ್ತುವಾರಿಯಾಗಿರುವ ದಿಗ್ವಿಜಯ್‌ಸಿಂಗ್ ರನ್ನು ಬದಲಾಯಿಸಬೇಕೆಂಬ ಬೇಡಿಕೆಯನ್ನೂ ಈ ಸಮಾನ ಮನಸ್ಕರು ಎತ್ತಿದ್ದಾರೆ. ಸಂಪುಟ ಪುನರ್ ರಚನೆಯ ಬಗ್ಗೆ ಹೈಕಮಾಂಡ್ ಜೊತೆ ಚರ್ಚಿಸಲು ಸಿ.ಎಂ. ಎಪ್ರಿಲ್ 10, 2016 ರ ನಂತರ ಯಾವಾಗಲಾದರೂ ಹೋಗಿ ಬರುವ ಸುದ್ದಿ ಚಾಲ್ತಿಯಲ್ಲಿದೆ.

ಕಾಂಗ್ರೆಸ್ ಒಳಗೆ ಮೂಲ ಮತ್ತು ವಲಸಿಗ ಕಾಂಗ್ರೆಸ್ ಎಂಬ ವಿಭಜನೆ ಸಂಪುಟ ಅಸ್ತಿತ್ವಕ್ಕೆ ಬಂದ ಲಾಗಾಯ್ತು ಇದ್ದೇ ಇದೆ. ಅದರೊಟ್ಟಿಗೆ ಕಾಂಗ್ರೆಸ್ ಶಾಸಕರು ಗುಂಪಾಗಿ ಚರ್ಚಿಸುವುದು ಗಮನಿಸಬೇಕಾದ ಬೇಳವಣಿಗೆ. ಇವೆಲ್ಲಾ ಕಾಂಗ್ರೆಸ್ ಒಳಗೆ ಅಧಿಕಾರಕ್ಕಾಗಿ ನಡೆದಿರುವ ಜಗಳವನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ಯುತ್ತಿದೆ.

ಈ ಸನ್ನಿವೇಶದ ಲಾಭವನ್ನು ಪಡೆಯಲು ಬಿಜೆಪಿ ಸಕ್ರಿಯವಾಗಿದೆ ಎಂಬುದು ಮತ್ತೊಂದು ಗಮನಾರ್ಹ ಅಂಶ. ಬಿಜೆಪಿ ಕಾಂಗ್ರೆಸ್‌ನ ಸುಮಾರು 30 ಶಾಸಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಮಾತುಕತೆಗಳೂ ನಡೆದಿರುವ ವರದಿ ಇದೆ. ಈ ಶಾಸಕರು ಮುಂದಿನ ಚುನಾವಣೆಯಲ್ಲಿ ತಮಗೆ ಬಿಜೆಪಿಯಿಂದ ಸ್ಪರ್ಧಿಸಲು ಟಿಕೇಟ್ ನೀಡದಲ್ಲಿ ಕೈ ಜೋಡಿಸಲು ಸಿದ್ಧ ಎಂಬ ಪ್ರಸ್ತಾಪವೂ ಆಗಿದೆ. ಈ ಬಗ್ಗೆ ಇನ್ನೂ ಬಿಜೆಪಿ ಖಚಿತ ತೀರ್ಮಾನ ಹೇಳಿಲ್ಲವಾದರೂ ಈ ಗುಂಪನ್ನು ಯಾವಾಗ ಬೇಕಾದರೂ ಸಿದ್ಧರಾಮಯ್ಯನವರ ಸರಕಾರವನ್ನು ಪತನಗೊಳಿಸಲು ಬಳಸಿದಲ್ಲಿ ಆಶ್ಚರ್ಯವೇನಿಲ್ಲ. ಅಧಿಕಾರಕ್ಕೆ ಹಾತೊರೆಯುವ ಸಂದರ್ಭಸಾಧಕ ರಾಜಕಾರಣವೇ ವಿಜೃಂಭಿಸುತ್ತಿರುವಾಗ ಯಾವ ಕಡೆಗೂ ಬಲ ವಾಲಬಹುದು!

ಹೀಗೆ ಕಾಂಗ್ರೆಸ್ ತನ್ನ ಜನವಿರೋಧಿ ನೀತಿಗಳಿಂದಲೂ, ಅಧಿಕಾರದ ಹಪಾಹಪಿಯ ಆಂತರಿಕ ಭಾರದಿಂದಲೂ ಕುಸಿಯುತ್ತಿದೆ. ತನ್ನದೇ ತಪ್ಪು ನಿರ್ಧಾರಗಳಿಂದ ಬಿಜೆಪಿಯಂತಹ ಪ್ರತಿಗಾಮಿ ಪಕ್ಷಕ್ಕೆ ಅವಕಾಶಗಳನ್ನು ನೀಡುತ್ತಿದೆ. ಇವು ಪ್ರಮುಖ ಬೆಳವಣಿಗೆಗಳು.

ವಿನಾಯಕ ಸಿಎನ್‌ಸಿ ಕಾರ್ಮಿಕರ ಹೋರಾಟ 30ನೇ ದಿನಕ್ಕೆ

ವಿನಾಯಕ ಸಿಎನ್‌ಸಿ ಸೆಂಟರ್ ಪ್ರೈ.ಲಿ.ನ ಮಾಲೀಕರು ಕಾರ್ಮಿಕರಿಗೆ ಕಡಿಮೆ ವೇತನ ನೀಡಲಾಗುತ್ತಿದೆ. ನ್ಯಾಯಯುತವಾಗಿ ರಚಿಸಿರುವ ಕಾರ್ಮಿಕ ಸಂಘಕ್ಕೆ ವಿರೋಧ ವ್ಯಕ್ತಪಡಿಸಲಾಗಿದೆ. ಕಾರ್ಮಿಕರ ಮೇಲಿನ ಕಿರುಕುಳ ನೀತಿ ಕೈ ಬೀಡಲು ಆಗ್ರಹಿಸಿ ಸಮಸ್ಯೆಗಳನ್ನು ಬಗೆಹರಿಸಲು ಮಾನ್ಯ ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶ ಮಾಡಲು ಒತ್ತಾಯಿಸಿ ಮಾರ್ಚ್ 2, 2016 ರಿಂದ ಜಿಲ್ಲಾದಿಕಾರಿಗಳ ಕಛೇರಿ ಬಳಿ ಆರಂಭವಾದ ಅನಿರ್ದಿಷ್ಟಾವಧಿ ಹೋರಾಟ ತಿಂಗಳುಗಳು ಕಳೆದರೂ ಸಮಸ್ಯೆ ಇನ್ನೂ ಬಗೆಹರಿದಿಲ್ಲ.

ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ವಿನಾಯಕ ಸಿಎನ್‌ಸಿ ಸೆಂಟರ್ ಪ್ರೈಲಿನ ಕಾರ್ಖಾನೆಯಲ್ಲಿ ಕಾರ್ಮಿಕರು ಸಂಘಟಿತರಾಗಿ ಸುಮಾರು 4 ವರ್ಷಗಳಿಂದ ತಮ್ಮ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಟ ನಡೆಸುತ್ತಿದ್ದಾರೆ. ಆದರೆ ಮಾಲೀಕರು ಸಂಘವಿರೋಧಿ ನೀತಿ ಹಾಗೂ ಕಾರ್ಮಿಕರನ್ನು ಬಲಿ ಪಶುಮಾಡುವಂತಹ ಕ್ರಮಗಳನ್ನು ಅನುಸರಿಸುತ್ತಿದ್ದಾರೆ.

ಮೊದಲನೆಯದಾಗಿ 2012ರಲ್ಲಿ ಕಾರ್ಮಿಕರು ಸಂಘ ರಚಿಸಿದ್ದನ್ನು ವಿರೋಧಿಸಿ ಮಾಲೀಕರು 16 ಜನ ಹಂಗಾಮಿ (ಟ್ರೈನಿ) ಕಾರ್ಮಿಕರೆಂದು ಹೇಳಿ ಕೆಲಸದಿಂದ ವಜಾಗೊಳಿಸಿದರು ಇದನ್ನು ಬೇರೆ ಕಾರ್ಮಿಕರು ಪ್ರಶ್ನೆ ಮಾಡಿದ್ದಕ್ಕೆ ನೀವು ಸಂಘವನ್ನು ಬಿಟ್ಟು ಬರದಿದ್ದರೆ ನಿಮಗೂ ಕೆಲಸ ನೀಡುವುದಿಲ್ಲ ಎಂದು ಹೇಳಿ ಎಲ್ಲಾ ಕಾರ್ಮಿಕರಿಗೂ ಕೆಲಸ ನಿರಾಕರಿಸಿದರು.

ಕಾರ್ಮಿಕರು ಸಂಘದೊಂದಿಗೆ 2012ರಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಹೋರಾಟ ನಡೆಸಿ ಮನವಿ ಮಾಡುವ ಮೂಲಕ ನಮಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಕೇಳಿಕೊಂಡೆವು. ಮನವಿಗೆ ಸ್ಪಂದಿಸಿದ ಜಿಲ್ಲಾಡಳಿತ ದಿನಾಂಕ: 05-10-2012ರಂದು ಕಾರ್ಮಿಕರು ಮತ್ತು ಆಡಳಿತ ಮಂಡಳಿ ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ಕರೆದು ಒಪ್ಪಂದದ ಮೂಲಕ ಕಾರ್ಮಿಕರಿಗೆ ಮತ್ತೆ ಕೆಲಸ ದೊರಕಿಸಿಕೊಟ್ಟರು. ಆದರೆ ಆಡಳಿತ ಮಂಡಳಿಯವರು ಕಾರ್ಮಿಕರ ಸಂಘವನ್ನು ವಿರೋಧಿಸುತ್ತಾ ದುರುದ್ದೇಶದಿಂದ ಕಾರ್ಮಿಕರಿಗೆ ಸಂಘವನ್ನು ಬಿಡುವಂತೆ ಒತ್ತಾಯಿಸುತ್ತಿದ್ದು ಕಿರುಕುಳ ನೀಡುತ್ತಿದ್ದಾರೆ.

2012ರಲ್ಲಿ ಆದ ಒಡಂಬಡಿಕೆಯಲ್ಲಿ ಕಾರ್ಮಿಕರ ಸಂಖ್ಯೆ 122 ಇದ್ದು ಈಗ ಕೇವಲ 65 ಜನ ಮಾತ್ರ ಕಾರ್ಮಿಕರು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಒಪ್ಪಂದದಂತೆ **"Connecting Flange 6 Cylinder"** ಎಂಬ ಉತ್ಪಾದನಾ ವಸ್ತುವನ್ನು 1800 ಸಂಖ್ಯೆ ನೀಡಲೆಬೇಕೆಂದು ಹೇಳಿ ಇಲ್ಲದಿದ್ದಲ್ಲಿ ವೇತನ ಕಡಿತಗೊಳಿಸುವುದಾಗಿ ತಿಳಿಸಿ ಸುಮಾರು 8 ತಿಂಗಳುಗಳಿಂದ ಕಾರ್ಮಿಕರು ದುಡಿದಂತಹ ವೇತನದಲ್ಲಿ ಅಕ್ರಮವಾಗಿ ಮನಬಂದಂತೆ ಕಡಿತ ಮಾಡಲಾಗುತ್ತಿದೆ.

ಕಾರ್ಮಿಕರನ್ನು ಬೆಂಬಲಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಮತ್ತು ಪ್ರತಾಪ್ ಸಿಂಹ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್ ವಹಿಸಿದ್ದರು.

ಪ್ರತಿಭಟನೆಯಲ್ಲಿ ಎಂ.ಎಚ್.ಐ.ನ್ ಶಶಿಕಿರಣ್, ದಿಶಾದ ರುದ್ರೇಗೌಡ, ಕಾಳೇಶ್ವರಿಯ ಮುತ್ತುರಾಜ್, ಕುಮಾರ್, ಎಸ್.ಎಫ್.ಐನ ದರ್ಶನ್.ಜಿ ಸೇರಿದಂತೆ ಮುಂತಾದವರು ನೇತೃತ್ವ ವಹಿಸಿದ್ದರು.

ಪಕ್ಷಪಾತ ಧೋರಣೆ ತೋರಬೇಡಿ ಪೊಲೀಸರ ಕ್ರಮಕ್ಕೆ ಪ್ರತಿಭಟನಾಕಾರರ ಆಕ್ರೋಶ : ಪ್ರತಿಭಟನೆ ನಡೆಸುತ್ತಿರುವ ಕಾರ್ಮಿಕರ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಟ ನಡೆಸುವ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಮಧ್ಯಪ್ರವೇಶಿಸಿ, ತುಮಕೂರು ಗ್ರಾಮಾಂತರ ಎಸ್‌ಐರವರು ನಿಮ್ಮದು ಜಾಸ್ತಿಯಾಯಿತು ನಿಮ್ಮನ್ನು ರೌಡಿಶೀಟರ್‌ಗೆ ಸೇರಿಸುತ್ತೇನೆ ಎಂದು ಹಾಕಿರುವ ಬೆದರಿಕೆಗೆ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಪೊಲೀಸರು ನ್ಯಾಯೋಚಿತವಾಗಿ ವರ್ತಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅಪಾರ ಜಿಲ್ಲಾಧಿಕಾರಿಗಳಾದ ಅನಿತ ರವರಿಗೆ ಮನವಿ ಪತ್ರವನ್ನು ನೀಡಲಾಗಿದ್ದು ಜಿಲ್ಲಾಡಳಿತ ಏಪ್ರಿಲ್ 4ರ ಒಳಗೆ ಇತ್ಯಾರ್ಥಪಡಿಸಲು ಕ್ರಮಕೈಗೊಳ್ಳದಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಪ್ರತಿಭಟನಾಕಾರರು ಸರ್ಕಾರವನ್ನು ಎಚ್ಚರಿಸಿದ್ದಾರೆ.

ವರದಿ : ದರ್ಶನ್

ನಮ್ಮ ಚುರು-ಟ್ವೀಟ್

@SitaramYechury

ರಿಸರ್ವ್ ಬ್ಯಾಂಕಿನ ಪ್ರಕಾರ ಬ್ಯಾಂಕ್ ಡಿಪಾಸಿಟ್ ಹೆಚ್ಚಳ 1963ರ ನಂತರ ಈ ವರ್ಷ ಅತಿ ಕಡಿಮೆ ಇದೆ. ಇದು ಮೋದಿ ಸರಕಾರದ 'ಬೊಗಳೆ ಅರ್ಥಶಾಸ್ತ್ರ' ಇನ್ನೊಂದು ಸಾಧನೆ.

– ಸೀತಾರಾಂ ಯೆಚುರಿ

ಏಪ್ರಿಲ್ 5 : ಸಚಿವರು–ಶಾಸಕರಿಗೆ ಮನವಿ

ಮಾರ್ಚ 11 ರಂದು ನಡೆಸಲಾದ ವಿಧಾನ ಸೌಧ ಚಲೋ ಹೋರಾಟದ ಸಂದರ್ಭದಲ್ಲಿ ಕಾರ್ಮಿಕ ಸಚಿವರಾದ ಪಿ.ಟಿ. ಪರಮೇಶ್ವನಾಯ್ಕ ನೇತೃತ್ವದಲ್ಲಿ ಸಿಐಟಿಯು ರಾಜ್ಯನಾಯಕರ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಪ್ರಮುಖ 12 ವಿಭಾಗಗಳ ಕಾರ್ಮಿಕರ ಬೇಡಿಕೆಗಳನ್ನು ಸಲ್ಲಿಸಿ ವಿವರಿಸಲಾಗಿದೆ. ಅದರಂತೆ ಏಪ್ರಿಲ್ 12ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 12 ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಭೆಯನ್ನು ಕರೆಯಲು ಒಪ್ಪಿದ್ದಾರೆ. ಮತ್ತು ಅದಕ್ಕೆ ಪೂರ್ವಭಾವಿಯಾಗಿ ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಏಪ್ರಿಲ್ ಮೊದಲ ವಾರದಲ್ಲಿ ನಡೆಸುವ ಭರವಸೆಯನ್ನು ನೀಡಿದ್ದರಿಂದ 11 ರ ಹೋರಾಟವನ್ನು ಹಿಂಪಡೆಯಲಾಗಿತ್ತು.

ಈ ಬಗ್ಗೆ ಮಾರ್ಚ 25 ರಂದು ಸಭೆ ನಡೆದ ಸಿಐಟಿಯು ರಾಜ್ಯ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕೂಡಲೇ ಸಭೆ ನಡೆಸಲು ಬೇಕಾದ ತಯಾರಿಯನ್ನು ನಡೆಸಬೇಕೆಂದು ಸರಕಾರವನ್ನು ಆಗ್ರಹಿಸಿದೆ. ಈ ಬಗ್ಗೆ ಸ್ವತಃ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರುವ ಭಾಗವಾಗಿ ಏಪ್ರಿಲ್ 5 2016 ರಂದು ರಾಜ್ಯದ ಎಲ್ಲಾ ಕಡೆಗಳಲ್ಲಿ ಸ್ಥಳೀಯ ಶಾಸಕರಿಗೆ, ಸಚಿವರಿಗೆ ಮತ್ತು ಎಂ.ಎಲ್.ಸಿ.ಗಳಿಗೆ ಕಾರ್ಮಿಕ ಬೇಡಿಕೆಗಳ ಕುರಿತಾಗಿ ಇರುವ ಮನವಿ ಪತ್ರವನ್ನು ನಿಯೋಗ ಅಥವಾ ಅಗತ್ಯವಿದ್ದಲ್ಲಿ ಹೋರಾಟದ ಮೂಲಕ ಸಲ್ಲಿಸಲು ಸಭೆ ಕರೆ ನೀಡಿದೆ.

ಏಪ್ರಿಲ್ ಮೊದಲ ವಾರದಲ್ಲಿ ಕಾರ್ಮಿಕ ಸಚಿವರು ಹಾಗೂ ಏಪ್ರಿಲ್ 12 ರಂದು ಮುಖ್ಯಮಂತ್ರಿಗಳು ಸಿಐಟಿಯು ರಾಜ್ಯ ನಾಯಕತ್ವದೊಂದಿಗೆ ಮಾತುಕತೆ ನಡೆಸಲು ವಿಫಲವಾದಲ್ಲಿ ಅಥವಾ ನಡೆಸುವ ಮಾತುಕತೆ ಫಲಪ್ರದವಾಗದಿದ್ದಲ್ಲಿ ಏಪ್ರಿಲ್ 18 ರಂದು ರಾಜ್ಯದ್ಯಂತ ತಹಶೀಲ್ದಾರ್ ಕಛೇರಿಗಳಿಗೆ ದಿಗ್ಭಂಧನ ಮಾಡಲು ಕರೆ ನೀಡಿದೆ.



ಅಭಿನಂದನೆಗಳು

ಕಾ. ಎಸ್. ವರಲಕ್ಷ್ಮಿ ಅವರು ಮಾರ್ಚ್ 25 ರಂದು ನಡೆದ ಸಿಐಟಿಯು ರಾಜ್ಯ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಸಿಐಟಿಯು ಪ್ರಧಾನ ಕಾರ್ಯದರ್ಶಿ ಆಗಿ ಆಯ್ಕೆಯಾಗಿದ್ದಾರೆ. ಓರ್ವ ಮಹಿಳೆ ಸಿಐಟಿಯು ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಆಗಿ ಆಯ್ಕೆಯಾಗುತ್ತಿರುವುದು ಇದೇ ಮೊದಲು.

ಕಾ. ಎಸ್. ವರಲಕ್ಷ್ಮಿ ಅವರಿಗೆ ಅಭಿನಂದನೆಗಳು

ಕನಿಷ್ಟ ವೇತನ: ಮುಖ್ಯ ನಾಯಾಧೀಶರಿಗೆ ಮನವಿ

ರಾಜ್ಯದ 9 ಉದ್ಯಮಗಳಿಗೆ ಕನಿಷ್ಟ ವೇತನ ಸಲಹಾ ಮಂಡಳಿ ಹೆಚ್ಚಳ ಮಾಡಿ ನಿಗದಿಪಡಿಸಿದ್ದ ಕನಿಷ್ಟ ವೇತನ ರೂ. 10,100 ನಿರ್ಧಾರವನ್ನು ಸರಕಾರ ಅಧಿಸೂಚನೆ ಮೂಲಕ ಪ್ರಕಟಿಸಿತ್ತು. ಆದರೆ ಅದರಲ್ಲಿ 5 ಉದ್ಯಮಗಳ ಮಾಲೀಕರು ಹೈಕೋರ್ಟನಿಂದ ತಡೆಯಾಜ್ಞೆ ತಂದಿದ್ದಾರೆ. ಇದ–ರಿಂದ ಈ ಬೆಲೆ ಏರಿಕೆ ದಿನಗಳಲ್ಲಿ ಕನಿಷ್ಟ ವೇತನ ಹೆಚ್ಚಳದಿಂದ ಕಾರ್ಮಿಕರು ವಂಚಿತರಾಗಿದ್ದಾರೆ. ಹೀಗಾಗಿ ಅಟೋಮೊಬೈಲ್, ಹಾಸ್ಟಲ್ ಮೊದಲಾದ ವಿಭಾಗದ ಕಾರ್ಮಿಕ ಸಂಘಗಳು ಈ ತಡೆಯಾಜ್ಞೆ ತೆರವಿಗೆ ಹೈಕೋರ್ಟನಲ್ಲಿ ಅರ್ಜಿ ಸಲ್ಲಿಸಿವೆ.

ಇದಲ್ಲದೆ ರಾಜ್ಯದಲ್ಲಿರುವ ಲಕ್ಷಾಂತರ ಬೀಡಿ ಕಾರ್ಮಿಕರಿಗೆ 1.4.2015 ರಿಂದ ಅನ್ವಯವಾಗುವಂತೆ 1000 ಬೀಡಿಗೆ ದಿನವೊಂದಕ್ಕೆ ರೂ 14.71 ರಂತೆ ಮಾಸಿಕ ರೂ 382.50 ಮಾಸಿಕ ತುಟ್ಟಿಭತ್ಯೆ ಹೆಚ್ಚಳವನ್ನು ಮಾಲೀಕರು ನೀಡದಂತೆ ವಿನಾಯ್ತಿಯನ್ನು ಕಾರ್ಮಿಕ ಸಚಿವಾಲಯವು ಆದೇಶ ನೀಡಿದೆ. ಇದನ್ನು ಹೈಕೋರ್ಟನಲ್ಲಿ ಪ್ರಶ್ನಿಸಿ ಸಿಐಟಿಯು ನೇತೃತ್ವದ ಹಾಗೂ ಇತರೆ ಬೀಡಿ ಕಾರ್ಮಿಕ ಸಂಘಗಳು ತಡೆ–ಯಾಜ್ಞೆ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿವೆ.

ಆದರೆ ಕಾರ್ಮಿಕ ವಿಭಾಗಗಳು ತಮ್ಮ ವಕೀಲರುಗಳ ಮೂಲಕ ಸಲ್ಲಿಸಲಾದ ಮೇಲ್ಕಂಡ ಎರಡು ವಿಷಯಗಳ ಕುರಿತಾದ ಅರ್ಜಿಗಳು ಇತ್ಯರ್ಥವಾದದೇ ನಿರಂತರ ಪ್ರಕರಣಗಳ ವಿಚಾರಣೆಗಳು ಮುಂದಕ್ಕೆ ಹೋಗುತ್ತಿವೆ. ಈ ಹಿನ್ನಲೆಯಲ್ಲಿ ಲಕ್ಷಾಂತರ ಕಾರ್ಮಿಕರ ಬದುಕಿನ ಪ್ರಶ್ನೆಗಳ ಕುರಿತಾದ ಈ ಪ್ರಕರಣಗಳನ್ನು ಕೂಡಲೇ ಇತ್ಯರ್ಥಪಡಿಸಲು ಮಧ್ಯ ಪ್ರವೇಶಿಸಬೇಕೆಂದು ಕೋರಿ ಕರ್ನಾಟಕ ಹೈಕೋರ್ಟನ ಮಾನ್ಯ ಮುಖ್ಯ ನಾಯಮೂರ್ತಿಗಳಿಗೆ ಕಾರ್ಮಿಕರ ಪರವಾಗಿ ಮನವಿ ಸಲ್ಲಿಸಲು ಸಿಐಟಿಯು ರಾಜ್ಯ ಸಮಿತಿ ನಿರ್ಧರಿದೆ.



ಕೆ. ಮಹಾಂತೇಶ್

ಸೆಪ್ಟೆಂಬರ್ 17–19: ಬಾಗಲಕೋಟೆಯಲ್ಲಿ ಸಿಐಟಿಯು ಸಮ್ಮೇಳನ

2016 ನವೆಂಬರ್ 29 ರಿಂದ 30 ರವರೆಗೆ 15ನೇ ಅಖಿಲ ಭಾರತ ಸಮ್ಮೇಳನದ ಒಡಿಶಾದ ಪುರಿಯಲ್ಲಿ ನಡೆಯುತ್ತದೆ. ಅದಕ್ಕೆ ಪೂರ್ವದಲ್ಲಿ ಸಿಐಟಿಯು 13 ನೇ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿ ಸೆಪ್ಟೆಂಬರ್ 17–19 ರಂದು ನಡೆಸಲು ಸಿಐಟಿಯು ರಾಜ್ಯ ಸಮಿತಿ ನಿರ್ಧರಿಸಿದೆ. ಮೊದಲನೇ ದಿನ ಬಾಗಲಕೋಟೆ ನಗರದಲ್ಲಿ ಸಾವಿರಾರು ಕಾರ್ಮಿಕರ ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನು ನಡೆಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲು ನಿರ್ಧರಿಸಲಾಗಿದೆ. ಸಮ್ಮೇಳನವನ್ನು ಯಶಸ್ವಿಗೊಳಿಸಲು ಸ್ವಾಗತ ಸಮಿತಿಯ ಸಭೆಯನ್ನು ಏಪ್ರಿಲ್ 23 ರಂದು ಬಾಗಲಕೋಟೆಯಲ್ಲಿ ಕರೆಯಲಾಗಿದೆ.

ರಾಜ್ಯಸಮ್ಮೇಳನಕ್ಕೆ ಪೂರ್ವದಲ್ಲಿ ಈಗಾಗಲೇ ಪಂಚಾಯ್ತಿ/ವಾರ್ಡ ಮತ್ತು ತಾಲೂಕು/ವಲಯ ಸಮ್ಮೇಳನಗಳು ಆರಂಭಗೊಂಡಿದ್ದು ಎಲ್ಲಾ ಜಿಲ್ಲಾ ಸಮ್ಮೇಳನಗಳನ್ನು ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಮುಕ್ತಾಯಗೊಳಿಸಲು ತೀರ್ಮಾನಿಸಲಾಗಿದೆ. ●

ರಾಮ ತಲೆತಗ್ಗಿಸುವಂಥ ರಾಮಭಕ್ತರ ಲಜ್ಜೆಗೇಡಿ ಮಾತುಗಳು ......

'...ಮಕ್ಕಳೇ, ಇದು ನಮ್ಮ ದೇಶ, ನಾವೇನೂ ಭಿಕ್ಷೆ ಬೇಡುತ್ತಿಲ್ಲ ...', '...ಮಗನೇ, ಮುಖ್ಯಮಂತ್ರಿ ಸಿದ್ದರಾಮಯ್ಯ ...'

–ಈ ರೀತಿಯಾಗಿ ನಾವು ಮುದ್ರಿಸಲೂ ಆಗದಂಥ, ತೀರಾ ಥರ್ಡ್‌ಕ್ಲಾಸ್ ಪದಪುಂಜಗಳನ್ನು ಬಳಸಿದವರು ಯಾರೋ ತಲೆಕೆಟ್ಟವರಲ್ಲ, ಕುಡುಕರೂ ಅಲ್ಲ. ಮರ್ಯಾದಾ ಪುರುಷೋತ್ತಮನ ಭಕ್ತರು, ಭಾರತೀಯ ಸಂಸ್ಕೃತಿಯ ರಕ್ಷಕರು, ಅದರ ಗುತ್ತಿಗೆದಾರರು ತಾವು ಎಂದು ಹೇಳಿಕೊಳ್ಳುವ ಕೇಸರಿ ಪಡೆಯ ಒಂದು ಭಾಗ ಶ್ರೀರಾಮ ಸೇನೆಯ ಮುಖಂಡರೊಬ್ಬರು ಉದುರಿಸಿದ ಅಣಿಮುತ್ತುಗಳಿವು!

ಹೌದು, ಕೋಲಾರದಲ್ಲಿ ಮಾರ್ಚ್ 26ರಂದು ಶ್ರೀರಾಮ ಸೇನೆಯ ದಶಮಾನೋತ್ಸವ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಹಿಂದೂ ಸಮಾಜೋತ್ಸವ ಕಾರ್ಯಕ್ರಮದ ಬಹಿರಂಗ ಸಭೆ ಇಂಥ ಇನ್ನೂ ಅನೇಕ ಅಸಂಬದ್ಧ ಮಾತುಗಳಿಗೂ ಪ್ರಚೋದನಕಾರಿ ಹೇಳಿಕೆಗಳಿಗೂ ಸಾಕ್ಷಿಯಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಲು ಬರದಂತೆ ಶ್ರೀರಾಮ ಸೇನೆಯ ಮುಖಂಡ ಪ್ರಮೋದ್ ಮುತಾಲಿಕ್‌ಗೆ ಜಿಲ್ಲಾಡಳಿತ ನಿರ್ಬಂಧ ಹೇರಿತ್ತು. ಈ ಹಿನ್ನೆಲೆಯಲ್ಲಿ ಮುತಾಲಿಕ್ ಬರಲಿಲ್ಲವೇನೋ ಹೌದು. ಆದರೆ ಭಾಗವಹಿಸಿದ್ದ ಇತರ ನಾಯಕರು ಪ್ರಗತಿಪರರು, ಎಡಪಂಥೀಯರು ಮತ್ತು ಅಲ್ಪಸಂಖ್ಯಾತರ ವಿರುದ್ಧ ತೀರಾ ಅವಹೇಳನಕಾರಿ ಭಾಷಣಗಳನ್ನು ಮಾಡಿದರು. ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲೇ ಆದ ಇಂಥ ಪ್ರಚೋದನಕಾರಿ ಭಾಷಣಗಳ ಬಗ್ಗೆ ಜಿಲ್ಲಾಡಳಿತ ಏನೂ ಕ್ರಮ ಕೈಗೊಳ್ಳದಿದ್ದುದು ವಿಪರ್ಯಾಸವಾಗಿತ್ತು.

ಶ್ರೀರಾಮ ಸೇನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಗಂಗಾಧರ ಕುಲಕರ್ಣಿ ತಮ್ಮ ಭಾಷಣದುದ್ದಕ್ಕೂ ಕೋಮುದ್ವೇಷ ಕಾರುವ ಮಾತುಗಳನ್ನೇ ಆಡಿದರು. ಸಂಸತ್ ಸದಸ್ಯ ಅಸಾವುದ್ದಿನ್ ಓವೈಸಿ ಅವರನ್ನು ತಮ್ಮ ಭಾಷಣದುದ್ದಕ್ಕೂ 'ಬೇವರ್ಸಿ' ಅಂತಲೇ ಸಂಬೋಧಿಸಿದರು.

ಗುಜರಾತ್ ಹತ್ಯಾಕಾಂಡ ಅಲ್ಪಸಂಖ್ಯಾತರ ವಿರುದ್ಧ ನಡೆದ ಯೋಜಿತ ಕಾರ್ಯ ಎಂಬುದನ್ನು ಅವರು ಬಹಿರಂಗವಾಗಿ ಒಪ್ಪಿಕೊಂಡರು. 52 ಕರಸೇವಕರ ಸಾವಿಗೆ ಪ್ರತೀಕಾರವಾಗಿ ಗುಜರಾತ್‌ನಲ್ಲಿ ಸಾವಿರಾರು ಮುಸ್ಲಿಮರನ್ನು ಕೊಲ್ಲಲಾಯಿತು ಎಂದು ಅವರು ಹೇಳಿದರು.

ಕರ್ನಾಟಕದ ಕಾಂಗ್ರೆಸ್ ಸರಕಾರ ಹಿಂದೂ ವಿರೋಧಿ ಎಂದು ಜರೆದ ಕುಲಕರ್ಣಿ, ಹಿಂದೂತ್ವ ಕಾರ್ಯಕರ್ತರ ಕೊಲೆಗಳಿಗೆ ಪ್ರತಿಯಾಗಿ ಸಿದ್ದರಾಮಯ್ಯ ಸರಕಾರದ 'ಹೆಣ' ಬೀಳುತ್ತದೆ ಎಂದರು.

ದೇಶದಲ್ಲಿ ಹಿಂದೂಗಳ ಸಂಖ್ಯೆ ಕಡಿಮೆಯಾಗಿ ಅಲ್ಪಸಂಖ್ಯಾತರ ಸಂಖ್ಯೆ ಜಾಸ್ತಿಯಾಗಲಿದೆ ಎಂದ ಅವರು, ಪ್ರತಿ ಹಿಂದೂ ಮನೆಯಲ್ಲಿ ಫಳಫಳನೆ ಹೊಳೆಯುವ ಹರಿತವಾದ ತಲವಾರುಗಳನ್ನು ಇಟ್ಟುಕೊಳ್ಳಬೇಕು ಎಂದು ಕರೆ ನೀಡಿದರು. ಇದು ಹಿಂದೂ ಸಂಸ್ಕೃತಿಯ ರಕ್ಷಣೆಗೆ ಎಂದು ಮೊದಲಿಗೆ ಹೇಳಿದ ಅವರ ಬಾಯಿಯಿಂದ ಕ್ರಮೇಣ ನಿಜವಾದ ಹಿಡನ್ ಅಜೆಂಡಾ ಹೊರಬಂದೇ ಬಿಟ್ಟಿತು. ಹಿಂದೂತ್ವ ವಿರೋಧಿಗಳ 'ಏಕ್ ಮಾರ್ ದೋ ತುಕ್ಡಾ' ಆಗಬೇಕು, ಹಾಗಿರಬೇಕು ತಲವಾರುಗಳು ಎಂದು ವಿವರಿಸಿದರು. ಅಲ್ಲಾಹೋ ಅಕ್ಬರ್ ಎಂದು ಬಂದವರು ಹೆದರಿ ಕಾಲ್ಕೀಳಬೇಕು ಎಂದರು.

ಸುಳ್ಳುಗಳ ಕಂತೆ

ಆರ್‌ಎಸ್‌ಎಸ್ ನೇತೃತ್ವದ ಕೇಸರಿ ಪಡೆ ಹಿಟ್ಲರ್ ಸಂತತಿಯವರು ಎನ್ನುವುದನ್ನು ಅವರ ಭಾಷಣ ಮತ್ತೊಮ್ಮೆ ಸಾಬೀತು ಪಡಿಸಿತು. ಜೆಎನ್‌ಯುನಲ್ಲಿ ಕನ್ನಯ್ಯಾ ಕುಮಾರ್ ಮತ್ತಿತರರು ದೇಶವಿರೋಧಿ ಘೋಷಣೆಗಳನ್ನು ಕೂಗಿಲ್ಲ ಎನ್ನುವುದು ವೈಜ್ಞಾನಿಕ ಪರೀಕ್ಷೆಗಳಿಂದ ಸಾಬೀತಾದರೂ ಅವರೇ ಘೋಷಣೆಗಳನ್ನು ಕೂಗಿದ್ದು ಎಂದು ಬಡಬಡಾಯಿಸಿದರು ಮಾನ್ಯ ಕುಲಕರ್ಣಿ. ಇನ್ನು ಪಠಾಣ್‌ಕೋಟ್ ಸೇನಾ ನೆಲೆ ಮೇಲೆ ಭಯೋತ್ಪಾದಕರ ದಾಳಿ ನಡೆದದ್ದನ್ನು ಪ್ರಸ್ತಾವಿಸಿದ ಅವರು ಕೇವಲ ಆರು ಮಂದಿ ಅಲ್ಲಿ ಅಡಗಿಕೊಂಡಿದ್ದರು, ಇದು ಯಾಕಾಯಿತು, ಹೇಗಾಯಿತು ಎಂದು ಕೇಳಿದರು. ಸ್ವಾಮಿ, ಇದು ದೇಶಭಕ್ತಿಯ ಗುತ್ತಿಗೆ ತೆಗೆದುಕೊಂಡ ಬಿಜೆಪಿ ಸರಕಾರದ ವೈಫಲ್ಯ ಅಲ್ಲವೇ?

ಬೇರೆ ಸಂದರ್ಭದಲ್ಲಾಗಿದ್ದರೆ ಕಾಂಗ್ರೆಸ್ ಸರಕಾರ, ಕಮ್ಯೂನಿಸ್ಟರು ಇದಕ್ಕೆಲ್ಲಾ ಹೊಣೆ ಎಂದು ಬೊಂಬ್ಡಾ ಹೊಡೆಯುವ ನಿಮಗೆ ಇದು ಹೊಳೆಯಲಿಲ್ಲವೇ?

ಸಭೆಯಲ್ಲಿ ಮಾತನಾಡಿದ ಸೇನೆಯ ಚಿಕ್ಕಮಗಳೂರು ಘಟಕದ ಅಧ್ಯಕ್ಷ ಮಹೇಶ ಕಟ್ಟಿನಮನಿ, ಕುರಾನ್ ಪ್ರತಿಗಳನ್ನು ವಿತರಿಸುವವರ ಕೈಗಳನ್ನು ಕತ್ತರಿಸಬೇಕು ಎಂದು ಕರೆ ನೀಡಿದರು. ಕುರಾನ್ ರಾಷ್ಟ್ರ–ವಿರೋಧಿ ಭಾವನೆಗಳನ್ನು ಕೆರಳಿಸುತ್ತದೆ, ಲವ್ ಜಿಹಾದ್ ಹಾಗೂ ಭಯೋತ್ಪದನೆಯನ್ನು ಪ್ರೇರೇಪಿಸುತ್ತದೆ. ಆದ್ದರಿಂದ ಅದನ್ನು ವಿತರಿಸುವವರ ಕೈಗಳನ್ನು ಕತ್ತರಿಸಬೇಕು ಎಂಬ ಕುಹಕ ವಾದವನ್ನು ಮಂಡಿಸಿದರು. ನಗರದ ಹಿರಿಯ ವಕೀಲ ಕೆ.ವಿ. ಶಂಕರಪ್ಪ ಅವರಂತೂ ಎಲ್ಲಾ ಬುದ್ಧಿಜೀವಿಗಳು ಮತ್ತು ಎಡಪಂಥೀಯರು ದೇಶದ್ರೋಹಿಗಳು ಎಂಬ 'ಸರ್ಟಿಫಿಕೆಟ್' ನೀಡಿದರು! ಶಂಕರಪ್ಪ ಭಾರತ ಸ್ಕೌಟ್ ಮತ್ತು ಗೈಡ್ಸ್‌ನ ಜಿಲ್ಲಾ ಮುಖ್ಯ ಆಯುಕ್ತರಾಗಿದ್ದು ಅವರು ಯುವ ಮನಸ್ಸುಗಳಿಗೆ ಅದೆಂಥಾ ಮಾರ್ಗದರ್ಶನ ನೀಡುತ್ತಾರೋ ಎನ್ನುವುದು ಆತಂಕದ ಸಂಗತಿಯಾಗಿದೆ.

ಅಂತೂ, ಶ್ರೀರಾಮ ಸೇನೆಯೇ ಆಗಲಿ ಇನ್ನಾವುದೇ ಕೇಸರಿ ಪಡೆಯ ಸಂಘಸಂಸ್ಥೆಯೇ ಆಗಲಿ, ಅದರ ನಿಜವಾದ ಮುಖವಾಡ ಇಂಥ ಕಾರ್ಯಕ್ರಮಗಳಲ್ಲಿ ಕಳಚಿಬೀಳುತ್ತದೆ.

ಆದರೆ, ಜನರ ನಡುವೆ ದ್ವೇಷ ಬಿತ್ತುವ ಈ ರೀತಿಯ ನೇರಾನೇರ ಪ್ರಚೋದನಕಾರಿ ಭಾಷಣಗಳನ್ನು ಮಾಡಿದರೂ ಅಂಥವರ ವಿರುದ್ಧ ಸರಕಾರ ಯಾವುದೇ ರೀತಿಯ ಕ್ರಮಕೈಗೊಳ್ಳದಿರುವುದು ಕಾಂಗ್ರೆಸ್ ಕೂಡ ಹಿಂದೂತ್ವದ ಕುರಿತು ಮೃದು ಧೋರಣೆ ಹೊಂದಿದೆ ಎಂಬ ಆರೋಪಕ್ಕೆ ಪುಷ್ಟಿ ನೀಡುತ್ತದೆ ಅಷ್ಟೆ.

– ವಿಶ್ವಾಸ್

ಮಾಹಿತಿ ಹಕ್ಕು ಕಾರ್ಯಕರ್ತ ಬಾಳಿಗ ಕೊಲೆ : ಪ್ರತಿರೋಧಕ್ಕೆ ಸಿದ್ಧತೆ

ಕರಾವಳಿ ಕರೆ

ವರದಿ: ವಾ. ಉಚ್ಚಿಲ

ಮಾಹಿತಿ ಹಕ್ಕು ಕಾರ್ಯಕರ್ತ ಮಂಗಳೂರಿನ ವಿನಾಯಕ ಬಾಳಿಗ (51ವರ್ಷ) ಕೊಲೆಯಾಗಿದ್ದಾರೆ. ಮಂಗಳೂರಿನ ರಥ ಬೀದಿಯಲ್ಲಿರುವ ವೆಂಕಟರಮಣ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಮಾಡುವ ಪದ್ಧತಿ ಇಟ್ಟುಕೊಂಡಿದ್ದರು. ಮನೆಯಿಂದ ಅನತಿ ದೂರದಲ್ಲಿ ಮಾರ್ಚ್ 21 ರಂದು ಬೆಳಿಗ್ಗೆ ಸುಮಾರು ಗಂಟೆ 6–6.30ರ ಮಧ್ಯೆ ಅವಧಿಯಲ್ಲಿ ಕೊಲೆಗಡುಕರು ಅವರನ್ನು ಆಯುಧಗಳಿಂದ ಹೊಡೆದು ಕೊಲೆ ಮಾಡಿದ್ದಾರೆ.

ವಿನಾಯಕ ಬಾಳಿಗ ಮಾಹಿತಿ ಹಕ್ಕು ಕಾರ್ಯಕರ್ತರಾಗಿದ್ದಾರೆಂದು ಬೆಳಕಿಗೆ ಬಂದುದು ಆನಂತರವೇ. ವೃದ್ಧರಾದ ತಂದೆ, ತಾಯಿ, ಅವಿವಾಹಿತರಾದ ಇಬ್ಬರು ತಂಗಿಯರಿಗೆ ಅವರೇ ಆಸರೆಯಾಗಿದ್ದರು. ಅವರ ಸಾವಿನಿಂದ ಮಧ್ಯಮ ವರ್ಗದ ಅವರ ಕುಟುಂಬ ನಿರ್ಗತಿಕವಾಗಿದೆ.

ತನ್ನ ಸುತ್ತಮುತ್ತಲ ಸಮಾಜದಲ್ಲಿ ಭ್ರಷ್ಟಾಚಾರ, ಸಾರ್ವಜನಿಕ ವಂಚನೆ ಇತ್ಯಾದಿ ನಡೆಯಬಾರದೆಂದೂ ನಡೆಯುತ್ತಿದ್ದಲ್ಲಿ ಅದನ್ನು ತನ್ನ ಮಟ್ಟದಲ್ಲಿ ತಡೆಯಲು ಸಾಧ್ಯವೆಂಬ ವೈಯುಕ್ತಿಕ ನಂಬಿಕೆಯೇ ಅವರನ್ನು ಮಾಹಿತಿ ಹಕ್ಕು ಕಾರ್ಯಕರ್ತನಾಗಲು ಪ್ರೇರೇಪಿಸಿರಬೇಕು. ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಮಂಗಳೂರಿನಲ್ಲಿ ಆರಾಧಿಸುತ್ತಿರುವ ವೆಂಕಟರಮಣ ದೇವಸ್ಥಾನದಲ್ಲಿ ಯಾವೊಂದು ಮೋಸ ವಂಚನೆ ನಡೆಯಬಾರದೆಂದು, ದೇವಸ್ಥಾನದ ಹಿಂದಿನ ಟ್ರಸ್ಟಿಗಳ ಅವಧಿಯಲ್ಲಿ ನಡೆದಿರಬಹುದಾದ ಹಣದ ಅವ್ಯವಹಾರವನ್ನು ಪ್ರಶ್ನಿಸಿ ಅವರು ದಾವೆ ಹೂಡಿದ್ದರು. ಹೈಕೋರ್ಟ್‌ಗೂ ಮೇಲ್ಮನವಿ ಸಲ್ಲಿಸಿದ್ದರು. ಹೈಕೋರ್ಟ್ ನಿರ್ದೇಶನದಂತೆ ಕೆಳಗಿನ ಕೋರ್ಟ್ ಮರುವಿಚಾರಣೆ ನಡೆಸಿ ದೇವಸ್ಥಾನದ ಟ್ರಸ್ಟಿಗಳ ನೇಮಕಕ್ಕೆ ಸಂಬಂಧಿಸಿ 1927ರಲ್ಲಿ ಮಾಡಲಾಗಿದ್ದ ನಿಯಾಮಾವಳಿಗಳನ್ನು ಬದಲಾಯಿಸಬಹುದೆಂದು ಟ್ರಸ್ಟ್‌ಗೆ ನಿರ್ದೇಶನ ನೀಡಿತ್ತು. ಇದೇ ವೇಳೆ ದೇವಾಲಯದಲ್ಲಿ 2008–2015ರ ಅವಧಿಯಲ್ಲಿ ನಡೆದಿದ್ದ ಆಡಿಟನ್ನು ಮರು ಆಡಿಟ್ ಮಾಡಬೇಕೆಂಬ ಬಾಳಿಗ ಮತ್ತು ಅವರ ಸಹಚರರ ಅರ್ಜಿಯನ್ನು ಮಾನ್ಯ ಮಾಡಿ, ಆಡಿಟರೊಬ್ಬರ ನೇಮಕ ಕೂಡಾ ಮಾಡಲಾಗಿತ್ತು. ಅವರು ಇನ್ನೇನು ಕಾರ್ಯಾರಂಭಿಸುವವರಿದ್ದರು. ದೇವಸ್ಥಾನದ ಹಳೆಯ ಟ್ರಸ್ಟಿಗಳು ಗೌಡ ಸಾರಸ್ವತ ಸಮಾಜದ ಪ್ರತಿಷ್ಟಿತರು ಟ್ರಸ್ಟಿಗಳು ಸೇರಿ ದೇವಸ್ಥಾನದ ಆದಾಯನ್ನು ಮರೆಮಾಚಿದ್ದಾರೆಂದೂ ದೇವರಿಗೆ ಕಾಣಿಕೆಯಾಗಿ ಬಂದ ಚಿನ್ನಾಭರಣಗಳ ಯಾದಿಯನ್ನೇ ಇರಿಸಿಲ್ಲವೆಂದು ವಿನಾಯಕ ಬಾಳಿಗರ ಆರೋಪ. ಈ ಹಿನ್ನೆಯಲ್ಲಿ ಬಾಳಿಗರ ಬಾಯಿ ಮುಚ್ಚಿಸಲು ಸುಪಾರಿ ಹತ್ಯೆಗಾರರಿಂದ ಕೊಲೆ ಮಾಡಿಸಿರಬೇಕೆಂಬ ಸಂದೇಹವಿದೆ.

23 ಮತ್ತು 26 ವರ್ಷ ಪ್ರಾಯದ ಇಬ್ಬರು ಯುವಕರನ್ನು ಹಂತಕರೆಂದು ಗುರುತಿಸಿ ಪೋಲೀಸರು ಮಾರ್ಚ್ 27 ರಂದೇ ಬಂಧಿಸಿದ್ದರೂ ಈ ಯುವಕರಿಗೆ ಕೊಲೆಗೆ ಸುಪಾರಿ ನೀಡಿದವರು ಯಾರು ಎಂಬುದನ್ನು ಪೋಲೀಸರಿನ್ನೂ ಬಹಿರಂಗಗೊಳಿಸಿಲ್ಲ. ಕೊಂಕಣಿ ಸಮುದಾಯದ ಗಣ್ಯ ವ್ಯಕ್ತಿಯೂ ಹಿಂದೂತ್ವ ವಲಯದಲ್ಲಿ ಮಾರ್ಗದರ್ಶಕ ಸ್ಥಾನದಲ್ಲಿರುವ ಒಬ್ಬಾತ ನಾಪತ್ತೆಯಾಗಿರುವುದಾಗಿ ತಿಳಿದು ಬರುತ್ತದೆ.

ವೆಂಕಟರಮಣ ದೇವಳಕ್ಕೆ ಸಂಬಂಧಿಸಿ ಜಾತಿ ಬಾಂಧವನಾಗಿ ಹಾಗೂ ದೇವರ ಭಕ್ತನಾಗಿ ವಿನಾಯಕ ಬಾಳಿಗರು ದಾವೆಗಳನ್ನು ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಅವರು ಮಾಹಿತಿ ಹಕ್ಕು ಕಾರ್ಯಕರ್ತನ ನೆಲೆಯಲ್ಲಿ ಹತ್ತಾರು ಪ್ರಕರಣಗಳಲ್ಲಿ ಬೇರೆ ಬೇರೆ ಇಲಾಖೆಗೆ ಅರ್ಜಿ ಸಲ್ಲಿಸಿ ಮಾಹಿತಿ ಸಂಗ್ರಹ ಮಾಡುತ್ತಾ ಬಂದಿದ್ದಾರೆನ್ನುವುದು ಅವರ ಕೊಲೆಯ ಬಳಿಕ ಅವರ ಮನೆಯಲ್ಲಿ ಜಾಲಾಡಿದಾಗ ಸಿಕ್ಕಿದ ಕಾಗದ ಪತ್ರಗಳಿಂದ ತಿಳಿದು ಬರುತ್ತದೆ.

ಪ್ರಮುಖವಾಗಿ ವಿಶ್ವ ಹಿಂದೂ ಪರಿಷತ್ತಿನ ಮಂಗಳೂರಿನ ಅಧ್ಯಕ್ಷರೂ ಶ್ರೀ ಶಾರದಾ ವಿದ್ಯಾಲಯ ವಿದ್ಯಾ ಸಂಸ್ಥೆಗಳ ಅಧ್ಯಕ್ಷರೂ ಆದ ಪ್ರೊ.ಎಂ.ಬಿ.ಪುರಾಣಿಕ್ ಅವರ ಆಡಳಿತದ ಮಂಗಳೂರು ಕೊಡಿಯಾಲ್‌ಬೈಲ್‌ನಲ್ಲಿರುವ ಶ್ರೀ ಶಾರದಾ ವಿದ್ಯಾಲಯ ಸಂಕೀರ್ಣದ ಕಟ್ಟಡಕ್ಕೆ ನೆಲಮಾಳಿಗೆ ಮತ್ತು 2 ಅಂತಸ್ತುಗಳಿಗೆ ಅನುಮತಿ ಪಡೆದು ಅದಕ್ಕೂ ಮೇಲಕ್ಕೆ 3 ಅಂತಸ್ತು ಕಾಲೇಜ್ ಕಟ್ಟಡವನ್ನು ಏರಿಸಿ ಕಟ್ಟಿರುವ ಪ್ರಕರಣದ ಕುರಿತು ಮಂಗಳೂರು ನಗರಾಡಳಿತಕ್ಕೆ ವಿನಾಯಕ ಬಾಳಿಗ ಅರ್ಜಿ ಸಲ್ಲಿಸಿದ್ದರು. ಸದ್ರಿ ಪ್ರಕರಣದಲ್ಲಿ ಅಕ್ರಮವಾಗಿ ಹೆಚ್ಚುವರಿಯಾಗಿ ಕಟ್ಟಲಾದ ಭಾಗಗಳನ್ನು ಕೆಡವಿ ವರದಿ ಮಾಡಬೇಕೆಂದು ನಗರಾಡಳಿತ ನಿರ್ದೇಶನ ನೀಡಿತ್ತು. ಮಾರ್ಚ್ 24ರಂದು ಎಂ.ಬಿ.ಪುರಾಣಿಕ್ ಅವರು ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗಬೇಕಿತ್ತು. ಆದರೆ ಮಾರ್ಚ್ 21 ರಂದು ಬಾಳಿಗರ ಕೊಲೆಯಾಗಿದೆ.

ವಿಚಾರವಾದಿ ಸಂಘಗಳ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷರೂ ಮಾನವ ಹಕ್ಕು ಹೋರಾಟಗಾರರೂ ಆಗಿರುವ ಪ್ರೊ. ನರೇಂದ್ರ ನಾಯಕ್ ವಿನಾಯಕ ಬಾಳಿಗ ಅವರನ್ನು ಆರ್‌ಟಿಐ ಕಾರ್ಯಕರ್ತನೆಂದು ಗುರುತಿಸಿ ಸಾರ್ವಜನಿಕಗೊಳಿಸಿದ ಮೇಲೆ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ವಿನಾಯಕ ಬಾಳಿಗ ಅವರ ಕೊಲೆಯ ತನಿಖೆಯಲ್ಲಿ ಶೀಘ್ರವಾಗಿ ನಡೆಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಅವರ ಮನೆಗೂ ಭೇಟಿ ನೀಡಿ ಮನೆಯ ಸದಸ್ಯರನ್ನು ಮಾತನಾಡಿಸಿದ್ದಾರೆ. ಎಪ್ರಿಲ್ 6 ರಂದು ಅವರ ಮನೆಯ ಆವರಣದೊಳಗಡೆ ಸಂತಾಪ ಸೂಚಕ ಸಭೆಯನ್ನು ಏರ್ಪಡಿಸಿದ್ದಾರೆ.

ಡಿವೈಎಫ್‌ಐ, ವಿಚಾರವಾದಿ ಸಂಘ, ಸಮುದಾಯ, ದಸಂಸ (ಕೃಷ್ಣಪ್ಪ ಸ್ಥಾಪಿತ) ದಸಂಸ(ಅಂಬೇಡ್ಕರ್‌ವಾದ), ಎಸ್‌ಎಫ್‌ಐ ಮಾರ್ಚ್ 30 ರಂದು ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ವಿನಾಯಕ ಬಾಳಿಗ ಅವರ ಕೊಲೆ ತನಿಖೆಯನ್ನು ಉನ್ನತ ಮಟ್ಟದ ಪೋಲೀಸ್ ಅಧಿಕಾರಿಗಳಿಂದ ನಡೆಸಬೇಕೆಂದೂ ಈಗ ನಿರ್ಗತಿಕವಾಗಿರುವ ವಿನಾಯಕ ಬಾಳಿಗ ಅವರ ಕುಟುಂಬಕ್ಕೆ ಶೀಘ್ರ ಯೋಗ್ಯ ಪರಿಹಾರಧನ ಸರಕಾರ ನೀಡಬೇಕೆಂದೂ ಆಗ್ರಹಿಸಿರುತ್ತದೆ. ಆರ್‌ಟಿಐ ಕಾರ್ಯಕರ್ತರನ್ನು ಎದೆಗುಂದಿಸಿರುವ ಈ ಕೊಲೆಯ ಸರಿಯಾದ ತನಿಖೆಯಾಗಬೇಕೆಂಬುದೇ ಸಂಘಟನೆಗಳ ಒತ್ತಾಯ. ಗೋಸಾಗಣೆ, ಯುವ ಹೆಣ್ಣುಗಂಡು ಜೋಡಿಗಳ ಬೆಂಬತ್ತುವ ಹಿಂದುತ್ವದ ಪಡೆಗಳಾಗಲೀ ಅವರಿಗೆ ಪೋಷಣೆ ನೀಡುವ ಶ್ರೀಮಂತ ಜಿಎಸ್‌ಬಿ ಜನರಾಗಲೀ ಮೇಲುಜಾತಿಯ ತಮ್ಮಲ್ಲೊಬ್ಬನ ಅದೂ ಅತ್ಯಂತ ಧಾರ್ಮಿಕನಾದವನೊಬ್ಬನ ಕೊಲೆಯಾಗಿದ್ದರೂ ಬಾಯಿ ಮುಚ್ಚಿ ಮೌನವಾಗಿರುವುದು ಏನನ್ನು ತೋರಿಸುತ್ತದೆ? ●

ಮಂಗಳೂರು ನಗರ ನಿವೇಶನ-ರಹಿತರ ಎರಡನೇ ಸಮಾವೇಶ:

2014 ಸಪ್ಟಂಬರ್‌ನಲ್ಲಿ ಮಂಗಳೂರು ನಗರ ನಿವೇಶನ–ರಹಿತರ ಪ್ರಥಮ ಸಮಾವೇಶ ನಡೆದಂದಿನಿಂದ ನಿವೇಶನ ರಹಿತರ ಹೋರಾಟ ಸಾಕಷ್ಟು ಮುನ್ನಡೆ ಸಾಧಿಸಿದೆ. ನಗರ ಪಾಲಿಕೆಯ ಎದುರು ಧರಣಿ ಸತ್ಯಾಗ್ರಹಗಳು, ಶಾಸಕರ ಕಚೇರಿ ಮುಂದೆ ಧರಣಿ, ಮಹಾನಗರ ಪಾಲಿಕೆ ಎದುರು ನಡೆದ 14 ಸಪ್ಟೆಂಬರ್ 2015ರ ಮಹಾಧರಣಿ ಹಾಗೂ ಅದಕ್ಕೆ ಪೂರಕವಾದ ಸ್ಥಳೀಯ ಕಾರ್ಯಕ್ರಮಗಳು – ಇವೆಲ್ಲವುಗಳಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿರುವ ನಿವೇಶನ ರಹಿತರು ಬಹುಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಮಹಾನಗರ ಪಾಲಿಕೆಯು ಈ ಹೋರಾಟಕ್ಕೆ ಸ್ಪಂಧಿಸಲೇಬೇಕಾಯಿತು. ಮಂಗಳೂರು ನಗರದ ಸುರತ್ಕಲ್ ಇಡ್ಯಾಗಳಲ್ಲಿ 1–85, 3–5 ಎಕ್ರೆಯ ಎರಡು ನಿವೇಶನ ಜಮೀನು, ಶಕ್ತಿನಗರದಲ್ಲಿರುವ 4.5 ಎಕ್ರೆ ಜಮೀನು ಮತ್ತು ಕಣ್ಣೂರು ಕನ್ನಗುಡ್ಡೆ ಎಂಬಲ್ಲಿರುವ 11 ಎಕ್ರೆ ಜಮೀನನ್ನು ನಿವೇಶನಗಳಿಗಾಗಿಯೇ ಕಾದಿರಿಸಲಾಗಿದೆ ಎಂದು ಪಾಲಿಕೆ ಘೋಷಿಸಬೇಕಾಯಿತು. ಅಲ್ಲದೆ ನಿವೇಶನ ರಹಿತರ ಹೋರಾಟ ಸಮಿತಿಯಿಂದ ಅರ್ಜಿ ಸಲ್ಲಿಸಿದವರು ಪಾಲಿಕೆಯ ನಿಗದಿತ ನಮೂನೆ ಹಾಗೂ ಲಗತ್ತುಗಳೊಂದಿಗೆ ಅರ್ಜಿ ಸಲ್ಲಿಸಲು ತಿಳಿಸಬೇಕಾಯಿತು. ಕ್ರಮಬದ್ಧ ಅರ್ಜಿಗಳ ಪಟ್ಟಿಯನ್ನು ಒದಗಿಸುವಂತೆ ಮಾಹಿತಿ ಹಕ್ಕಿನಡೆ ವಿಚಾರಿಸಿದಾಗ 2010 ರಿಂದ ಮೊದಲ್ಗೊಂಡು 1300 ಅರ್ಜಿದಾರರ ಪಟ್ಟಿಯನ್ನು ಒದಗಿಸಬೇಕಾಯಿತು. ಇದರಲ್ಲಿ ಬಹುಪಾಲು ನಿವೇಶನ ರಹಿತರ ಹೋರಾಟ ಸಮಿತಿಯಿಂದ ನೀಡಲಾದುದು ಎಂಬ ಸತ್ಯ ಇದ–ರಿಂದ ಗೊತ್ತಾಯಿತು. ಮತ್ತು ಆ ಪಟ್ಟಿಯ ಮಧ್ಯೆ ಪಾಲಿಕೆಯ ಪ್ರತಿನಿಧಿಗಳು ತಮ್ಮ ಅಭ್ಯರ್ಥಿಗಳನ್ನು ತೂರಿಸುವುದು ಸಾಧ್ಯವಿಲ್ಲದ ಪರಿಸ್ಥಿತಿಯನ್ನು ತರಲಾಯಿತು. ಕಾದಿರಿಸಿದ ನಿವೇಶನಗಳಲ್ಲಿ ಜಿ ಪ್ಲಸ್ ಟು ಮಾದರಿಯ ಮಹಡಿ ಮನೆಗಳನ್ನು ಪಾಲಿಕೆಯೇ ಕಟ್ಟಿಸಿ ಕೊಂಡಿರುವುದಾಗಿಯೂ, ಅದಕ್ಕೆ ಅರ್ಜಿದಾರರು ಬ್ಯಾಂಕಿನಿಂದ ಪಡೆಯಬೇಕಾದ ಸಾಲ ಹಾಗೂ ಸ್ವ–ಂತ ದೇಣಿಗೆಗಳನ್ನು ಪಾಲಿಕೆ ನಿಗದಿಗೊಳಿಸುವುದು ಸಾಧ್ಯವಾಯಿತು.



ನಿವೇಶನ ರಹಿತರು ಒಂದೊಂದೇ ಗೆಲುವನ್ನು ಸಾಧಿಸುತ್ತಾ ಮುನ್ನಡೆಯುವ ಸಂದರ್ಭದಲ್ಲಿ ಚಳುವಳಿಯನ್ನು ಬಲಗೊಳಿಸುವ ದೃಷ್ಟಿಯಿಂದ ಮೊನ್ನೆ ಮಾರ್ಚ್ 27 ರಂದು ಎರಡನೇಯ ಸಮಾವೇಶವನ್ನು ಮಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. 560ಕ್ಕೂ ಮೀರಿದ ನಿವೇಶನ ರಹಿತರ ಹೋರಾಟ ಸಮಿತಿಯ ಸದಸ್ಯರು ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿಕೊಂಡು ಸಭಾಕಲಾಪಗಳಲ್ಲಿ ಭಾಗವಹಿದ್ದು ವಿಶೇಷವಾಗಿತ್ತು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಸಮಾವೇಶವನ್ನು ಉದ್ಘಾಟಿಸಿದರು. ನಿವೇಶನ ರಹಿತರ ಸಂಘಟನೆಯ ಅಧ್ಯಕ್ಷರಾದ ಪ್ರೇಮನಾಥ ಜಲ್ಲಿಗುಡ್ಡೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಸಂತೋಷ್ ಶಕ್ತಿನಗರ ಮಂಡಿಸಿದ ಸಂಘಟನೆಯ ವರದಿ, ಹೋರಾಟಗಳನ್ನು ಸದಸ್ಯರಿಗೆ ಮರುನೆನಪಿಸಿತು. ಸಮಾವೇಶವನ್ನು ಉದ್ದೇಶಿಸಿ ಹೋರಾಟ ಸಮಿತಿಯ ಸಲಹೆಗಾರರಾದ ಕೃಷ್ಣಪ್ಪ ಕೊಂಚಾಡಿ, ಸಿಪಿಐ(ಎಂ) ಪಾಲಿಕೆ ಸದಸ್ಯರಾದ ದಯಾನಂದ ಶೆಟ್ಟಿ, ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಜಯಂತಿ ಶೆಟ್ಟಿ, ವಾಸುದೇವ ಉಚ್ಚಿಲ ಮಾತನಾಡಿದರು. ಸಮಿತಿಯ ಮಾರ್ಗದರ್ಶಕರಾದ ಸುನಿಲ್ ಕುಮಾರ್ ಬಜಾಲ್ ಮುಂದಿನ ಅವಧಿಗೆ ಸಮಿತಿಯ ಆಯ್ಕೆಗೆ ಮಾರ್ಗದರ್ಶನ ನೀಡಿದ್ದಲ್ಲದೆ, ಸಮಾರೋಪ ಭಾಷಣ ಮಾಡಿದರು.

ಪ್ರೇಮನಾಥ ಜಲ್ಲಿಗುಡ್ಡೆ, ಸಂತೋಷ್ ಶಕ್ತಿನಗರ, ಪ್ರಭಾವತಿ ಬೋಳೂರು ಇವರು ಕ್ರಮವಾಗಿ ಅ ಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಖಜಾಂಚಿಯಾಗಿದ್ದ ಯೋಗೀಶ್ ಜಪ್ಪಿನಮೊಗರು ಕಾರ್ಯಕ್ರಮ ನಿರೂಪಿಸಿದರು. ●

ಫೇಸ್ ಬುಕ್‌ನಲ್ಲಿ

ಗಣಿ ಉಧ್ಯಮಿಗಳಿಗೆ ಮಣಿ ಹಾಕಿದ ಬಳ್ಳಾರಿಯ ವಿ.ವಿ

ಭೂಮಿಯನ್ನು ಕೊಳ್ಳೆ ಹೊಡೆದ ಬಳ್ಳಾರಿ ಈಗ ಮತ್ತೆ ಸುದ್ದಿಯಲ್ಲಿದೆ. ಅಂದು ಗಣಿಧಣಿಗಳು ಭೂಮಿ ಕೊಳ್ಳೆ ಹೊಡೆದರು ಇಂದು ಶಿಕ್ಷಣ ಕೊಳ್ಳೆ ಹೊಡೆಯಲು ಹೊರಟಿರುವ ವಿಸಿ ಸುಬ್ಬಣ್ಣ ಹಣ ನೀಡಿದವರಿಗೆ ವೇದಿಕೆ, ಭ್ರಷ್ಟಾಚಾರ ಮಾಡಿದವರಿಗೆ ಗೌರವ ಡಾಕ್ಟರೇಟ್ ನೀಡಿದ್ದಾರೆ. .. ..

ಖಾಸಗೀಕರಣದ ಮುಖವಾಡ ಹಾಕಿ, ದೊಡ್ಡವರ ಕಡೆಯಿಂದ ಹಣ ಬಾಚಿಕೊಂಡು ಅವರು ಹೇಳಿದಂತೆ ನೆಲ ನೆಕ್ಕುವ ಕೆಲಸ ಮಾಡುವ ಬಳ್ಳಾರಿ ವಿ.ವಿ ಯ ಉಪ ಕುಲಪತಿ ಸುಭಾಸ್ ಬಳ್ಳಾರಿ ವಿ.ವಿ.ಯನ್ನು ಮಾರಲು ಹೊರಟಿದ್ದಾರೆ. ಹಣಕ್ಕೆ ತಕ್ಕಂತೆ ಕುಣಿಯುವ ಸುಬ್ಬಣ್ಣ ಅವೈಜ್ಞಾನಿಕ ನೀತಿಗಳ ಮೂಲಕ ವಿದ್ಯಾರ್ಥಿಗಳ ಬದುಕನ್ನು ಮಾರಾಬಟ್ಟೆ ಮಾಡಿದ್ದಾರೆ. ಈಗ ಘಟಿಕೋತ್ಸವಕ್ಕೆ ಬುಲ್ಡೋಟ್ ಕಂಪನಿಯ ಮುಖ್ಯಸ್ಥ ನರೇಂದ್ರ ಕುಮಾರವರನ್ನು ಮುಖ್ಯ ಅತಿಥಿಯಾಗಿ ಕರೆದಿದ್ದಾರೆ. ಜಿಂದಾಲ್ ಸಂಸ್ಥೆಯ ಮುಖ್ಯಸ್ಥ ಸಜ್ಜನ್ ಜಿಂದಾಲ್ ರವರಿಗೆ ಗೌರವ ಡಾಕ್ಟರೇಟ್ ನೀಡಿದ್ದಾರೆ.

– ಗುರುರಾಜ ದೇಸಾಯಿ

ಈ ವಾರ ಚರಿತ್ರೆಯಲ್ಲಿ

March 29 1943

ಕಯ್ಯೂರು ಹುತಾತ್ಮರ ದಿನ



ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದ, ಕಾಸರಗೋಡಿನ ಕಯ್ಯೂರು ಗ್ರಾಮದಲ್ಲಿ ಬ್ರಿಟಿಷ್ ವಸಾಹತುಶಾಹಿಗಳ, ಅವರ ಸ್ಥಳೀಯ ಚಮಚಾಗಳಾಗಿದ್ದ ಜಮೀನ್ದಾರರ ವಿರುದ್ಧ ಗೇಣಿದಾರ ರೈತರ ಸಮರಶೀಲ ಹೋರಾಟವನ್ನು ಕಟ್ಟಿ, ಬ್ರಿಟಿಷರ ನೇಣುಕುಣಿಕೆಗೆ ತಲೆಕೊಟ್ಟ ಧೀರ ಕಮ್ಯುನಿಸ್ಟರಾದ ಅಪ್ಪು, ಚಿರಕುಂಡ, ಕುಂಞಂಬು, ಅಬೂಬಕ್ಕರ್ ಅವರ ಬಲಿದಾನ ಕೊಟ್ಟ ದಿನ. ಭಗತ್ ಸಿಂಗ್ ಮತ್ತಾತನ ಸಂಗಾತಿಗಳಂತೆ ತಮ್ಮ ಎಳೆ ಯೌವನದಲ್ಲೇ ಹುತಾತ್ಮರಾದ ಸಂಗಾತಿಗಳು ಸಮಾನತೆಯ ಕನಸುಗಾರರಿಗೆ ಸದಾ ಸ್ಫೂರ್ತಿ.

ಇವರನ್ನು ಬಂಧಿಸಿಟ್ಟದ್ದು, ವಿಚಾರಣೆ ನಡೆಸಿದ್ದು, ಮರಣ ದಂಡನೆ ತೀರ್ಪು ನೀಡಿದ್ದು ಮಂಗಳೂರಿನಲ್ಲಿ. ಇವರ ತ್ಯಾಗ ಬಲಿದಾನದಿಂದಲೇ ಕರಾವಳಿ ಕರ್ನಾಟಕ, ಉತ್ತರ ಕೇರಳದಲ್ಲಿ ಸ್ವಾತಂತ್ರ್ಯ ಹೋರಾಟ, ರೈತ ಹೋರಾಟಕ್ಕೆ ಶಕ್ತಿ, ವೇಗ ದೊರಕಿತು. ಈ ಸಂಗಾತಿಗಳ ಹೋರಾಟದ ನೈಜ ಕಥೆಯನ್ನು ನಿರಂಜನ ತಮ್ಮ ಚಿರಸ್ಮರಣೆ ಕಾದಂಬರಿಯಲ್ಲಿ ಅಧ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ಇದು ಅವಿಭಜಿತ ದಕ್ಷಿಣ ಕನ್ನಡದ ಚಳುವಳಿಯ ಚರಿತ್ರೆ. ಇಲ್ಲಿ ಶೋಷಿತರ ಪರ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದು, ತ್ಯಾಗ ಬಲಿದಾನಗಳನ್ನು ಮಾಡಿದ್ದು, ಗಲ್ಲುಗಂಭದಲ್ಲಿ ತೂಗಾಡಿದ್ದು ಕಮ್ಯುನಿಸ್ಟರು. ಕಮ್ಯುನಿಸ್ಟರ, ಮುಸ್ಲಿಮರ ದೇಶಪ್ರೇಮವನ್ನು ದಿನಂಪ್ರತಿ ಪ್ರಶ್ನಿಸುವ ಅಂದಿನ ಬ್ರಿಟಿಷ್ ಸರಕಾರದ ಸೇವಕರಾಗಿದ್ದ, ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಭಾಗವಹಿಸದಿದ್ದವರ ಇಂದಿನ ತಲೆಮಾರಿಗೆ, ಅವರ ಉನ್ಮಾದದ ದೇಶಭಕ್ತಿಗೆ ಕಯ್ಯೂರು ಹುತಾತ್ಮರು ಸಶಕ್ತ ಉತ್ತರ.

ಕಯ್ಯೂರು ಹುತಾತ್ಮರಿಗೆ ಲಾಲ್ ಸಲಾಂ.

ಉತ್ತರಾಖಂಡ: ಪ್ರಜಾಪ್ರಭುತ್ವದ ಮೇಲೆ ಹಲ್ಲೆ

ಬಿಜೆಪಿ ಸರಕಾರ ಈ ಹಿಂದೆ ಕಾಂಗ್ರೆಸ್ ಪಕ್ಷಪಾತದಿಂದ ,ಸಿನಿಕತನದಿಂದ ಅನುಸರಿಸಿದ್ದ ಅದೇ ಹಾದಿಯನ್ನು ತುಳಿಯುತ್ತಿದೆ. ಯಾವ ರೀತಿಯಲ್ಲಿ ನೋಡಿದರೂ ಮೋದಿ ಸರಕಾರದ ಕ್ರಮಗಳು ಬೊಮ್ಮಾಯಿ ತೀರ್ಪನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ.
ಈ ಹಿನ್ನೆಲೆಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದು ದೂರಗಾಮಿ ನಿಲುವನ್ನು ತಳೆಯಬೇಕಾಗಿದೆ, 356ನೇ ವಿಧಿಯನ್ನೇ ತೆಗೆದು ಹಾಕಬೇಕು ಹಾಗೂ ರಾಜ್ಯಗಳ ಹಕ್ಕುಗಳು ಮತ್ತು ಒಕ್ಕೂಟ ವ್ಯವಸ್ಥೆಯ ತತ್ವವನ್ನು ರಕ್ಷಿಸುವ ಕೆಲವು ಸೂಕ್ತ ನಿಯಮಗಳನ್ನು ಅದರ ಸ್ಥಾನದಲ್ಲಿ ತರಬೇಕು ಎಂದು ಆಗ್ರಹಿಸಬೇಕು.



ಪ್ರಕಾಶ ಕಾರಟ್

ಉತ್ತರಾಖಂಡದಲ್ಲಿ ರಾಷ್ಟ್ರಪತಿ ಆಡಳಿತ ಹೇರಿರುವುದು ಮತ್ತು ಹರೀಶ್ ರಾವತ್ ಸರಕಾರವನ್ನು ವಜಾ ಮಾಡಿರುವುದು ಪ್ರಜಾಪ್ರಭುತ್ವ, ಸಂವಿಧಾನದ ನಿಯಮಗಳು ಮತ್ತು ರಾಜ್ಯಗಳ ಹಕ್ಕುಗಳ ಮೇಲೆ ಮೋದಿ ಸರಕಾರ ಮಾಡಿರುವ ನಗ್ನ ದಾಳಿಯಾಗಿದೆ. ಕಾಂಗ್ರೆಸ್‌ನ ಪಕ್ಷಾಂತರಿಗಳು ಮತ್ತು ಬಿಜೆಪಿಯವರನ್ನು ಸೇರಿಸಿಕೊಂಡು ಸರಕಾರವನ್ನು ರಚಿಸಲು ಅರುಣಾಚಲ ಪ್ರದೇಶದಲ್ಲಿ ರಾಷ್ಟ್ರಪತಿ ಆಡಳಿತ ಹೇರಿದ ಕೆಲವೇ ವಾರಗಳಲ್ಲಿ ಉತ್ತರಾಖಂಡದಲ್ಲಿ ಕೂಡ ಕೇಂದ್ರಾಡಳಿತ ಹೇರಲಾಗಿದ್ದು, ಯಾವುದಾದರೂ ಅವಕಾಶಗಳನ್ನು ಬಳಸಿಕೊಂಡು ಬಿಜೆಪಿಯೇತರ ಸರಕಾರಗಳನ್ನು ಉರುಳಿಸಲು ಸಂವಿಧಾನದ ಕರಾಳ 356ನೇ ವಿಧಿಯನ್ನು ಬಳಸಿಕೊಳ್ಳಲು ಹೇಸುವುದಿಲ್ಲ ಎನ್ನುವುದನ್ನು ಮೋದಿ ಸರಕಾರ ತೋರಿಸಿಕೊಟ್ಟಿದೆ.

356ನೇ ವಿಧಿ ಚುನಾಯಿತ ರಾಜ್ಯ ಸರಕಾರಗಳನ್ನು ಏಕಪಕ್ಷೀಯವಾಗಿ ಉರುಳಿಸಲು ಮತ್ತು ಕೇಂದ್ರದಲ್ಲಿರುವ ಆಡಳಿತಾರೂಢ ಪಕ್ಷದ ರಾಜಕೀಯ ಹಿತ ಕಾಪಾಡಲು ಒಂದು ಆಯುಧವಾಗಿ ಪರಿಣಮಿಸಿದೆ. ಜವಾಹರಲಾಲ್ ನೆಹರೂ ನೇತೃತ್ವದ ಕೇಂದ್ರ ಸರಕಾರ ಕೇರಳದಲ್ಲಿ 1956ರಲ್ಲಿ ಇಎಂಎಸ್ ನಂಬೂದರಿಪಾಡ್ ಸರಕಾರವನ್ನು ವಜಾ ಮಾಡಿದ್ದು ಕುಖ್ಯಾತ ಉದಾಹರಣೆಯಾಗಿದೆ. ಅಂದಿನಿಂದ ಕೇಂದ್ರದಲ್ಲಿರುವ ಕಾಂಗ್ರೆಸ್ ಸರಕಾರಗಳು 356ನೇ ವಿಧಿಯನ್ನು ಒಂದು ರಾಜಕೀಯ ಅಸ್ತ್ರವಾಗಿ ಪದೇಪದೇ ಬಳಸಿಕೊಳ್ಳುತ್ತಾ ಬಂದಿವೆ.

ಸ್ಪಷ್ಟವಾಗಿ ಒಂದು ಅಪ್ರಜಾಸತ್ತಾತ್ಮಕ ಮತ್ತು ಸರ್ವಾಧಿಕಾರಿ ಗುಣಹೊಂದಿರುವ 356ನೇ ವಿಧಿಗೆ ಯಾವುದೇ ರಾಜ್ಯದಲ್ಲಿ ಸಾಂವಿಧಾನಿಕ ಯಂತ್ರ ಕುಸಿದು ಬಿದ್ದಿದೆ ಎಂದು ರಾಜ್ಯಪಾಲರು ವರದಿ ಕೊಟ್ಟರಷ್ಟೇ ಸಾಕಾಗುತ್ತದೆ.

ತನಗೆ ಬೇಕಾದಾಗ ಇಂಥ ವರದಿಗಳನ್ನು ಪಡೆಯಲು ಮತ್ತು ಅದರ ಮೇಲೆ ಕಾರ್ಯಾಚರಿಸಲು ಕೇಂದ್ರ ಸರಕಾರ ತಾನು ನೇಮಕ ಮಾಡಿದ ಜೀ ಹುಜೂರ್ ರಾಜ್ಯಪಾಲರನ್ನು ಬಳಸಿಕೊಳ್ಳುತ್ತದೆ.

ಹೀಗಾಗಿ, ಕೇಂದ್ರ ಸರಕಾರ 356ನೆ ವಿಧಿಯನ್ನು ಬಳಸಿಕೊಳ್ಳುವುದನ್ನು ಸಿಪಿಐ (ಎಂ) ಸತತವಾಗಿ ವಿರೋಧಿಸುತ್ತಲೇ ಬಂದಿದೆ. 356ನೇ ವಿಧಿಯನ್ನು ಕಿತ್ತುಹಾಕಬೇಕು ಹಾಗೂ ಕೇಂದ್ರ ಸರಕಾರ ಏಕಪಕ್ಷೀಯವಾಗಿ ವರ್ತಿಸಲು ಆಗದಂಥ ಒಂದು ಪರ್ಯಾಯ ನಿಯಮವನ್ನು ರೂಪಿಸಬೇಕು ಎಂದು ಅದು ಹೇಳುತ್ತಲೇ ಬಂದಿದೆ.

ಇಷ್ಟೊಂದು ವರ್ಷಗಳ ಅನುಭವದ ಆಧಾರದಲ್ಲಿ ಹೇಳುವುದಾದರೆ, ಒಂದೇ ಒಂದು ಸಂದರ್ಭದಲ್ಲಿ ಪಕ್ಷ ರಾಷ್ಟ್ರಪತಿ ಆಡಳಿತ ಹೇರಿಕೆಯನ್ನು ಹಾಗೂ ಚುನಾಯಿತ ರಾಜ್ಯ ಸರಕಾರಗಳ ವಜಾವನ್ನು ಬೆಂಬಲಿಸಿತ್ತು. ಅದು 1992ರಲ್ಲಿ ಬಾಬರಿ ಮಸೀದಿ ಧ್ವಂಸದ ನಂತರ. ಕರಾಳ ಕೃತ್ಯವನ್ನು ಮಾಡಿ ಮುಗಿಸಿದ ನಂತರ, ಉತ್ತರ ಪ್ರದೇಶದ ಕಲ್ಯಾಣ್ ಸಿಂಗ್ ಸರಕಾರ ರಾಜಿನಾಮೆ ನೀಡಿತ್ತು. ಹಾಗಾಗಿ ರಾಷ್ಟ್ರಪತಿ ಆಡಳಿತವನ್ನು ಹೇರಲಾಯಿತು. ಅಯೋಧ್ಯೆಗೆ ಕರಸೇವಕರನ್ನು ಕಳಿಸುವಲ್ಲಿ ಸಕ್ರಿಯ ನೆರವು ನೀಡಿದ, ಬಿಜೆಪಿ ಸರಕಾರಗಳಿದ್ದ ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಕೂಡ ಕೇಂದ್ರ ಸರಕಾರ ರಾಷ್ಟ್ರಪತಿ ಆಡಳಿತವನ್ನು ಹೇರಿತು. ಬಾಬರಿ ಮಸೀದಿ ನಾಶ ಸಂವಿಧಾನದ ಮೂಲ ಜಾತ್ಯತೀತ ತತ್ವಕ್ಕೆ ಮತ್ತು ವಿವಾದಿತ ಸ್ಥಳದಲ್ಲಿ ಯಥಾಸ್ಥಿತಿಯನ್ನು ಬದಲಾಯಿಸುವಂಥ ಏನನ್ನೂ ಮಾಡಬಾರದು ಎಂಬ ಸುಪ್ರೀಂಕೋರ್ಟ್‌ನ ತೀರ್ಪಿಗೆ ವಿರುದ್ಧವಾದುದಾಗಿತ್ತು. ಬಾಬರಿ ಮಸೀದಿ ನಾಶ ದೇಶಾದ್ಯಂತ ಕೋಮು ಹಿಂಸೆಯ ಅಲೆಯನ್ನೇ ಎಬ್ಬಿಸಿತ್ತು ಮತ್ತು ದೇಶದ ಕೋಮು ಸೌಹಾರ್ದತೆ, ಜಾತ್ಯತೀತ ಬುನಾದಿಯನ್ನು ಹಾಳು ಮಾಡಿತ್ತು. ಈ ಹಿನ್ನೆಲೆಯಲ್ಲಿ ಆ ರಾಜ್ಯಗಳಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆಯನ್ನು ಸಿಪಿಐ (ಎಂ) ಬೆಂಬಲಿಸಿತ್ತು.

ಅದರ ನಂತರವೇ, ಸಿಪಿಐ (ಎಂ) ಮತ್ತು ಎಡ ಹಾಗೂ ಇತರ ಜಾತ್ಯತೀತ ಪಕ್ಷಗಳು ಅಂತರ್–ರಾಜ್ಯ ಮಂಡಳಿಯಲ್ಲಿ 356ನೇ ವಿಧಿಯನ್ನು ತಿದ್ದುಪಡಿ ಮಾಡಬೇಕು/ಮಾರ್ಪಡಿಸಬೇಕು ಎಂದು ವಾದಿಸಿದ್ದವು. ರಾಷ್ಟ್ರದ ಏಕತೆಗೆ ಅಪಾಯ ಅಥವಾ ಯಾವುದೇ ರಾಜ್ಯದಲ್ಲಿ ಜಾತ್ಯತೀತ ಸಿದ್ಧಾಂತಕ್ಕೆ ಅಪಾಯವೊದಗಿದಾಗಲಷ್ಟೇ ಅದನ್ನು ಬಳಸಿ ಕೊಳ್ಳಬಹುದು ಎಂಬುದು ಅವುಗಳ ವಾದವಾಗಿತ್ತು.

ಇದೀಗ ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶದಲ್ಲಿ 356ನೇ ವಿಧಿಯ ಬಲಿಪಶುವಾಗಿರುವ ಕಾಂಗ್ರೆಸ್ ಪಕ್ಷ ಹಿಂದೆ ಪಕ್ಷಪಾತದಿಂದ ಹಾಗೂ ಸಿನಿಕತನದಿಂದ 356ನೇ ವಿಧಿಯನ್ನು ಬಳಸಿದ್ದರಿಂದ ದೇಶದ ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ಸ್ವರೂಪಕ್ಕೆ ಹೇಗೆ ಹಾನಿ ಉಂಟಾಯಿತು ಎನ್ನುವುದನ್ನು ಈಗಲಾದರೂ ಮನವರಿಕೆ ಮಾಡಿಕೊಳ್ಳಬೇಕು.

ಬಿಜೆಪಿ ಸರಕಾರವೂ ಅದೇ ಹಾದಿಯನ್ನು ತುಳಿಯುತ್ತಿದೆ. ಉತ್ತರಾಖಂಡ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಹುಮತ ಪರೀಕ್ಷೆ ಮಾಡುವ ಕೇವಲ ಒಂದು ದಿನದ ಮುಂಚೆ ಅಲ್ಲಿ ರಾಷ್ಟ್ರಪತಿ ಆಡಳಿತ ಹೇರಲಾಗಿದೆ. ಮಾರ್ಚ್ 28ರೊಳಗೆ ಬಹುಮತ ಸಾಬೀತು ಪಡಿಸುವಂತೆ ರಾಜ್ಯಪಾಲರೇ ನಿರ್ದೇಶನ ನೀಡಿದ್ದರು. ಕಾಂಗ್ರೆಸ್‌ನ ಒಂಬತ್ತು ಶಾಸಕರು ಪಕ್ಷಾಂತರ ಮಾಡಿ ಬಿಜೆಪಿ ಜತೆ ಕೈಜೋಡಿಸಿದ್ದರಿಂದ ಬಹುಮತ ಸಾಬೀತಿಗೆ ಸೂಚಿಸಲಾಗಿತ್ತು. ಪಕ್ಷಾಂತರ ನಿಷೇಧ ಕಾನೂನಿನನ್ವಯ ಈ ಒಂಬತ್ತು ಶಾಸಕರನ್ನು ಸ್ಪೀಕರ್ ಅನರ್ಹಗೊಳಿಸಿದ್ದರು. ಈ ಅನರ್ಹತೆಯ ನಂತರ ಮುಖ್ಯಮಂತಿಗ್ರೆ ಸದನದಲ್ಲಿ ಬಹುಮತ ಸಿಗಲಿದೆ ಎನ್ನುವುದು ಸ್ಪಷ್ಟವಾದ ನಂತರ, ಕೇಂದ್ರ ಸಚಿವ ಸಂಪುಟ ಬಹುಮತ ಸಾಬೀತಿಗೆ ನಿಗದಿಪಡಿಸಿದ ಮುಂಚಿನ ದಿನ ತರಾತುರಿಯಲ್ಲಿ ಸಭೆ ಸೇರಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಿತು.

ಇತರ ಕಾಂಗ್ರೆಸ್ ರಾಜ್ಯ ಸರಕಾರಗಳನ್ನು ಉರುಳಿಸಲೂ ಬಿಜೆಪಿ ಸರಕಾರ ಗುರಿಯಿಟ್ಟುಕೊಂಡಿದೆ. ಹಿಮಾಚಲ ಪ್ರದೇಶ ಮತ್ತು ಮಣಿಪುರ ರಾಜ್ಯ ಸರಕಾರಗಳನ್ನು ತಕ್ಷಣದ ಗುರಿಯಾಗಿರಿಸಿಕೊಂಡು ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ "ದೇಶಾದ್ಯಂತ ಕಾಂಗ್ರೆಸ್ ಆಡಳಿತದ ರಾಜ್ಯಗಳಲ್ಲಿ ಬಂಡಾಯ ಸಂಭವಿಸುತ್ತದೆ" ಎಂದು ಘೋಷಿಸಿದ್ದಾರೆ.

356ನೇ ವಿಧಿಯ ಬಳಕೆ ರಾಜ್ಯ ಸರಕಾರಗಳನ್ನು ಕೇಂದ್ರ ಸರಕಾರದ ಕೃಪಾಕಟಾಕ್ಷಕ್ಕೆ ತಳ್ಳುವಂತೆ ಮಾಡುವ ಸರ್ವಾಧಿಕಾರಿ ಧೋರಣೆಯ ಭಾಗವಾಗಿದೆ. ಬಿಜೆಪಿ ಸರಕಾರದ ಸರ್ವಾಧಿಕಾರ ಶಾಹಿಯ ಅಪಾಯವನ್ನು ಎಲ್ಲಾ ಪ್ರತಿಪಕ್ಷಗಳು ಅರ್ಥ ಮಾಡಿಕೊಳ್ಳಬೇಕು ಮತ್ತು ಈ ಆಕ್ರಮಣಗಳನ್ನು ಒಗ್ಗಟ್ಟಿನಿಂದ ಪ್ರತಿರೋಧಿಸಬೇಕು.

ಮುಖ್ಯಮಂತ್ರಿ ಹರೀಶ್ ರಾವತ್ ಸಲ್ಲಿಸಿದ ಅರ್ಜಿಯ ಆಧಾರದಲ್ಲಿ, ಮಾರ್ಚ್ 31ರಂದು ವಿಧಾನಸಭೆಯಲ್ಲಿ ಬಹುಮತ ಪರೀಕ್ಷೆಗೆ ಉತ್ತರಾಖಂಡ ಹೈಕೋರ್ಟ್‌ನ ಏಕ–ಸದಸ್ಯ ಪೀಠ ಅವಕಾಶ ಕಲ್ಪಿಸಿದೆ.

ಒಂಬತ್ತು ಅನರ್ಹಗೊಂಡ ಶಾಸಕರು ಕೂಡ ಮತ ಚಲಾಯಿಸಬಹುದು ಎಂದಿರುವ ನ್ಯಾಯಾಲಯ ಅವುಗಳನ್ನು ಪ್ರತ್ಯೇಕವಾಗಿ ಇರಿಸಲಾಗುವುದು ಎಂದು ತಿಳಿಸಿದೆ. ಸುಪ್ರೀಕೋರ್ಟ್ 1994ರಲ್ಲಿ ನೀಡಿದ ಬೊಮ್ಮಾಯಿ ಪ್ರಕರಣದ ತೀರ್ಪಿಗೆ ಅನುಗುಣವಾಗಿ ಈ ಸರಿಯಾದ ಕ್ರಮವನ್ನು ಕೈಗೊಳ್ಳಬೇಕು ಎಂದು ಹೈಕೋರ್ಟ್ ಪ್ರತಿಪಾದಿಸಿದೆ. 356ನೇ ವಿಧಿಯನ್ನು ಜಾರಿ ಮಾಡಲು ಅಗತ್ಯವಾದ ಮಾನದಂಡಗಳನ್ನು ಬೊಮ್ಮಾಯಿ ತೀರ್ಪು ಸ್ಪಷ್ಟವಾಗಿ ಹೇಳಿದೆ. ವಿಧಾನಸಭೆಯ ಸದನ ಪರೀಕ್ಷೆಯೇ ಅಂತಿಮ ತೀರ್ಪುಗಾರ. ರಾಜ್ಯಪಾಲ ಅಥವಾ ಕೇಂದ್ರ ಸರಕಾರದ ಇಷ್ಟಾನಿಷ್ಟಗಳು ಅಲ್ಲ ಎಂದು ಆ ತೀರ್ಪು ಸ್ಪಷ್ಟಪಡಿಸಿದೆ.

ಆದರೆ ಕೇಂದ್ರ ಸರಕಾರ ಹೈಕೋರ್ಟ್ ವಿಭಾಗೀಯ ಪೀಠದ ತೀರ್ಪಿನ ವಿರುದ್ಧ ಕೇಂದ್ರ ಸರಕಾರ ಮೇಲ್ಮನವಿ ಸಲ್ಲಿಸಿದ ನಂತರದಲ್ಲಿ, ಮಾರ್ಚ್ 31ರಂದು ಬಹುಮತ ಪರೀಕ್ಷೆ ನಡೆಸುವುದು ಬೇಡ, ಅಂತಿಮ ತೀರ್ಮಾನಕ್ಕೆ ಬರಲು ನ್ಯಾಯಾಲಯ ಪ್ರಕರಣವನ್ನು ಆಲಿಸುವ ವರೆಗೆ ಕಾಯೋಣ ಎಂದು ನಿರ್ಧರಿಸಲಾಗಿದೆ.

ಹೈಕೋರ್ಟ್ ಕಲಾಪಗಳ ಫಲಿತಾಂಶ ಏನೇ ಇರಬಹುದು, ಅರುಣಾಚಲ ಮತ್ತು ಉತ್ತರಾಖಂಡದಲ್ಲಿ ರಾಷ್ಟ್ರಪತಿ ಆಡಳಿತ ಹೇರಿರುವುದರ ಸಿಂಧುತ್ವದ ಬಗ್ಗೆ ಸುಪ್ರೀಕೋರ್ಟ್ ಯಾವುದೇ ವಿಳಂಬವಿಲ್ಲದೆ ತನ್ನ ನಿಲುವನ್ನು ಪ್ರಕಟಿಸಿದರೆ ಒಳ್ಳೆಯದು. ಯಾವ ರೀತಿಯಲ್ಲಿ ನೋಡಿದರೂ ಮೋದಿ ಸರಕಾರದ ಕ್ರಮಗಳು ಬೊಮ್ಮಾಯಿ ತೀರ್ಪನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದು ದೂರಗಾಮಿ ನಿಲುವನ್ನು ತಳೆಯಬೇಕು ಮತ್ತು 356ನೇ ವಿಧಿಯನ್ನೇ ತೆಗೆದುಹಾಕಬೇಕು ಹಾಗೂ ರಾಜ್ಯಗಳ ಹಕ್ಕುಗಳು ಮತ್ತು ಒಕ್ಕೂಟ ವ್ಯವಸ್ಥೆಯ ತತ್ವವನ್ನು ರಕ್ಷಿಸುವ ಕೆಲವು ಸೂಕ್ತ ನಿಯಮಗಳನ್ನು ಅದರ ಸ್ಥಾನದಲ್ಲಿ ತರಬೇಕು ಎಂದು ಆಗ್ರಹಿಸಬೇಕು.

ಅನು: ವಿಶ್ವಾಸ್

........ಅಂಬೇಡ್ಕರ್ ಮಾತುಗಳ ಬಗ್ಗೆ, ಸಂವಿಧಾನದ ಬಗ್ಗೆ ಗೌರವವಿಲ್ಲ –ಸೀತಾರಾಂ ಯೆಚೂರಿ

ಪುಟ 2 ರಿಂದ

ಪರೀಕ್ಷಿಸುವ ಸರಿಯಾದ ದಾರಿಯೆಂದರೆ ಸದನದಲ್ಲಿ ಅದರ ಪರೀಕ್ಷೆ ನಡೆಸುವುದು ಎಂದು ಒತ್ತಿ ಹೇಳುವ ಅಗತ್ಯವಿದೆ. ಅದೊಂದೇ ದಾವೆಗಳನ್ನು, ಅದಕ್ಕೆ ಪ್ರತಿದಾವೆಗಳನ್ನು ಬಹಿರಂಗವಾಗಿ ಮತ್ತು ವಸ್ತುನಿಷ್ಟವಾಗಿ ಕಂಡುಹಿಡಿಯಲು ಸಂವಿಧಾನ ಪ್ರಣೀತವಾದ ಏಕೈಕ ವೇದಿಕೆ. ಮಂತ್ರಿಮಂಡಲದ ಶಕ್ತಿಯನ್ನು ಅಂದಾಜು ಮಾಡುವುದು ಯಾವುದೇ ವ್ಯಕ್ತಿಯ, ಅವರು ರಾಜ್ಯಪಾಲರೇ ಆಗಲಿ, ರಾಷ್ಟ್ರಪತಿಗಳೇ ಆಗಲಿ, ವೈಯಕ್ತಿಕ ಅಭಿಪ್ರಾಯದ ವಿಷಯವಲ್ಲ. ಅದನ್ನು ಸದನದಲ್ಲಿ ಪ್ರದರ್ಶಿಸಲು ಮತ್ತು ಸಾರ್ವಜನಿಕವಾಗಿ ಖಚಿತ ಪಡಿಸಿಕೊಳ್ಳಲು ಸಾಧ್ಯವಿದೆ. ಆದ್ದರಿಂದ ಇಂತಹ ಪ್ರದರ್ಶನ ಸಾಧ್ಯವಿರುವಾಗ, ಅದನ್ನು ಬದಿಗೊತ್ತಲು ಮತ್ತು ಅದರ ಬದಲು ರಾಜ್ಯಪಾಲರು ಅಥವ ರಾಷ್ಟ್ರಪತಿಗಳ ವ್ಯಕ್ತಿನಿಷ್ಟ ತೃಪ್ತಿಯನ್ನು ಅವಲಂಬಿಸಲು ಅವಕಾಶವಿಲ್ಲ. ಇಂತಹ ಖಾಸಗಿ ಅಂದಾಜು ವೈಯಕ್ತಿಕ ದುರುದ್ದೇಶದ ಗಂಭೀರ ಆಕ್ಷೇಪಗಳಿಗೆ ಅವಕಾಶ ನಿಡುತ್ತದಷ್ಟೇ ಅಲ್ಲ, ಪ್ರಜಾಪ್ರಭುತ್ವ ನೀತಿಗೂ ಅದು ಹೊರತಾದದ್ದು."

ಪರಿಚ್ಛೇದ 121,,, "ಈ ವಿಷಯದಲ್ಲಿ ನಾವು ರಾಜ್ಯಪಾಲರ ಐದು ಸದಸ್ಯರ ಸಮಿತಿಯ ಒಮ್ಮತದ ವರದಿಯನ್ನು ಉಲ್ಲೇಖಿಸಬಹುದು. ಅದು ಹೀಗೆ ಶಿಫಾರಸು ಮಾಡಿದೆ: '.. ಮಂತ್ರಿಮಂಡಲದಲ್ಲಿ ವಿಶ್ವಾಸದ ಪರೀಕ್ಷೆಯನ್ನು ಸಾಮಾನ್ಯವಾಗಿ ವಿಧಾನ ಸಭೆಯಲ್ಲಿ ಮತದಾನಕ್ಕೆ ಬಿಡಬೇಕು.. ರಾಜ್ಯಪಾಲರಿಗೆ ಯಾವುದೇ ವಿಧಾನ ಅಥವ ದಾರಿಯಿಂದ, ಮಂತ್ರಿಮಂಡಲ ಬಹುಮತದ ಬೆಂಬಲವನ್ನು ಹೊಂದಿಲ್ಲ ಎಂದು ಖಾತರಿಯೆನಿಸಿದಾಗ, ಅವರು ಮುಖ್ಯಮಂತ್ರಿಗಳಿಗೆ ವಿಧಾನಸಭೆಯನ್ನು ಎದುರಿಸಿ ತನ್ನ ಬಹುಮತವನ್ನು ಸಾಧ್ಯವಾದಷ್ಟು ಕಡಿಮೆ ಅವಧಿಯೊಳಗೆ ಸಾಬೀತು ಪಡಿಸಲು ಹೇಳಬೇಕು'."

ಬಿಜೆಪಿ ಸರಕಾರಕ್ಕೆ ನ್ಯಾಯಾಂಗದ ಈ ನಿರ್ಣಯಗಳ ಬಗ್ಗೆ ಪೂರ್ಣವಾದ ಅರಿವು ಇದೆ ಎಂಬುದರಲ್ಲಿ ಸಂದೇಹವಿರಲು ಸಾಧ್ಯವಿಲ್ಲ. ಆದರೆ ಅದು ತನ್ನ ಲಂಗುಲಗಾಮಿಲ್ಲದ ಅಧಿಕಾರದ ದಾಹದಿಂದಾಗಿ ಇವನ್ನೆಲ್ಲ ಭಂಡತನದಿಂದ ಬದಿಗೆ ತಳ್ಳುವ ದಾರಿಯನ್ನು ಆರಿಸಿಕೊಂಡಿದೆ ಎಂದು ಯೆಚೂರಿಯವರು ವಿಮರ್ಶಿಸುತ್ತಾರೆ. ಕಳೆದ ಎರಡು ವಿಧಾನ ಸಭಾ ಚುನಾವಣೆಗಳನ್ನು ಕಳೆದುಕೊಂಡ ಬಿಜೆಪಿಗೆ ಈಗ ರಾಜ್ಯಗಳ ಮೇಲೆ ಕೇಂದ್ರೀಯ ಆಳ್ವಿಕೆಯ ಮೂಲಕ ಮಾತ್ರವೇ ಹತೋಟಿ ಹೊಂದಲು ಸಾಧ್ಯ ಎಂದು ಗೊತ್ತಿದೆ. ಉತ್ತರಾಖಂಡ ಮೊದಲಿನದ್ದೇನಲ್ಲ, ಇದಕ್ಕೆ ಎರಡು ತಿಂಗಳ ಮೊದಲು ಅರುಣಾಚಲ ಪ್ರದೇಶದಲ್ಲಿ ಇದನ್ನೇ ಮಾಡಿತು. ಬಹುಶಃ ಇನ್ನೂ ಕೆಲವು ಪ್ರತಿಪಕ್ಷಗಳ ಆಳ್ವಿಕೆಯಿರುವ ರಾಜ್ಯಗಳಲ್ಲೂ ಅದನ್ನು ಪ್ರಯತ್ನಿಸಬಹುದು. ಅತ್ತ ಹರಿಯಾಣದಲ್ಲಿ ಜಾಟ್ ಮೀಸಲಾತಿ ಪ್ರತಿಭಟನೆಗಳ ಸಮಯದಲ್ಲಿ ಕಾನೂನು ಮತ್ತು ವ್ಯವಸ್ಥೆ ಸಂಪೂರ್ಣವಾಗಿ ಮುರಿದು ಬಿದ್ದಿದ್ದರೂ ಅಲ್ಲಿಗೆ ಮೋದಿ ಸರಕಾರದಿಂದ ಒಂದು ಸಲಹಾಪತ್ರವೂ ಕೂಡ ಹೋಗಲಿಲ್ಲ ಎಂಬ ಸಂಗತಿಯತ್ತ ಯೆಚೂರಿಯವರು ಗಮನ ಸೆಳೆದಿದ್ದಾರೆ. ಅದರಲ್ಲಿ ಆಶ್ಚರ್ಯವೇನಿಲ್ಲ, ಏಕೆಂದರೆ ಅಲ್ಲಿ ಆಳ್ವಿಕೆ ನಡೆಸುತ್ತಿರುವವರು ಮನೋಹರಲಾಲ್ ಕಟ್ಟರ್, ಮೋದಿಯವರ ಒಬ್ಬ ಸಹ–ಆರೆಸ್ಸೆಸ್ ಪ್ರಚಾರಕ ತಾನೇ ಎನ್ನುತ್ತಾರೆ ಯೆಚೂರಿ.

ಆರೆಸ್ಸೆಸ್ –ಮತ್ತು ಅದರ ಕೈಕೆಳಗಿನ ಬಿಜೆಪಿ– ಸಂವಿಧಾನದ ಬಗ್ಗೆ, ಜನಾದೇಶದ ಪಾವಿತ್ರ್ಯತೆಯ ಬಗ್ಗೆ ಎಂತಹ ತಿರಸ್ಕಾರವನ್ನು ಹೊಂದಿದೆ ಎಂಬುದನ್ನು ಇತ್ತೀಚಿನ ಪ್ರಸಂಗಗಳು ತೋರಿಸಿ ಕೊಟ್ಟಿವೆ. ಆರೆಸ್ಸೆಸ್–ಬಿಜೆಪಿಗೆ ಸಾಂವಿಧಾನಿಕ ನೈತಿಕತೆ–ಯಂತೂ ಇಲ್ಲವೇ ಇಲ್ಲ, ತನಗೆ ಮೂಲಭೂತವಾದ ರಾಜಕೀಯ ಔಚಿತ್ಯತೆ ಮತ್ತು ಪ್ರಜಾಸತ್ತಾತ್ಮಕ ಶಿಷ್ಟತೆ ಕೂಡ ಇಲ್ಲ ಎಂಬುದನ್ನು ಅದು ಪ್ರದರ್ಶಿಸಿದೆ ಎಂದು ಬಲವಾಗಿ ಟೀಕಿಸಿರುವ ಸೀತಾರಾಮ್ ಯೆಚೂರಿ, ಇಂತಹ ಹತ್ಯೆಯಿಂದ ಪಾರಾಗಬಹುದು ಎಂದು ನಂಬಿದ್ದರೆ ಅದು ಅವರ ತಪ್ಪಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಭಾರತದ ನಾಗರಿಕರು ನೋಡುತ್ತಿದ್ದಾ–ರೆ, ಬಿಜೆಪಿಗೆ ಮತ್ತು ಸಂಘ ಪರಿವಾರದಲ್ಲಿರುವ ಅವರ ನಿಯಂತ್ರಕರಿಗೆ ಯೋಗ್ಯ ಉತ್ತರವನ್ನು ಕೊಡುತ್ತಾರೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಕೇಂದ್ರದಲ್ಲಿ ಯಾರೇ ಆಳುತ್ತಿದ್ದರೂ, ಸಿಪಿಐ(ಎಂ) ರಾಜ್ಯ ಸರಕಾರಗಳ ವಿರುದ್ಧ ಕಲಮು 356ರ ಪ್ರಯೋಗವನ್ನು ಸದಾ ವಿರೋಧಿಸುತ್ತ ಬಂದಿದೆ. ಇದನ್ನು ಸ್ವತಂತ್ರ ಭಾರತದಲ್ಲಿ ಮೊದಲು ಬಳಸಿದ್ದು 1959ರಲ್ಲಿ ಕೇರಳದ, ಇಎಂಎಸ್ ನಂಬೂದಿರಿಪ್ಪಾಡ್ ಸರಕಾರದ ವಿರುದ್ಧವೇ ತಾನೇ! ನಂತರವೂ 1960ರ ದಶಕದಲ್ಲಿ ಮತ್ತೆ ಕೇರಳದಲ್ಲಿ ಕಮ್ಯುನಿಸ್ಟ್ ಸರಕಾರವನ್ನು ಹಾಗೂ ಪಶ್ಚಿಮ ಬಂಗಾಳದಲ್ಲಿ ಎರಡು ಸಂಯುಕ್ತ ರಂಗ ಸರಕಾರಗಳನ್ನು ಇದೇ ಕಲಮನ್ನು ಬಳಸಿ ವಜಾ ಮಾಡಲಾಯಿತು.



ಮೂಲ ಸೌಕರ್ಯಕ್ಕೆ ಆದ್ಯತೆ ನೀಡದ – ಅಹಿಂದ ಜಪದ ಕಾಂಗ್ರೆಸ್ – ಜೆಡಿ(ಎಸ್) ಬಿಬಿಎಂಪಿ ಬಜೆಟ್

ಕೆ.ಎನ್.ಉಮೇಶ್

ಕಾಂಗ್ರೆಸ್ ಮತ್ತು ಜೆಡಿ(ಎಸ್) ನ ಬಿಬಿಎಂಪಿಯಲ್ಲಿನ ಮೈತ್ರಿ ಆಡಳಿತ 2016–17 ರ ಸಾಲಿಗೆ ತನ್ನ ಮೊದಲ ಬಜೆಟ್ ಮಂಡಿಸಿದೆ. 2.02 ಕೋಟಿ ರೂಗಳ ಉಳಿಕೆಯೊಂದಿಗೆ ರೂ.8996.43 ಕೋಟಿ ರೂಗಳ ಬಜೆಟ್ ಮಂಡಿಸಿದೆ.

ರಾಜ್ಯ ಸರ್ಕಾರದ ರೂ.4222, ಮತ್ತು ಕೇಂದ್ರ ಸರ್ಕಾರದ ರೂ.13 ಕೋಟಿಗಳ ಅನುದಾನದ ನಿರೀಕ್ಷೆಯೊಂದಿಗೆ ಮಂಡಿಸಿರುವ ಬಜೆಟ್‌ನಲ್ಲಿ ಮೇಲ್ನೋಟಕ್ಕೆ ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತು ನೀಡಿರುವಂತೆ ಕಂಡು ಬಂದರು ಸಹಾ ವಾಸ್ತವದಲ್ಲಿ ಮೂಲ ಸೌಕರ್ಯಕ್ಕೆ ಒತ್ತು ನೀಡದ ಹಾಗು ಅಹಿಂದ ಜಪದೊಂದಿಗೆ, ತನ್ನ ರಾಜಕೀಯ ನೆಲೆ ಬಲಪಡಿಸಿಕೊಳ್ಳಲು, ಅಹಿಂದ ವಿಭಾಗಗಳ ಓಲೈಕೆಗೆ ಕಾಂಗ್ರೆಸ್ ನಡೆಸಿರುವ ಕಸರತ್ತಿನಂತೆ ಕಂಡು ಬರುತ್ತದೆ.

ಏಪ್ರಿಲ್ ಒಂದರಿಂದ ರಾಜ್ಯ ಸರ್ಕಾರ ಅನುಮೊದಿಸಿರುವ ವಸತಿ ಕಟ್ಟಡಗಳ ಶೇ.20 ರಷ್ಟು ಹಾಗು ವಾಣಿಜ್ಯ ಕಟ್ಟಡಗಳ ಶೇ.25 ರಷ್ಟು ಆಸ್ತಿ ತೆರಿಗೆ ಹೆಚ್ಚಳದಿಂದ ನಿರೀಕ್ಷಿಸಿರುವ ರೂ.600 ರಿಂದ 700 ಕೋಟಿ ರೂಗಳ ಹೆಚ್ಚುವರಿ ಆದಾಯವು ಸೇರಿ, ಒಟ್ಟು ರೂ.3100, ರೂಗಳ ಆದಾಯವನ್ನು ಆಸ್ತಿ ತೆರಿಗೆಗಳ ಮೂಲಕ ಬಜೆಟ್‌ನಲ್ಲಿ ನಿರೀಕ್ಷಿಸಲಾಗಿದೆ.

ವಾಸ್ತವದಲ್ಲಿ ಸಾಲದ ಹೊರೆಯಿಲ್ಲದ ಬಜೆಟ್ ಆಗಿದ್ದರು ಸಹಾ ಬಿ.ಬಿ.ಎಂ.ಪಿ ಮೇಲಿನ ಒಟ್ಟು ರೂ.3876 ಕೋಟಿ ರೂಗಳ ಸಾಲದ ಬಾಬ್ತಿಗೆ ಈ ಬಜೆಟ್‌ನಲ್ಲಿ ಕೇವಲ ರೂ.360 ಕೋಟಿಯನ್ನು ಸಾಲ ತೀರುವಳಿ ಮತ್ತು ಬಡ್ಡಿಗೆ ಮೀಸಲಿರಿಸಿದೆ.

ಚುನಾವಣೆ ವೇಳೆ ಕಾಂಗ್ರೆಸ್ 14000 ಮನೆಗಳನ್ನು ಕಟ್ಟಿಸಿ ಕೊಡುವ ಭರವಸೆ ನೀಡಿತ್ತು, ಆದರೆ ಮನೆ ಬೇಕಿರುವ ಕೆಳವರ್ಗದ ಜನರ ಬಳಿ ವಸತಿ ನಿವೇಶನ ಇರುವುದಿಲ್ಲ. ಅವರಿಗೆ ನಿವೆಶನ ಒದಗಿಸಲು ಯಾವುದೆ ಚಕಾರ ಎತ್ತದ ಬಜೆಟ್ ಪ್ರತಿ ವಾರ್ಡ್‌ನಲ್ಲಿ ಎಸ್.ಸಿ/ಎಸ್.ಟಿ ಗೆ 30 ಮನೆ ಮತ್ತು ಹಿಂದುಳಿದ ಹಾಗು ಅಲ್ಪಸಂಖ್ಯಾತರಿಗೆ 15 ಮನೆ ನಿರ್ಮಿಸಲು, ಪ್ರತಿ ಮನೆಗೆ 4 ಲಕ್ಷರೂಗಳ ಅನುದಾನ ನೀಡುವ, ಮತ್ತು ಕೊಳಚೆ ನಿರ್ಮೂಲನ ಮಂಡಳಿಗೆ ಅನುದಾನ ನೀಡಿ ಮನೆ ನಿರ್ಮಾಣದ ಪ್ರಸ್ತಾಪ ಮಾಡಿದೆ. ಈ ಅನುದಾನವನ್ನು ರಾಜ್ಯ ಸರ್ಕಾರದ ಸಾಮಾಜಿಕ ಆರ್ಥಿಕ ಸಮೀಕ್ಷೆ – 2015 ಅನ್ವಯ ವಾರ್ಡ್‌ವಾರು ಹಂಚಿಕೆ ಪ್ರಸ್ತಾಪ ಮಾಡಿದೆ. ಅಂದರೆ ಅದರ ಜಾರಿ ಯಾವಾಗ ಎಂಬ ಪ್ರಶ್ನೆ ಪ್ರತಿಯೊಬ್ಬರನ್ನು ಕಾಡುತ್ತಿದೆ.

4000 ಪೌರ ಕಾರ್ಮಿಕರ ನೇಮಕವೇನೋ ಪ್ರಸ್ತಾಪವಾಗಿದೆ, ಆದರೆ ಅದು ಕಾಯಂ ನೌಕರಿಯೊ ಅಥವಾ ಗುತ್ತಿಗೆಯೋ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಪೌರ ಕಾರ್ಮಿಕರಿಗೆ ಬಿಸಿ ಊಟ ಯೋಜನೆ ಪ್ರಸ್ತಾಪಿಸಿರುವ ಪಾಲಿಕೆ ಆಡಳಿತ, ಅವರನ್ನು ಕಾಯಂಗೊಳಿಸುವ, ನಿಗದಿತವಾಗಿ ವೇತನ, ಬೋನಸ್, ಭವಿಷ್ಯ ನಿಧಿ, ಇ.ಎಸ್.ಐ ಪಾವತಿಸುವ ಖಾತ್ರಿಯನ್ನು ನೀಡುತಿಲ್ಲ ಎಂಬುದು ವಾಸ್ತವಾಂಶ.

ಮೇಲ್ನೋಟಕ್ಕೆ ಈ ಬಜೆಟ್‌ನಲ್ಲಿ ಕಲ್ಯಾಣ ಯೋಜನೆಗಳಿಗೆ ಆಧ್ಯತೆ ನೀಡಲಾಗಿದೆ ಎಂಬಂತೆ ಕಂಡು ಬಂದರು ವಾಸ್ತವದಲ್ಲಿ ಹಿಂದಿನ ಬಜೆಟ್ ಹೋಲಿಕೆಯಲ್ಲಿ ಕಲ್ಯಾಣ ಯೋಜನೆಗಳಿಗೆ ನೀಡಲಾದ ಅನುದಾನದಲ್ಲಿ ಶೇಕಡವಾರು ಕಡಿಮೆಯಾಗಿರುವುದನ್ನು ಗಮನಿಸಬಹುದಾಗಿದೆ.

ಮೂಲಸೌಕರ್ಯ ಕುರಿತು ನಿರ್ಧಿಷ್ಟ ಯೋಜನೆಗಳಿಲ್ಲದೆ, ಹಳೆ ಯೋಜನೆಗಳನ್ನೆ ಮತ್ತೆ ಪುನರುಚ್ಚರಿಸುವ ಮಾತುಗಳನ್ನು ಕಾಣಬಹುದಾಗಿದೆ. ಆ ಎಲ್ಲಕ್ಕೂ ರಾಜ್ಯ ಸರ್ಕಾರದ ಅನುದಾನದ ಮೇಲೆ ಅವಲಂಬಿತವಾಗಿರುವ ಪರಾವಲಂಬಿ ಬಜೆಟ್ ಇದಾಗಿದೆ.

ಹಿಂದಿನ ಹಲವು ಬಜೆಟ್‌ಗಳ ಗಾತ್ರ ವಾಸ್ತವಿಕ ಗಾತ್ರದಲ್ಲಿನ ವ್ಯತ್ಯಾಸಗಳು, ತೆರಿಗೆ ಸಂಗ್ರಹದ ಗುರಿ ಮತ್ತು ವಾಸ್ತವಿಕ ಸಾಧನೆಗಳು, ರಾಜ್ಯ ಸರ್ಕಾರದಿಂದ ನಿರೀಕ್ಷಿತ ಅನುದಾನ, ಬಂದ ಅನುದಾನಗಳ ನಡುವಿನ ವ್ಯತ್ಯಾಸಗಳು ನೈಜ ಪರಿಸ್ಥಿಯನ್ನು ತೋರುತ್ತದೆ.

ಸಾರ್ವಜನಿಕ ಕುಡಿಯುವ ನೀರಿನ ನಲ್ಲಿಗಳನ್ನು ಮುಚ್ಚಿರುವ ಬಿಬಿಎಂಪಿ ಕುಡಿಯುವ ನೀರಿನ ನಿರ್ವಹಣೆಗೆ ಪ್ರತಿ ಹಳೆ ವಾರ್ಡ್‌ಗೆ 10 ಲಕ್ಷ ರೂ, ಹಾಗು ಹೊಸ ವಾರ್ಡ್ ರೂ.35 ಲಕ್ಷ ಅನುದಾನ ಒದಗಿಸಿರುವುದು ಮೂಗಿಗೆ ತುಪ್ಪ ಸವರುವ ಕ್ರಮವಾಗಿದೆ. ಕೆರೆ ಅಭಿವೃದ್ಧಿ ನಿರ್ವಹಣೆ, ಪಾರ್ಕ್‌ಗಳ ಅಭಿವೃದ್ಧಿ – ನಿರ್ವಹಣೆಯನ್ನು ಖಾಸಗಿಗೆ ವಹಿಸುವ ನಿಟ್ಟಿನಲ್ಲಿ ಸಾರ್ವಜನಿಕ ಖಾಸಗಿ ಪಾಲುದಾರಿಕೆ ಮತ್ತು ಸೊಸೈಟಿಗಳ ಜಾಡನ್ನು ನಿರ್ಮಿಸಲು ಹೊರಟಿದೆ.

ಘನ ತ್ಯಾಜ ನಿರ್ವಹಣೆಗೆ ನೀಡಿರುವ ಶೇಕಡವಾರು ಹಣ, ಮತ್ತು ರೂಪಿಸಿರುವ ಯೋಜನೆಗಳು ಘನ ತ್ಯಾಜ್ಯ ವಿಲೇವಾರಿಗೆ ಅಗತ್ಯವಿರುವ ಸಮಗ್ರ ಕ್ರಿಯಾ ಯೋಜನೆ ಇಲ್ಲದಿರುವುದನ್ನು ತೋರುತ್ತದೆ ಹಾಗು ತ್ಯಾಜ್ಯ ಡಂಪ್ ಮಾಡುವ ಸ್ಥಳಗಳ ಹಳ್ಳಿಗಳ ಸುತ್ತಮುತ್ತಲಿನ ನಾಗರೀಕರಲ್ಲಿ ವಿಶ್ವಾಸ ಮೂಡಿಸುವ ಯಾವುದೇ ಕ್ರಮ ಆಗಲಿ ಮುನ್ನೋಟವಾಗಲಿ ಇಲ್ಲದಿರುವುದನ್ನು ತೊರುತ್ತದೆ.

ಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಹಣ ನೀಡಿದ್ದಾರೆ ಎನ್ನುವಾಗಲೆ, ಹಿಂದಿನ ಬಜೆಟ್ ಹೋಲಿಕೆಯಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಒಟ್ಟು ಹಣದಲ್ಲಿ ಕೇವಲ ಶೇಕಡ 0.37 ಮಾತ್ರ ಹೆಚ್ಚಳವಾಗಿದೆ. ಸಾರ್ವಜನಿಕ ಆರೋಗ್ಯ, ಶಿಕ್ಷಣ – ಕ್ರೀಡೆಗೆ 1.37 ಶೇಕಡ ಕಡಿಮೆಯಾಗಿದೆ. ಮೂಲಸೌಕರ್ಯ ಅಭಿವೃದ್ಧಿ, ರಸ್ತೆ ಮತ್ತು ಚರಂಡಿಗೆ 21.33 ಶೇಕಡ ಕಡಿಮೆ ಹಣ ಮೀಸಲಿರಿಸಲಾಗಿದೆ. ರಾಜ್ಯ ಸರ್ಕಾರದ ಅನುದಾನ ಮಾತ್ರ 36.39 ಶೇಕಡ ಹೆಚ್ಚಳವಾಗಿದೆ.

ಬಜೆಟ್ ಗಾತ್ರ ಹೆಚ್ಚಿದ್ದರು ಸಹಾ ಗುರಿ ತಲುಪಿದ್ದು ಮಾತ್ರ 2010–11 ರಿಂದ 4 ವರ್ಷಗಳಲ್ಲಿ 40 ಶೇಕಡವು ಸಹಾ ತಲುಪಿಲ್ಲ ಎಂಬುದು ಇತಿಹಾಸ. 2014–15 ರ ನಂತರ ಮಾತ್ರ 70 ಶೇಕಡಕ್ಕೂ ಹೆಚ್ಚಿದೆ ಎಂಬುದು ವಾಸ್ತವ. ಬಜೆಟ್‌ನ ಪೂರ್ಣ ಗಾತ್ರ ವಾಸ್ತವತೆಯಲ್ಲಿ ಸಾಕಾರಗೊಂಡರೆ ಅದು ಉತ್ತಮ ಬೆಳವಣಿಗೆ ಆಗಲಿದೆ. ಆದರೆ ಅದು ಕಾರ್ಯಸಾಧುವೆ ಎಂಬ ಅನುಮಾನ ವ್ಯಾಪಕವಾಗಿದೆ. ಅಸ್ತಿ ತೆರಿಗೆಯ ಸಂಗ್ರಹ ಗುರಿ ಮತ್ತು ಸಾಧಿಸಿದ ಪ್ರಮಾಣದ ಹಿಂದಿನ ಅನುಭವ, ಬಜೆಟ್ ಗಾತ್ರವನ್ನು ವಾಸ್ತವಿಕವಾಗಿ ಸಾಕಾರಗೊಳಿಸಲು ಸಾಧ್ಯವಾಗದು ಎಂಬುದನ್ನು ತೋರುತ್ತದೆ.

ಅಂತೆಯೆ ಬಿ.ಬಿ.ಎಂ.ಪಿ ರಾಜ್ಯ ಸರ್ಕಾರದ ಅನುದಾನದ ಮೇಲೆ ಹೆಚ್ಚು ಅವಲಂಬನೆ ಹೊಂದಿದೆ. ಬಿಬಿಎಂಪಿಯ ನಿರೀಕ್ಷೆ, ಸರ್ಕಾರದ ಭರವಸೆ ಹಾಗು ಅಂತಿಮವಾಗಿ ದೊರೆತ ಅನುದಾನವು ಬಜೆಟ್ ಗಾತ್ರವು ವಾಸ್ತವಿಕವಾಗಿ ಸಾಕಾರಗೊಳ್ಳುತ್ತದೆಯೆ ಎಂಬು ಅನುಮಾನವನ್ನು ಹುಟ್ಟಿಹಾಕುತ್ತದೆ. ಬಿಬಿಎಂಪಿ ಬಜೆಟ್‌ನ ಆದಾಯದ ಮೂಲಗಳನ್ನು ಪರಿಶೀಲಿಸಿದಲ್ಲಿ ಬಿಬಿಎಂಪಿಯ ಬಜೆಟ್ ಮತ್ತು ಅದರ ಗಾತ್ರವು ನಾಗರೀಕರಿಗೆ ಮರೀಚಿಕೆಯಾಗಿ ಕನ್ನಡಿಯೊಳಗಿನ ಗಂಟಾಗಿಯೆ ಪರಿಣಮಿಸಿದೆ.

ರಾಜ್ಯ ಬಜೆಟ್ ಮತ್ತು ಬಿ.ಬಿ.ಎಂ.ಪಿ :

ರಾಜ್ಯ ಸರ್ಕಾರವು ತನ್ನ ಬಜೆಟ್‌ನಲ್ಲಿ ಒಟ್ಟಾರೆ ರೂ.4222 ಕೋಟಿ ನೆರವು, ಮುಖ್ಯಮಂತ್ರಿಗಳ ವಿಶೇಷ ಪ್ಯಾಕೇಜ್ ಮೂಲಕ ಮುಂದಿನ ಎರಡು ವರ್ಷಗಳಲ್ಲಿ ನಗರಕ್ಕೆ ರೂ.5000 ಕೋಟಿ ಅನುದಾನ ಒದಗಿಸುವ ಕ್ರಮ, ಬಿಡಿಎ ಮೂಲಕ 2016–17 ನೇ ಸಾಲಿನಲ್ಲಿ ಆರ್ಥಿಕ ದುರ್ಬಲ ವರ್ಗಗಳು, ಕಡಿಮೆ ಅದಾಯದ ಗುಂಪುಗಳು ಹಾಗು ಮಧ್ಯಮ ಆದಾಯದ ಗುಂಪುಗಳಿಗೆ 3 ಸಾವಿರ ಪ್ಲಾಟ್‌ಗಳ ಹಂಚಿಕೆ, ನಗರಕ್ಕೆ ಸೇರ್ಪಡೆಯಾದ 110 ಹಳ್ಳಿಗಳಿಗೆ ನೀರು ಸರಬರಾಜು ಹಾಗು ಒಳಚರಂಡಿಗೆ ರೂ.5018 ಕೋಟಿ ವೆಚ್ಚದ ಯೋಜನೆ ಜಾರಿ, ನಗರೋತ್ಥಾನ ಯೋಜನೆಯಡಿ ರೂ.1000 ಕೋಟಿ, ವಿಶೇಷ ಬಂಡವಾಳ ಯೋಜನೆಯಡಿ ರೂ.2158 ಕೋಟಿ, ಇತರೆ ಯೋಜನೆಗಳಡಿ ರೂ.1064 ಕೋಟಿ ಸೇರಿ ಒಟ್ಟು ರೂ.6044 ಕೋಟಿ ಅನುದಾನ, ಮೆಟ್ರೋ ಯೋಜನೆಗಳ ವಿಸ್ತರಣೆ, ಉಪನಗರ ರೈಲಿಗೆ ಅನುದಾನ ಮುಂತಾದ ಕ್ರಮಗಳು ಏನನ್ನು ಸೂಚಿಸುತ್ತವೆ ಎಂಬ ಪ್ರಶ್ನೆ ಚರ್ಚೆಗೆ ಒಳಪಟ್ಟಿದೆ. ಸೆಪ್ಟೆಂಬರ್ 2016 ರಲ್ಲಿ ಬದಲಾಗುವ ಮೇಯರ್, ಉಪ ಮೇಯರ್ ಮೀಸಲಾತಿ ಆಧಾರಿತ ಚುನಾವಣೆ ವೇಳೆಗೆ ಜೆ.ಡಿ.ಎಸ್ ಕೈ ಕೊಟ್ಟರೆ ಎಂಬ ಅನುಮಾನ ಆಧಾರಿತ ಲೆಕ್ಕಚಾರ ಕಾಂಗ್ರೆಸ್‌ದಾಗಿರಬಹುದಾಗಿದೆ.

ಬಿ.ಬಿ.ಎಂ.ಪಿ ಬಜೆಟ್ ಕೋಟಿ ರೂಗಳಲ್ಲಿ ವರ್ಗೀಕರಣ 2015–16 ಮತ್ತು 2016–17

ನಂ	ವೆಚ್ಚದ ವಿವರಗಳು	2015-16 (ಕೋಟಿ ರೂಗಳಲ್ಲಿ)	ಶೇಕಡ ವಾರು	2016-17 (ಕೋಟಿ ರೂಗಳಲ್ಲಿ)	ಶೇಕಡ	ಶೇ.ವ್ಯತ್ಯಾಸ
1	ವೇತನ, ಪಿಂಚಣಿ, ಸೌಲಭ್ಯಗಳು	1320.16	26	661.57	7.36	-12.93
2	ಆಡಳಿತಾತ್ಮಕ ವೆಚ್ಚಗಳು			246.46	2.74	
3	ಚಾಲ್ತಿ ಆಸ್ತಿ ಮತ್ತು ಹೊಣೆಗಾರಿಕೆ			446.77	4.97	
				1354.80	13.07	
4	ಕಸ ವಿಲೇವಾರಿ	488.43	10	633.11	7.04	-2.96
5	ಸಾರ್ವಜನಿಕ ಆರ್ಯೋಗ್ಯ	42.67	1	59.21	0.66	-1.32
6	ಶಿಕ್ಷಣ, ಸಂಸ್ಕೃತಿ ಮತ್ತು ಕ್ರೀಡೆ	42.10	0.98			
7	ಕಲ್ಯಾಣ ಕಾರ್ಯಕ್ರಮಗಳು	390.06	8	752.75	8.37	+0.37
8	ತೋಟಗಾರಿಕೆ ಮತ್ತು ಅರಣ್ಯೆಕರಣ	269.06	5	153.15	1.70	-3.3
9	ಮೂಲಸೌಕರ್ಯ ಅಭಿವೃದ್ಧಿ/ನಿರ್ವಹಣೆ	317.25	6	1958.23		-21.23
10	ರಸ್ತೆ ಮತ್ತು ಚರಂಡಿಗಳು	1882.52	37		21.77	
		2199.77	43			
11	ಸರ್ಕಾರದ ಅನುದಾನಿತ ಕಾಮಗಾರಿಗಳು/ ಸಾರ್ವಜನಿಕ ಕಾಮಗಾರಿಗಳು	268.42	5	3723.16	41.39	+36.39
12	ಸಾಲ ಮತ್ತು ಬಡ್ಡಿ ಮರು ಪಾವತಿ			360	4	+4
		5020.68	100	8994.41	100	

ಬಿ.ಬಿ.ಎಂ.ಪಿ ಬಜೆಟ್ ಗುರಿ ತಲುಪಿದ ವಿವರ (ಕೋಟಿ ರೂಗಳಲ್ಲಿ)

ವರ್ಷ	ಬಜೆಟ್	ವಾಸ್ತವಿಕ
2010-11	8447	3320
2011-12	9401	4003
2012-13	9941	3830
2013-14	8521	3093
2014-15	6026	4205
2015-16	5394	4542
2016-17	8991	

ಆಸ್ತಿ ತೆರಿಗೆ ಅಂದಾಜು ಸಂಗ್ರಹ ವಾಸ್ತವಿಕ (ಕೋಟಿ ರೂಗಳಲ್ಲಿ)

ವರ್ಷ	ಬಜೆಟ್	ವಾಸ್ತವಿಕ
2009-10	1100	657
2010-11	1650	823
2011-12	1500	793
2012-13	2000	1085
2013-14	3200	727
2014-15	2135	1032
2015-16	1900	1350
2016-17	2400	---

ಸರ್ಕಾರದ ಮೇಲಿನ ಬಿ.ಬಿ.ಎಂ.ಪಿ ಅವಲಂಬನೆ ಮತ್ತು ಬಿ.ಬಿ.ಎಂ.ಪಿ ಗೆ ಬಂದ ಅನುದಾನ. (ಕೋಟಿ ರೂಗಳಲ್ಲಿ)

ವರ್ಷ	ಬಜೆಟ್ ಪ್ರಸ್ತಾಪ	ಬಂದ ಅನುದಾನ
2011-12	2271	1295
2012-13	1799	1177
2013-14	1733	902
2014-15	2680	1561
2015-16	2891	1500
2016-17	4222	----

2016–17 ಬಿ.ಬಿ.ಎಂ.ಪಿ ಬಜೆಟ್ ಆದಾಯದ ಮೂಲ – ಕೋಟಿ ರೂಗಳಲ್ಲಿ

1	ಆಸ್ತಿ ತೆರಿಗೆ, ಸುಧಾರಣಾ ವೆಚ್ಚ ಹಾಗೂ ಸೆಸ್ ಸಂಗ್ರಹಣೆ ಗುರಿ	3,100
2	ಅಂಗಡಿ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ಬಾಡಿಗೆ ಸಂಗ್ರಹಣೆ	50
3	ಜಾಹೀರಾತು ತೆರಿಗೆಯಿಂದ	145
4	ಆಪ್ಟಿಕಲ್ ಫೈಬರ್ ಕೇಬಲ್ ಶುಲ್ಕ	407
5	ಘನತ್ಯಾಜ್ಯ ನಿರ್ವಹಣೆ ಕರ	80
6	ವ್ಯಾಪಾರ ಪರವಾನಗಿಯಿಂದ ನಿರೀಕ್ಷೆ	58
7	ಶುಲ್ಕ ಮತ್ತು ದಂಡದಿಂದ	372
8	ರಾಜ್ಯ ಸರ್ಕಾರದ ಅನುದಾನ	4,222
9	ಕೇಂದ್ರ ಸರ್ಕಾರದ ಅನುದಾನ	13
	ಒಟ್ಟು	8447

ಆಪ್ ಆಧಾರಿತ ಟ್ಯಾಕ್ಸಿ ಸೇವೆ, ಈಗಿರುವ ವ್ಯವಸ್ಥೆಯನ್ನು ಅಡಿಮೇಲು ಮಾಡಿದೆ. ಚಾಲಕರಿಗೆ, ಗ್ರಾಹಕರಿಗೆ ಬಣ್ಣದ ಮಾತಾಡಿ ಮೋಸ ಮಾಡಿ ಒಲಿಸಿಕೊಂಡು ಅವರನ್ನು ಆ ಮೇಲೆ ಸುಲಿಯ ಹತ್ತಿದೆ. ಬೇರೆ ಯಾವುದೇ ಆಯ್ಕೆಗಳೇ ಇಲ್ಲದಂತೆ ಕಟ್ಟಿ ಹಾಕಿದೆ. ಓಲಾ-ಉಬರ್ ಮುಂತಾದ ಹೆಸರು ಹೊತ್ತ ವಿಪುಲ ವಿದೇಶ ಬಂಡವಾಳ ಹೊಂದಿರುವ ಇಂತಹ ಕಂಪನಿಗಳ ಅವಾಂತರಗಳ ನಿರೂಪಣೆ ಇಲ್ಲಿದೆ. ಈ ಪರಿಸ್ಥಿತಿಯಿಂದ ಹೊರಬರಲು ಆಪ್ ಆಧಾರಿತ ಟ್ಯಾಕ್ಸಿ ಸೇವೆಯ ಬಾಧ್ಯತಗಳನ್ನು ಸ್ಪಷ್ಟ ಪಡಿಸುವ ಪ್ರತ್ಯೇಕ ಕಾನೂನು ಅಗತ್ಯ. ಇದಕ್ಕಾಗಿ ಗ್ರಾಹಕರು, ಟ್ಯಾಕ್ಸಿ ಚಾಲಕರು/ಮಾಲಕರು ಜಂಟಿಯಾಗಿ ಹೋರಾಟ ನಡೆಸಬೇಕಾಗಿದೆ. ಎನ್ನುತ್ತಾರೆ ಸ್ವತಃ ಟ್ಯಾಕ್ಸಿ ಚಾಲಕರಾಗಿ ಅನುಭವವಿರುವ ಸಿ. ಸಿದ್ದಯ್ಯ.

ಲಾಭ ಓಲಾ-ಉಬರ್ ಗೆ, ರಿಸ್ಕ್ ಟ್ಯಾಕ್ಸಿ ಚಾಲಕ-ಮಾಲಕರಿಗೆ



ನಮ್ಮವರದೇ ಟ್ಯಾಕ್ಸಿ. ಟ್ಯಾಕ್ಸಿ ಖರೀದಿಸಲು ಬಂಡವಾಳ ಹೂಡಿದವರೂ ನಮ್ಮವರೇ ಮತ್ತು ಟ್ಯಾಕ್ಸಿ ಕೊಳ್ಳಲು ಸಾಲ ಕೊಟ್ಟ ಬ್ಯಾಂಕುಗಳೂ ನಮ್ಮದೇ. ಗ್ರಾಹಕರೂ ನಮ್ಮವರೇ. ಈ ವ್ಯವಹಾರದಲ್ಲಿ ಹೆಚ್ಚಿನ ಲಾಭ ಗಳಿಸುವವರು ವಿದೇಶಿ ಬಂಡವಾಳಗಾರರು! ಹೌದು, ದೇಶದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಮುಕ್ತ ಅವಕಾಶದಿಂದಾಗಿ ಟ್ಯಾಕ್ಸಿ ಸೇವಾ ವಲಯದಲ್ಲೂ ವಿದೇಶಿ ನೇರ ಬಂಡವಾಳ ಹರಿದು ಬಂತು. ದೇಶದ ಕೆಲ ಖಾಸಗಿ ಟ್ಯಾಕ್ಸಿ ಸೇವಾ ಏಜೆಂಟರ ಕಂಪನಿಗಳಲ್ಲಿ ವಿದೇಶಿ ಹಣಕಾಸು ಸಂಸ್ಥೆಗಳು ಬಂಡವಾಳ ಹೂಡಲು ಮುಂದಾದವು. ಬೊಂಬಾಯಿ ಮೂಲದ ವ್ಯಕ್ತಿಗಳು 2010 ರಲ್ಲಿ ಸ್ಥಾಪನೆ ಮಾಡಿದ ಓಲಾ ಟ್ಯಾಕ್ಸಿ ಕಂಪನಿಯಲ್ಲಿ ಅಮೇರಿಕಾ ಮೂಲದ ಹಣಕಾಸು ಸಂಸ್ಥೆಗಳು ಬಂಡವಾಳ ಹೂಡಿಕೆ ಮಾಡಿವೆ. ಓಲಾ ಕಂಪನಿ ಕಳೆದ ವರ್ಷ ಮಾರ್ಚ್ ನಲ್ಲಿ 'ಟ್ಯಾಕ್ಸಿ ಫಾರ್ ಶೂರ್' ಕಂಪನಿಯನ್ನು 1,250 ಕೋಟಿ ರೂಗಳಿಗೆ ಖರೀದಿಸಿದೆ. ಅಮೇರಿಕಾ ದೇಶದ ಹಣಕಾಸು ಸಂಸ್ಥೆಗಳೂ ಸೇರಿದಂತೆ ಇತರೆ ದೇಶದ ಸಂಸ್ಥೆಗಳು ಬಂಡವಾಳ ಹೂಡತೊಡಗಿದವು. ಅಮೇರಿಕಾ ಮೂಲದ ಉಬರ್ ಎಂಬ ಕಂಪನಿಯೂ ದೇಶದ ಹಲವು ನಗರಗಳಲ್ಲಿ ತನ್ನ ಕಾರ್ಯಚಟುವಟಿಕೆ ಆರಂಬಿಸಿತು.

ಒಂದೂ ಟ್ಯಾಕ್ಸಿ ಖರೀದಿಸದ ಟ್ಯಾಕ್ಸಿ ಕಂಪನಿ

ಈ ಎಲ್ಲಾ ಕಂಪನಿಗಳು ಟ್ಯಾಕ್ಸಿ ಸೇವಾ ವಲಯದಲ್ಲಿ ಸಾವಿರಾರು ಕೋಟಿ ರೂ. ಬಂಡವಾಳ ಹೂಡಿಕೆ ಮಾಡಿವೆ. ಉಬರ್ ಕಂಪನಿಯೊಂದೇ ತನ್ನ ಹಿಂದಿನ ಬಂಡವಾಳದ ಜೊತೆಗೆ 2016 ರ ಒಂದೇ ವರ್ಷದಲ್ಲಿ ಒಂದು ಬಿಲಿಯನ್ ಡಾಲರ್ (6,500 ಕೋಟಿ ರೂ) ಬಂಡವಾಳ ಹೂಡಿದೆ. ಅಶ್ಚರ್ಯವೆಂದರೆ ಈ ಬಂಡವಾಳದಲ್ಲಿ ಒಂದೇ ಒಂದು ಟ್ಯಾಕ್ಸಿಯನ್ನೂ ಈ ಕಂಪನಿಗಳು ಖರೀದಿಸಲಿಲ್ಲ. ಗ್ರಾಹಕರು ಮತ್ತು ಟ್ಯಾಕ್ಸಿ ಚಾಲಕರನ್ನು ತನ್ನತ್ತ ಸೆಳೆಯಲಷ್ಟೇ ಈ ಹಣವನ್ನು ಬಳಸಿಕೊಳ್ಳಲಾಗಿದೆ. ಚಾಲಕರಿಗೆ 'ಪ್ರೋತ್ಸಾಹಧನ'ದ ಅಮಿಷವೊಡ್ಡಿ ತನ್ನೆಡೆಗೆ ಸೆಳೆದುಕೊಂಡರೆ, ಗ್ರಾಹಕರಿಗೆ ಭಾರಿ 'ರಿಯಾಯಿತಿ'ಗಳನ್ನೇ ನೀಡಿತು. ತನ್ನ ಮೊಬೈಲ್ ಆಪ್ (APP) ಮೂಲಕ ಮೊದಲ ಬಾರಿಗೆ ಟ್ಯಾಕ್ಸಿ ಗೊತ್ತುಪಡಿಸಿದವರ ಖಾತೆಗೆ 'ಉಚಿತ ಹಣ' ತುಂಬಿದರು. ಕಡಿಮೆ ದರದಲ್ಲಿ ಸೇವೆ ಹೊದಗಿಸಿದರು. ವಿದೇಶಿ ಕಂಪನಿಗಳ ಅಮಿಷಗಳಿಗೆ ಗ್ರಾಹಕರು ಮುಗಿಬಿದ್ದರು. ಆಶ್ಚರ್ಯವೆಂದರೆ, ಈ ರೀತಿ ಉಚಿತ ಹಣಕ್ಕಾಗಿ ಮುಗಿಬಿದ್ದವರು ವಿದ್ಯಾವಂತ ಮತ್ತು ಆರ್ಥಿಕವಾಗಿ ಉತ್ತಮವಾಗಿರುವ ಜನರೇ ಆಗಿದ್ದರು.

2009 ಜೂನ್ ನಲ್ಲಿ ಅಮೇರಿಕಾ ದೇಶದ ಕ್ಯಾಲಿಫೋರ್ನಿಯಾದ 'ಉಬರ್ ಕ್ಯಾಬ್' ಎಂಬ ಸಂಸ್ಥೆ ಗ್ರಾಹಕರು ಮತ್ತು ಟ್ಯಾಕ್ಸಿ ಚಾಲಕರ ಮಧ್ಯೆ ಸಂಪರ್ಕ ಸೇತುವಾಗಬಲ್ಲ ಒಂದು ಆಪ್ ರೂಪಿಸಿ ಬಿಡುಗಡೆ ಮಾಡಿತು. ಇದಕ್ಕೆ ಅಮೇರಿಕಾ ಗ್ರಾಹಕರಿಂದ ಅಭೂತಪೂರ್ವ ಸ್ವಾಗತ ದೊರಕಿತು. ನಂತರ ಇದೇ ಸೇವೆಯನ್ನು ನೀಡುವ ಮತ್ತಷ್ಟು ಕಂಪನಿಗಳು ಹುಟ್ಟಿಕೊಂಡವು. 2015 ರಲ್ಲಿ ಜಗತ್ತಿನ 58 ದೇಶಗಳ ಸುಮಾರು 300 ನಗರಗಳಲ್ಲಿ ಉಬರ್ ಕಂಪನಿ ಕಾರ್ಯಾಚರಣೆ ನಡೆಸುತ್ತಿತ್ತು. ಭಾರತದ ಶೇ 16 ರಷ್ಟು ಪಾಲು ಉಬರ್ ಕಂಪನಿಯದಾಗಿದೆ. ಈ ಆಪ್ ಆಧಾರಿತ ಟ್ಯಾಕ್ಸಿ ಸೇವಾಕಂಪನಿಗಳು ಭಾರತಕ್ಕೆ ಕಾಲಿಟ್ಟಾಗ ಗ್ರಾಹಕರಿಗೆ ಹೆಚ್ಚು ಆಯ್ಕೆಯನ್ನೂ, ಟ್ಯಾಕ್ಸಿ ಚಾಲಕರಿಗೆ ಹೊಸ ಅವಕಾಶವನ್ನೂ ಕಲ್ಪಿಸಿಕೊಡುತ್ತದೆ ಎಂದೇ ಬಹಳಷ್ಟು ಜನ ನಂಬಿದ್ದರು. ಭಾರತಕ್ಕೆ ಈ ಕಂಪನಿಗಳು ಕಾಲಿಡುವ ಮುನ್ನ ವಿದೇಶಗಳಲ್ಲಿ ಇವುಗಳ ವಂಚನೆ ನಡೆಯುತ್ತಿತ್ತಾದರೂ ಭಾರತೀಯರ ಗಮನಕ್ಕೆ ಬಂದಿರಲಿಲ್ಲ. ಈ ಕಂಪನಿಗಳು ಸರಿಯಾದ ತೆರಿಗೆ ಪಾವತಿಸುವುದಿಲ್ಲ. ದೇಶದ ಕಾನುನುಗಳಿಗೆ ತಕ್ಕಂತೆ ನಡೆದುಕೊಳ್ಳುವುದಿಲ್ಲ. ಇಲ್ಲಿನ ಸರ್ಕಾರಗಳು ನಿಗದಿ ಪಡಿಸಿದ ದರದಲ್ಲಿ ಸೇವೆ ಸಲ್ಲಿಸುವುದಿಲ್ಲ. ಪ್ರಯಾಣಿಕರ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಿಲ್ಲ ಚಾಲಕರಿಗೆ ವಿಶ್ರಾಂತಿ ನೀಡುವುದಿಲ್ಲ. ಯಾವುದೇ ಕಾರ್ಮಿಕ ಕಾನೂನಿಗೆ ಬೆಲೆ ಕೊಡುವುದಿಲ್ಲ.

ಉಬರ್ ವಿರುದ್ದ ಜಗತ್ತಿನ ಹಲವು ದೇಶಗಳಲ್ಲಿ ಟ್ಯಾಕ್ಸಿ ಚಾಲಕರು ಮತ್ತು ಗ್ರಾಹಕರಿಂದ ಪ್ರತಿಭಟನೆಗಳು ನಡಿದಿವೆ. 2015 ರ ಮಧ್ಯಬಾಗದಲ್ಲಿ ಜರ್ಮನಿ, ಸ್ಪೇನ್, ಕೊಲಂಬಿಯಾ, ಫ್ರಾನ್ಸ್, ಇಟಲಿ, ಡೆನ್ಮಾರ್ಕ್, ಕೆನಡಾ, ಚೀನಾ, ಮತ್ತು ಇಂಗ್ಲೆಂಡ್‌ಗಳಲ್ಲಿ ಪ್ರತಿಭಟನೆಗಳು ನಡೆದಿವೆ. ದೆಹಲಿಯಲ್ಲಿ ಯುವತಿಯ ಮೇಲೆ ಚಾಲಕನೊಬ್ಬ ಅತ್ಯಾಚಾರ ನಡೆಸಿದ ಸಂದರ್ಭದಲ್ಲಿಯೂ ಉಬರ್ ವಿರುದ್ದ ಬೃಹತ್ ಪ್ರತಿಭಟನೆಗಳು ನಡೆದಿವೆ. ಗ್ರಾಹಕರು ಮರೆಮಾಚಿದ ದರದ ಬಗ್ಗೆ ದೂರಿ ನ್ಯಾಯಾಲಯದ ಮೊರೆ ಹೋಗಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ, ಸಾರಿಗೆ ಇಲಾಖೆಗಳಿಗೆ ದೂರು ನೀಡುತ್ತಲೇ ಇದ್ದಾರೆ. ಆದರೂ ಈ ವಿದೇಶಿ ಕಂಪನಿಗಳ ವಿರುದ್ದ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ, ಅಥವಾ ಕ್ರಮ ಕೈಗೊಳ್ಳಲು ಮುಂದಾಗುತ್ತಿಲ್ಲ. ಆಪ್ ಆಧಾರಿತ ಸೇವೆ ಮಾಹಿತಿ ತಂತ್ರಜ್ಞಾನದ ಅಡಿಯಲ್ಲಿ ಬರುತ್ತದೆ. ನಮ್ಮದೇನಿದ್ದರೂ ಚಾಲಕರು ಮತ್ತು ಗ್ರಾಹಕರಿಗೆ ಮಾಹಿತಿ ಹೊದಗಿಸಿಕೊಡುವುದಷ್ಟೇ ನಮ್ಮ ಕೆಲಸ. ಹಾಗಾಗಿ ನೀವು ನಮ್ಮ ಮೇಲೆ ರೇಡಿಯೋ ಟ್ಯಾಕ್ಸಿ ನಿಯಮ ಅನ್ವಯಿಸುವಂತಿಲ್ಲ ಎಂದು ಈ ಕಂಪನಿಗಳು ವಾದಿಸುತ್ತಿವೆ. ಈ ಕಂಪನಿಗಳನ್ನು ನಿಯಂತ್ರಿಸುವ ಪ್ರಯತ್ನವನ್ನು ಸರ್ಕಾರಗಳು ಮಾಡುತ್ತಿಲ್ಲ. ಇಲ್ಲಿನ ರಾಜ್ಯ ಸರ್ಕಾರ ಕೇಂದ್ರದ ಕಡೆ ಬೆರಳು ತೋರಿಸಿದರೆ, ಸಾರಿಗೆ ಇಲಾಖೆ ನಮಗೆ ಅಧಿಕಾರವಿಲ್ಲ ಎಂದು ಹೇಳುತ್ತಾ ಮೂಕಪ್ರೇಕ್ಷಕನಂತೆ ಅನ್ಯಾಯಗಳನ್ನು ನೋಡುತ್ತಾ ಕುಳಿತಿದೆ.

ಯಾವುದೇ ಕಾನೂನು-ನಿಯಮಕ್ಕೆ ಒಳಪಡದ ವಹಿವಾಟು

ಎಲ್ಲಾ ರಾಜ್ಯ ಸರ್ಕಾರಗಳೂ ಟ್ಯಾಕ್ಸಿ ಪ್ರಯಾಣಕ್ಕೆ ನಿರ್ದಿಷ್ಟ ದರ ನಿಗದಿಮಾಡಿವೆ. ನಗರ ಪ್ರದೇಶಗಳಲ್ಲಿ ಸೇವೆಯಲ್ಲಿ ತೊಡಗಿರುವ ಟ್ಯಾಕ್ಸಿಗಳಿಗೆ ಮೀಟರ್ ಅಳವಡಿಸಬೇಕೆಂಬ ನಿಯಮವಿದೆ. ಹಾಗೆಯೇ ಚಾಲಕರ ಅರ್ಹತೆ ಮತ್ತು ಅದನ್ನು ಹೇಗೆ ಪ್ರದರ್ಶಿಸಬೇಕೆಂಬ ನಿಯಮಗಳೂ ಇವೆ. ಹಿಂದೆ ಮೀಟರ್ ಅಳವಡಿಸಿಕೊಂಡ ರೇಡಿಯೋ ಟ್ಯಾಕ್ಸಿಗಳು ನಗರಗಳಲ್ಲಿ ಸಂಚರಿಸುತ್ತಿದ್ದವು. ಬೆಂಗಳೂರು ನಗರದಲ್ಲಿ ಸಾರಿಗೆ ಸೇವೆ ಸಲ್ಲಿಸುವಲ್ಲಿ ಟ್ಯಾಕ್ಸಿಗಳ ಸ್ಥಾನ ಮೂರನೆಯದು. ಇತ್ತೀಚೆಗೆ ಸ್ವಂತ ಉದ್ಯೋಗಕ್ಕಾಗಿ ಹಲವರು ಸ್ವಂತ ಟ್ಯಾಕ್ಸಿ ಹೊಂದಿದ್ದಾರೆ. ಅದರ ದುಡಿಮೆಯಿಂದ ಬಂದ ಆದಾಯದಿಂದ ಜೀವನ ಸಾಗಿಸುತ್ತಿದ್ದಾರೆ. ಅದಕ್ಕಾಗಿ ಬ್ಯಾಂಕುಗಳಲ್ಲಿ ಮತ್ತು ಖಾಸಗಿ ಲೇವಾದೇವಿದಾರರಿಂದ ಸಾಲ ಸೌಲಭ್ಯ ಪಡೆದಿದ್ದಾರೆ. ಸಾಲ ಮಾಡಿ ಸ್ವಂತ ಟ್ಯಾಕ್ಸಿ ಹೊಂದಿರುವ ಚಾಲಕರ ಪಾಡು ಹೇಳತೀರದು. ಇತ್ತ ಮಾಡಿರುವ ಸಾಲದ ಕಂತು ಕಟ್ಟಬೇಕು. ಸಾಲಕ್ಕೆ ಬಡ್ಡಿ ಕಟ್ಟಬೇಕು. ವಾಹನ ದುರಸ್ಥಿಗಾಗಿ ಖರ್ಚು ಮಾಡಬೇಕು. ಜೊತೆಗೆ ತನ್ನ ಕುಟುಂಬ ನಿರ್ವಹಣೆ ಮಾಡಬೇಕು. ಅದಕ್ಕಾಗಿ ಮತ್ತಷ್ಟು ಸಾಲದ ಬಲೆಗೆ ಸಿಲುಕುತ್ತಲೇ ಹೋಗುತ್ತಾರೆ. ಬೇರೆ ಉದ್ಯಮ ವಿಭಾಗದಲ್ಲಿ ಬಂಡವಾಳ ಹೂಡಿದರೆ, ಆದರ ಬಂಡವಾಳದ ಮೌಲ್ಯ ಕಡಿಮೆಯಾಗುವುದಿಲ್ಲ. ಅದರ ಮೌಲ್ಯ ಹೆಚ್ಚುತ್ತಿರುತ್ತದೆ. ಆದರೆ. ಟ್ಯಾಕ್ಸಿ ಖರೀದಿಸಿದರೆ ಪ್ರತಿ ವರ್ಷ ಶೇ.10 ರಷ್ಟು ಬಂಡವಾಳ ಮೌಲ್ಯದಲ್ಲಿ ಕಡಿತವಾಗುತ್ತಲೇ ಇರುತ್ತದೆ. (ವಿಮಾ ಕಂಪನಿಗಳ ಪ್ರಕಾರ ಶೇ.10 ಕಡಿಮೆಯಾಗುತ್ತದೆ. ನಿಜವಾದ ಮಾರುಕಟ್ಟೆ ಮೌಲ್ಯದಲ್ಲಿ ಇದಕ್ಕಿಂತ ಹೆಚ್ಚು ಕಡಿಮೆಯಾಗುತ್ತದೆ) ಈ ರೀತಿ ಸಾಲ ಮಾಡಿ ಪಡೆದ

ಪುಟ 10 ಕ್ಕೆ

ಮರೆಮಾಚಿದ ದರ:

ಓಲಾ, ಟ್ಯಾಕ್ಸಿಫಾರ್ ಶ್ಯೂರ್ ಮತ್ತು ಉಬರ್ ನಂತಹ ಕಂಪನಿಗಳು ಗ್ರಾಹಕರಿಗೆ ಕಡಿಮೆ ದರದಲ್ಲಿ ಟ್ಯಾಕ್ಸಿ ಸೇವೆ ಹೊದಗಿಸುವುದಾಗಿ ಜಾಹಿರಾತು ಮಾಡುತ್ತಿವೆ. ಉಬರ್ ತಾನು ಕಿ.ಮೀ. ಕೇವಲ 7 ರೂ. ಗೆ ಸೇವೆ ನೀಡುತ್ತೇವೆ ಎಂದು ಹೇಳುತ್ತದೆ. ಓಲಾ ಕನಿಷ್ಟ ದರ 4 ಕಿ.ಮೀ. 80 ರೂ. ನಂತರದ ಪ್ರತಿ ಕಿ.ಮೀ. ದರ 10 ರೂ. ಆದರೆ, ಅದರ ಜೊತೆಗೆ ಪ್ರಯಾಣದ ಅವದಿಗೂ ದರ ನಿಗದಿ ಪಡಿಸುತ್ತದೆ. ಮಿನಿ ಟ್ಯಾಕ್ಸಿಗೆ (ಇಂಡಿಕಾ ದಂತಹ ಟ್ಯಾಕ್ಸಿ) ಪ್ರತಿ ನಿಮಿಷದ ಪ್ರಯಾಣದರ 1 ರೂ ವಸೂಲಿ ಮಾಡುತ್ತದೆ. ಬೆಂಗಳೂರಿನಂತಹ ಸಂಚಾರ ಒತ್ತಡ ವಿರುವ ನಗರಗಳಲ್ಲಿ ಗಂಟೆಗೆ 10 ಕಿ.ಮೀ. ದೂರ ಕ್ರಮಿಸಬಹುದಷ್ಟೆ. ಅಂದರೆ ಒಂದು ಗಂಟೆಯ ಪ್ರಯಾಣಕ್ಕೆ 60 ರೂ. ಹೆಚ್ಚು ಹಣ ಕೊಡಬೇಕಾಗುತ್ತದೆ. 10 ಕಿ.ಮೀ. ಪ್ರಯಾಣ ದರ (ಮೊದಲ 4 ಕಿ.ಮೀ. 80+6 ಕಿ.ಮೀ. ಗೆ 60+ಪ್ರಯಾಣದ ಅವಧಿಯ ದರ 60) 200 ರೂ ಆಗುತ್ತದೆ. ಇದಲ್ಲದೇ ಶೇ. 14 ಸೇವಾತೆರಿಗೆ ಸೇರಿಸಲಾಗುತ್ತದೆ. ಪ್ರಯಾಣದರ ದಿನದ 24 ಗಂಟೆಗಳೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಬೇಡಿಕೆಗೆ ಅನುಗುಣವಾಗಿ ದರ ನಿಗದಿಪಡಿಸುತ್ತಾರೆ. ಬೇಡಿಕೆ ಹೆಚ್ಚಾಗಿರುವ ಸಮಯ ಅಥವಾ ಹೆಚ್ಚು ಬೇಡಿಕೆ ಇರುವ ಪ್ರದೇಶಗಳ ಗ್ರಾಹಕರಿಗೆ ಹೆಚ್ಚು ದರ ನಿಗದಿಪಡಿಸುತ್ತಾರೆ. ದರದ ಒಂದೂವರೆ ಪಟ್ಟಿನಿಂದ ನಾಲ್ಕು ಪಟ್ಟು ಹೆಚ್ಚು ದರ ವಸೂಲಿ ಮಾಡುತ್ತಾರೆ. ಟ್ಯಾಕ್ಸಿ ಗೊತ್ತುಪಡಿಸುವ ಸಂದರ್ಭದಲ್ಲೇ ಪ್ರಯಾಣ ದರದ ಮೊತ್ತದ ಮಾಹಿತಿ ನೀಡುತ್ತಾರೆ. ಉದಾಹರಣೆಗೆ ಗ್ರಾಹಕನೊಬ್ಬ ತನ್ನ ಮೊಬೈಲಿನಲ್ಲಿನ ಆಫ್ ಮೂಲಕ ಟ್ಯಾಕ್ಸಿ ಗೊತ್ತುಪಡಿಸುತ್ತಾನೆ ಎಂದಿಟ್ಟು ಕೊಳ್ಳೋಣ. ಆತ ಎಲೆಕ್ಟ್ರಾನಿಕ್ ಸಿಟಿಯಿಂದ ಜೆಪಿ ನಗರಕ್ಕೆ ಹೋಗಲು ಆಫ್ ನಲ್ಲಿ ನಮೂದಿಸುತ್ತಾನೆ. ತನ್ನ ಎಲ್ಲಾ ಟ್ಯಾಕ್ಸಿಗಳಿಗೆ ಜಿಪಿಆರ್‌ಎಸ್ ಸಾದನ ಅಳವಡಿಸಿರುವುದರಿಂದ ಅವುಗಳ ಚಲನ ವಲನ ಕಛೇರಿಯ ಕಂಪ್ಯೂಟರ್ ಗೋಡೆಯ ಮೇಲೆ ಮೂಡಿಬರುತ್ತದೆ. ಆ ಸಮಯದಲ್ಲಿ ಆ ಪ್ರದೇಶದ 2 ಕಿ.ಮೀ. ಸುತ್ತಮುತ್ತಲ ಪ್ರದೇಶದಲ್ಲಿ ಎಷ್ಟು ಟ್ಯಾಕ್ಸಿಗಳಿವೆ ಎಂದು ಟ್ರಾವೆಲ್ ಕಂಪನಿಯಲ್ಲಿ ಕುಳಿತ ನೌಕರರಿಗೆ ತಿಳಿಯುತ್ತದೆ. ಇದರ ಆಧಾರದಲ್ಲಿ ದರ ನಿಗದಿಪಡಿಸಿ ಗ್ರಾಹಕನಿಗೆ ಮಾಹಿತಿ ನೀಡುತ್ತದೆ. ಗ್ರಾಹಕನಿಗೆ ಬೇರೆ ಆಯ್ಕೆಗಳಿಲ್ಲದ ಕಾರಣದಿಂದಾಗಿ ಕಂಪನಿ ನಿಗದಿಪಡಿಸಿದ ದರ ಕೊಡಲು ಒಪ್ಪಿಗೆ ಸೂಚಿಸುತ್ತಾನೆ. ಒಂದೇ ದೂರದ ಪ್ರಯಾಣಕ್ಕೆ ನಾಲ್ಕಾರು ಪಟ್ಟು ದರ ಕೊಟ್ಟ ಉದಾಹರಣೆಗಳೂ ಸಾಕಷ್ಟಿವೆ.

ಚಾಲಕರಿಗೆ ವಂಚನೆ

ಈ ಕಂಪನಿಗಳು ಸ್ವಂತ ಟ್ಯಾಕ್ಸಿ ಹೊಂದಿಲ್ಲ. ಎಲ್ಲಾ ಟ್ಯಾಕ್ಸಿಗಳೂ ಸ್ವಂತ ಟ್ಯಾಕ್ಸಿ ಹೊಂದಿರುವ ಚಾಲಕರದು. ಅಥವಾ ಒಂದೆರೆಡು ಟ್ಯಾಕ್ಸಿ ಖರೀದಿಸಿ ಚಾಲಕರನ್ನು ಗೊತ್ತುಪಡಿಸಿರುವ ಮಾಲೀಕರದ್ದು. ಗ್ರಾಹಕರ ಸಂಪರ್ಕ ಕಲ್ಪಿಸಿಕೊಡುವ ಟ್ರಾವೆಲ್ ಕಂಪನಿಗೆ ನಿರ್ಧಿಷ್ಟ ಪ್ರಮಾಣದ ಕಮೀಷನ್ ಕೊಡುತ್ತಾರೆ. ಗ್ರಾಹಕರಿಂದ ಮನಬಂದಂತೆ ಪ್ರಯಾಣದರ ವಸೂಲಿ ಮಾಡುವ ಈ ಕಂಪನಿಗಳು, ಟ್ಯಾಕ್ಸಿ ಚಾಲಕರಿಗೆ ಕಡಿಮೆ ದರ ನೀಡುತ್ತಿವೆ. ಎಲ್ಲಾ ಸಂದರ್ಭಗಳಲ್ಲೂ ಒಂದೇ ದರ ನಿಗದಿಪಡಿಸಿವೆ. ಉಬರ್ ಮಿನಿ ಟ್ಯಾಕ್ಸಿ ಚಾಲಕರಿಗೆ ಕಿ.ಮೀ. ಒಂದಕ್ಕೆ 7 ರೂ. ನೀಡಿದರೆ, ಓಲಾ 10 ರೂ. ಮಾತ್ರ ಕೊಡುತ್ತದೆ. ದಿನವೊಂದರಲ್ಲಿ ನಿರ್ಧಿಷ್ಟ ಪಡಿಸಿದ ಸವಾರಿ ಮಾಡಿದರೆ ಪ್ರೋತ್ಸಾಹಧನ ನೀಡುವುದಾಗಿ ಹೇಳುವ ಮೂಲಕ, ಚಾಲಕರನ್ನು ಒತ್ತಾಯ ಪೂರ್ವಕವಾಗಿ ಶ್ರಮಪಡುವಂತೆ ಮಾಡಿವೆ. ದಿನದಲ್ಲಿ ಕನಿಷ್ಟ 8 ಸವಾರಿ ಮಾಡಿದರೆ 500 ರೂ. 12 ಸವಾರಿ ಮಾಡಿದರೆ 1000 ರೂ. ಪ್ರೋತ್ಸಾಹಧನ ನೀಡುವುದಾಗಿ ಹೇಳುತ್ತವೆ. (ಇದರ ಮೊತ್ತ ಕ್ರಮೇಣ ಕಡಿತವಾಗುತ್ತಿದೆ. ಷರತ್ತುಗಳು ಕಠಿಣವಾಗುತ್ತಿವೆ.) ಅದಕ್ಕಾಗಿ ಹಗಲು ರಾತ್ರಿಯೆನ್ನದೆ, ವಿಶ್ರಾಂತಿಯನ್ನೂ ಪಡೆಯದೆ ದುಡಿಯುವ ಅನಿವಾರ್ಯತೆಗೆ ಚಾಲಕರು ಒಳಗಾಗಿದ್ದಾರೆ. ಸಂಚಾರದ ಒತ್ತಡದ ಕಾರಣದಿಂದಲೋ, ಪ್ರಯಾಣಿಕರನ್ನು ಕರೆದೊಯ್ದ ಕೆಲವು ಪ್ರದೇಶಗಳಲ್ಲಿ ತಕ್ಷಣಕ್ಕೆ ಸವಾರಿ ಸಿಗದ ಕಾರಣದಿಂದಲೊ, ಅನಾರೋಗ್ಯದಿಂದಲೋ, ವಾಹನದ ದುರಸ್ಥಿಯ ಕಾರಣದಿಂದಲೋ ನಿಗದಿಪಡಿಸಿದ ಸವಾರಿ ಮಾಡಲು ಸಾಧ್ಯವಾಗದಿದ್ದರೆ, ಕಿ.ಮೀ. ಗೆ ಪಡೆದ 7 ರೂ. ಕೇವಲ ಅದು ಬಳಸುವ ಇಂದನಕ್ಕಷ್ಟೇ ಸಾಕಾಗುತ್ತದೆ. ಎಸಿ ಚಾಲನೆಯಲ್ಲಿಟ್ಟು ಟ್ಯಾಕ್ಸಿ ಓಡಿಸಿದರೆ ನಗರದ ಸಂಚಾರದ ಒತ್ತಡದಲ್ಲಿ ಹೆಚ್ಚು ಇಂದನ ಖರ್ಚಾಗುತ್ತದೆ.

ಶೇ. 25 ಕಮೀಷನ್: ಚಾಲಕರಿಂದ ಆತ ದಿನವೊಂದರಲ್ಲಿ ಮಾಡಿದ ಸಂಪಾನೆಯ ಶೇ. 25 ರಷ್ಟು ಕಮೀಷನ್ ಪಡೆಯಲಾಗುತ್ತದೆ. ಉದಾಹರಣೆಗೆ ಚಾಲಕನೊಬ್ಬ 10 ಸವಾರಿ ಮಾಡಿದನೆಂದು ಇಟ್ಟುಕೊಳ್ಳೋಣ. ಸವಾರಿಯಿಂದ ಬಂದ ಹಣ ಅಂದಾಜು 1,500 ರೂ. ಮತ್ತು ಪ್ರೋತ್ಸಾಹಧನ 500 ರೂ. (8 ಸವಾರಿ ಲೆಕ್ಕದಲ್ಲಿನ ಪ್ರೋತ್ಸಾಹಧನ) ಒಟ್ಟು 2,000 ರೂ. ಈ ಹಣದಲ್ಲಿ ಕಂಪನಿ ಪಡೆಯುವ ಕಮೀಷನ್ ಮೊತ್ತ 500 ರೂ. ಚಾಲಕ ಎರಡೋ ಮೂರೋ ಸವಾರಿ ಮಾಡಲಷ್ಟೇ ಸಾಧ್ಯವಾದರೆ, ಆ ಸವಾರಿಯಲ್ಲಿ ಗಳಿಸಿದ ಇನ್ನೂರೋ ಮುನ್ನೂರೋ ರೂಪಾಯಿಯಲ್ಲೂ ಶೇ. 25 ರಷ್ಟು ಕಮೀಷನ್ ಕಡಿತವಾಗುತ್ತದೆ.

ಕೋಲಾರ ಕಟ್ಟಡ ಕಾರ್ಮಿಕರ ಸಂಘದ ಮಹಿಳಾ ದಿನಾಚರಣೆ

ಮಹಿಳೆಯರು ಸಮಾಜದ ಬೆಳವಣಿಗೆಯಲ್ಲಿ ಪುರುಷರಷ್ಟೆ ಪ್ರಮುಖ ಪಾತ್ರ ವಹಿಸುತ್ತಿದ್ದರೂ, ಮಹಿಳೆಯರು ಮುಖ್ಯ ವಾಹಿನಿಗೆ ಬರದಂತೆ ಅವ್ಯವಸ್ಥಿತವಾಗಿ ತಡೆಯಲಾಗುತ್ತಿದೆ ಎಂದು ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತೆ ಕಾತ್ಯಾಯಿನಿ ಚಾಮರಾಜ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಫೆಡರೇಷನ್ ಕೋಲಾರ ಜಿಲ್ಲಾ ಹಾಗೂ ತಾಲೂಕು ಸಮಿತಿ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಕಟ್ಟಡ ಕಾರ್ಮಿಕ ಮಹಿಳೆಯರ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪುರುಷರಿಗಿಂತ ಮಹಿಳೆಯರು ಯಾವುದರಲ್ಲೂ ಕಡಿಮೆ ಇಲ್ಲ. ಜನಸಂಖ್ಯೆಯಲ್ಲಿ ಮಹಿಳೆಯರು ಅರ್ಧದಷ್ಟು ಇದ್ದರೂ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸದೇ, ಕೇವಲ ತೋರಿಕೆಗೆ ಮಾತ್ರ ಸಣ್ಣ ಪ್ರಮಾಣ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ. ಸ್ವಾತಂತ್ರ್ಯ ಬಂದು 69 ವರ್ಷ ಕಳೆದ ನಂತರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಆದರೆ ಮಹಿಳೆಯರ ಹೆಸರಿನಲ್ಲಿ ಪುರುಷರು ಅಧಿಕಾರ ಚಲಾಯಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ ಅವರು ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೆನೆಗುದಿಗೆ ಬಿದ್ದಿದ್ದು, ಈ ಬಗ್ಗೆ ತೀವ್ರ ಹೋರಾಟಗಳನ್ನು ನಡೆಸಬೇಕಾಗಿದೆ ಎಂದರು.

ಕಟ್ಟಡ ನಿರ್ಮಾಣ ರಂಗದಲ್ಲಿ ಮಹಿಳೆಯು ಪ್ರಮುಖ ಪಾತ್ರ ವಹಿಸುತ್ತಿದ್ದರೂ, ಕೂಲಿಯಲ್ಲಿ ತಾರತಮ್ಯ ನೀತಿಯನ್ನು ಅನುಸರಿಸಲಾಗುತ್ತಿದೆ. ಕೆಲಸ ಮಾಡುವ ಸ್ಥಳದಲ್ಲಿ ಮಕ್ಕಳಿಗಾಗಿ ಬಾಲವಾಡಿ ಸ್ಥಾಪನೆ, ಮಹಿಳೆಯರಿಗೆ ಪ್ರತ್ಯೇಕ ವಿಶ್ರಾಂತಿ ಗೃಹ ಮತ್ತು ಶೌಚಾಲಯವನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರಿ ಕಾನೂನು ಇದ್ದರೂ ಅಧಿಕಾರಿಗಳು ಈ ಬಗ್ಗೆ ಯಾವುದೇ ಗಮನ ಹರಿಸುತ್ತಿಲ್ಲ. ಈ ಬಗ್ಗೆ ತಮ್ಮ ಸಂಸ್ಥೆಯ ವತಿಯಂದ ಕಾನೂನು ಹೋರಾಟ ನಡೆಸುತ್ತಿರುವುದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ ಮಾತನಾಡಿ ಕೃಷಿ ಚಟುವಟಿಕೆ, ಈ ಜಗತ್ತಿಗೆ ಪರಿಚಯಿಸಿದ ಕೀರ್ತಿ ಮಹಿಳೆಗೆ ಸಲ್ಲುತ್ತದೆ. ಸಮಾಜದ ಎಲ್ಲಾ ರೀತಿಯ ಬೆಳವಣಿಗೆಯಲ್ಲಿ ಮಹಿಳೆ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರೂ, ಮಹಿಳೆಯರು ಮುಖ್ಯ ವಾಹಿನಿಗೆ ಬರದಂತೆ ತಡೆಯಲಾಗುತ್ತಿದೆ. ಕುಟುಂಬದ ಪೋಷಣೆಯಲ್ಲಿ ಮಹಿಳೆಯರ ವಹಿಸುವ ಪಾತ್ರಕ್ಕೆ ಯಾವುದೇ ಬೆಲೆ ಕಟ್ಟಲಾಗದು ಎಂದು ಅಭಿಪ್ರಾಯಪಟ್ಟರು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಾಕಷ್ಟು ಹಣ ಇದ್ದರೂ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಸಕಾಲದಲ್ಲಿ ತಲುಪಿಸಲು ಸರ್ಕಾರ ಮೀನಾ ಮೇಷ ಎಣಿಸುತ್ತಿದೆ. ಪಿಂಚಣಿ, ಮನೆ ನಿರ್ಮಾಣಕ್ಕೆ ಸಹಾಯಧನ ಮದುವೆ ಸಹಾಯಧನವನ್ನು ನೀಡದೇ ವರ್ಷಾನುಗಟ್ಟಲೇ ಸತಾಯಿಸುತ್ತಿದೆ. ಈ ಬಗ್ಗೆ ತೀವ್ರ ರೀತಿಯ ಹೋರಾಟಗಳನ್ನು ನಡೆಸಬೇಕಾಗಿದೆ ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಸಿಐಟಿಯು ಜಿಲ್ಲಾಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ, ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾ ಕಾರ್ಯದರ್ಶಿ ಹೊನ್ನೇನಹಳ್ಳಿ ಯಲ್ಲಪ್ಪ, ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಮುನಿರಾಜಮ್ಮ ಮತ್ತಿತರರು ಭಾಗವಹಿಸಿದ್ದರು. ಕಟ್ಟಡಕಾರ್ಮಿಕರ ಸಂಘದ ಮುಖಂಡರಾದ ಎಸ್. ಆಶಾ ಅಧ್ಯಕ್ಷತೆಯನ್ನು ವಹಿಸಿದ್ದರು. ನಿರ್ಮಲ ಸ್ವಾಗತಿಸಿದರು. ಜಯಮ್ಮ ವಂದಿಸಿದರು.

ವರದಿ : ವಿಜಯಕೃಷ್ಣ, ಕೋಲಾರ

ಲಾಭ ಓಲಾ–ಉಬರ್ ಗೆ, ರಿಸ್ಕ್ ಟ್ಯಾಕ್ಸಿ......... ಪುಟ 9 ರಿಂದ

ಟ್ಯಾಕ್ಸಿಗಳಿಗೆ ಗ್ರಾಹಕರನ್ನು ಸೆಳೆಯಲು ಟ್ರಾವೆಲ್ ಏಜೆನ್ಸಿಗಳಲ್ಲಿ ತಮ್ಮ ವಾಹನಗಳನ್ನು ಸೇರ್ಪಡೆಗೊಳಿಸ ಬೇಕಾಗುತ್ತದೆ. ಅದಕ್ಕಾಗಿಯೇ ಸಾವಿರಾರು ಸಣ್ಣ ಮತ್ತು ದೊಡ್ಡ ಟ್ರಾವೆಲ್ ಏಜೆನ್ಸಿಗಳು ತಲೆಎತ್ತಿದ್ದವು. ಟ್ರಾವೆಲ್ ಏಜೆನ್ಸಿಗಳು ಗ್ರಾಹಕರು ಮತ್ತು ಚಾಲಕರ ನಡುವೆ ಸಂಪರ್ಕ ಕಲ್ಪಿಸುವ ಕಾರ್ಯದಲ್ಲಿ ತೊಡಗಿದ್ದವು. ಈ ಸೇವೆಗಾಗಿ ಏಜೆಂಟರು ಚಾಲಕರಿಂದ ಶೇ. 5 ರಿಂದ 10 ರಷ್ಟು ಕಮೀಷನ್ ಹಣ ಪಡೆಯುತ್ತಿದ್ದರು. ಇಂತಹ ದೊಡ್ಡ ಸಾರಿಗೆ ಸೇವಾ ವಲಯವನ್ನು ವಿದೇಶಿ ಬಂಡವಾಳಿಗರ ಕಂಪನಿಗಳು ಏಕಸ್ವಾಮ್ಯ ಮಾಡಿಕೊಂಡಿವೆ.

ಓಲಾ ಆಟೋ ಸೇವೆ:

ಟ್ಯಾಕ್ಸಿ ಗ್ರಾಹಕರು ಮತ್ತು ಚಾಲಕರ ನಡುವೆ ಸಂಪರ್ಕ ಸೇತುವಾಗಿ ಕೆಲಸಮಾಡುವ ಓಲಾ ಕಂಪನಿ, ಬೆಂಗಳೂರು ನಗರದಲ್ಲಿ ಆಟೋರಿಕ್ಷಾ ವಲಯಕ್ಕೂ ಕೈಚಾಚಿದೆ. ಆದರೆ, ತನ್ನ ಸೇವೆಗೆ ಗ್ರಾಹಕರಿಂದಾಗಲೀ, ಆಟೋ ಚಾಲಕರಿಂದಾಗಲೀ ಯಾವುದೇ ರೀತಿಯ ಕಮೀಷನ್ ಪಡೆಯುತ್ತಿಲ್ಲ! ತನ್ನ ವ್ಯವಹಾರದ ಪಾಲುದಾರರಾಗ ಬಯಸುವ ಆಟೋಚಾಲಕರಿಗೆ ಉಚಿತವಾಗಿ ಆಪ್ ಆಧಾರಿತ ಮೊಬೈಲ್ ಕೊಡುತ್ತದೆ. ಪ್ರಯಾಣಿಕರು ಮೀಟರ್ ದರದ ಒಟ್ಟು ಮೊತ್ತಕ್ಕೆ ಹತ್ತು ರೂ. ಹೆಚ್ಚು ಕೊಡಬೇಕಷ್ಟೆ.

ಇಷ್ಟಕ್ಕೂ ಯಾವುದೇ ಲಾಭವಿಲ್ಲದೇ ಆಟೋ ಸೇವೆ ಮಾಡುವುದಾದರೂ ಏಕೆ ಎಂಬ ಪ್ರಶ್ನೆ ಮೂಡುವುದು ಸಹಜ. ಆಟೋ ಗ್ರಾಹಕರನ್ನು ಟ್ಯಾಕ್ಸಿಗೆ ಸೆಳೆಯುವ ತಂತ್ರ ಇಲ್ಲಿ ಅಡಗಿದೆ. ಆಪ್ ಅಳವಡಿಸಿ ಕೊಳ್ಳಬಹುದಾದ ಮೊಬೈಲ್ ಹೊಂದಿರುವ ಆಟೋ ಪ್ರಯಾಣಿಕರು ಆಪ್ ಮೂಲಕ ಆಟೋಗೆ ಬೇಡಿಕೆ ಇಡುತ್ತಾರೆ ಎಂದಿಟ್ಟುಕೊಳ್ಳಿ, ಅಲ್ಲಿ ಆಟೋ ಅಥವಾ ಟ್ಯಾಕ್ಸಿ ಯಾವುದಾದರೂ ಒಂದನ್ನು ಆರಿಸಿಕೊಳ್ಳಬೇಕು. ಟ್ಯಾಕ್ಸಿ ಮತ್ತು ಆಟೋ ಪ್ರಯಾಣ ದರ ಎಷ್ಟೆಂಬ ಮಾಹಿತಿಯೂ ಗ್ರಾಹಕರಿಗೆ ತಿಳಿಸುವ ವ್ಯವಸ್ಥೆ ಇರುತ್ತದೆ. ಮತ್ತು ಟ್ಯಾಕ್ಸಿ ಗ್ರಾಹಕರಿಗೆ ತಾನು ನೀಡುವ ರಿಯಾಯಿತಿ ಬಗ್ಗೆ ಓಲಾ ತನ್ನ ಎಲ್ಲಾ ಗ್ರಾಹಕರಿಗೆ ಸಂದೇಶ ಕಳಿಸುವ ಮೂಲಕ ಗ್ರಾಹಕರನ್ನು ತನ್ನೆಡೆಗೆ ಸೆಳೆಯುವ ಪ್ರಯತ್ನ ಮಾಡುತ್ತಲೇ ಇರುತ್ತದೆ. ಆಟೋ ಪ್ರಯಾಣಿಕರು ಕ್ರಮೇಣ ಟ್ಯಾಕ್ಸಿ ಗ್ರಾಹಕರಾಗಿ ಪರಿವರ್ತಿತರಾಗ ತೊಡಗುತ್ತಾರೆ. ಇದು ತಿಳಿದೋ ತಿಳಿಯದೆಯೋ, ಗ್ರಾಹಕ ಕೊಡುವ ಹೆಚ್ಚುವರಿ ಹತ್ತು ರೂಪಾಯಿಗಾಗಿಯೋ, ಆ ಸಮಯಕ್ಕೆ ಪ್ರಯಾಣಿಕರು ದೊರಕಿದ ಖುಷಿಗಾಗಿಯೊ ಆಟೋಚಾಲಕರು ತಮ್ಮ ಗ್ರಾಹಕರನ್ನು ನಿರಂತರವಾಗಿ ಕಳೆದುಕೊಳ್ಳ ತೊಡಗಿದ್ದಾರೆ.

ಓಲಾ–ಉಬೇರ್ ಕಪಿಮುಷ್ಟಿಯಲ್ಲಿ ಟ್ಯಾಕ್ಸಿ ಸೇವೆ

ಇಂದು ದೇಶದ 85 ನಗರಗಳಲ್ಲಿ ಟ್ಯಾಕ್ಸಿ ಸೇವಾವಲಯದಲ್ಲಿ ವಿದೇಶಿ ಹಣಕಾಸು ಸಂಸ್ಥೆಗಳು ಬಂಡವಾಳ ಹೂಡಿಕೆ ಮಾಡಿವೆ. ಓಲಾ ಕಂಪನಿಯ ದಿನವೊಂದರ ಗ್ರಾಹಕರ ಸಂಖ್ಯೆ 1.5 ಲಕ್ಷ ದಾಟಿದೆ. ಮಾರುಕಟ್ಟೆಯ ಶೇ.60 ರಷ್ಟು ಪಾಲನ್ನು ವಶಪಡಿಸಿಕೊಂಡಿದೆ. ತಿಂಗಳಿಗೆ 150 ಕೋಟಿ ರೂ ವ್ಯವಹಾರ ನಡೆಸುತ್ತಿದೆ. ಇದರ ವಾರ್ಷಿಕ ಆದಾಯವೇ 300 ರಿಂದ 350 ಕೋಟಿ ರೂಗಳು. ವಿದೇಶಿ ಕಂಪನಿಗಳು ಇಡೀ ವಲಯವನ್ನು ತಮ್ಮ ಹಿಡಿತಕ್ಕೆ ಪಡೆಯುವ ಪ್ರಯತ್ನದಲ್ಲಿ ಹಲವಾರು ಪ್ರಚಾರ ತಂತ್ರಗಳನ್ನು ಮಾಡಿದವು. ಚಾಲಕರಿಗೆ ಹೆಚ್ಚಿನ ಪ್ರೋತ್ಸಾಹಧನದ ಆಮಿಷವೊಡ್ಡುವ ಮೂಲಕ ಎಲ್ಲರನ್ನು ತಮ್ಮತ್ತ ಸೆಳೆದುಕೊಳ್ಳುವುದು. ಜಾಹಿರಾತುಗಳ ಮೂಲಕ ಕಡಿಮೆ ದರದಲ್ಲಿ ಸೇವೆ ನೀಡುವುದಾಗಿ ಹೇಳಿ ಗ್ರಾಹಕರನ್ನು ತಮ್ಮತ್ತ ಸೆಳೆಯುವುದು. ಆ ಮೂಲಕ ನಗರಗಳ ಇನ್ನಿತರೆ ಸಣ್ಣ ಪುಟ್ಟ ಟ್ರಾವೆಲ್ ಏಜನ್ಸಿಗಳು ಬಾಗಿಲು ಮುಚ್ಚುವಂತೆ ಮಾಡುವುದು. ಈ ಯತ್ನದಲ್ಲಿ ಅವು ಶೇ.95 ರಷ್ಟು ಯಶಸ್ಸು ಪಡೆದಿವೆ. ಈ ಕಂಪನಿಗಳು ಸೇವೆ ಪ್ರಾರಂಭಿಸಿದ ನಗರಗಳಲ್ಲಿ ಸಣ್ಣ ಪುಟ್ಟ ಟ್ಯಾಕ್ಸಿ ಏಜೆನ್ಸಿಗಳಿಂದ ಟ್ಯಾಕ್ಸಿ ಚಾಲಕರು ಹೊರಬಂದಿದ್ದಾರೆ. ದುಬಾರಿ ಬಾಡಿಗೆ ಎಂದು ದೂರುತ್ತಾ ಗ್ರಾಹಕರೂ ಅದರಿಂದ ದೂರವಾದರು. ಇತ್ತ, ಸ್ವಂತ ಟ್ಯಾಕ್ಸಿ ಹೊಂದಿರುವ ಚಾಲಕರು ತಮ್ಮ ಎಂದಿನ ಗ್ರಾಹಕರನ್ನು ಕಳೆದುಕೊಂಡಿದ್ದಾರೆ. ಈಗ ಈ ವಿದೇಶಿ ಬಂಡವಾಳದ ಕಂಪನಿಗಳು ಎಷ್ಟೇ ದರ ನಿಗದಿಪಡಿಸಿದರೂ ಗ್ರಾಹಕರ ಸೇವೆ ಮಾಡುವ ಅನಿವಾರ್ಯತೆಗೆ ಚಾಲಕರು ಒಳಗಾಗಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸಂಕಷ್ಟಗಳಿಗೆ ಸಿಲುಕುವ ಅಪಾಯ ಬರಲಿದೆ.

ಕಾರ್ಪೊರೇಟ್ ವ್ಯವಸ್ಥೆಯಲ್ಲಿ ಮೊದಮೊದಲಿಗೆ ಎಲ್ಲ ಕಂಪೆನಿಗಳೂ ಸುಶೀಲ, ಸುವ್ಯವಸ್ಥಿತ ನಡವಳಿಕೆಗಳನ್ನೇ ತೋರಿಸಿಗಿರಾಕಿಗಳನ್ನು ಸೆಳೆಯುತ್ತವೆ. ಅವುಗಳ ಕರಾಳ ಮುಖಗಳು ಬಯಲಿಗೆ ಬರುವಷ್ಟರಲ್ಲಿ ನಮಗೆ ಬೇರೆ ದಾರಿಗಳೇ ಉಳಿದಿರುವುದಿಲ್ಲ.

ಈ ವಿದೇಶಿ ಬಂಡವಾಳದ ಕಂಪನಿಗಳು ಭಾರತದ ನಗರಗಳಲ್ಲಿನ ಟ್ಯಾಕ್ಸಿಸೇವಾ ವಲಯವನ್ನು ಬಹುತೇಕ ತನ್ನ ಹಿಡಿತಕ್ಕೆ ಪಡೆದುಕೊಂಡಿವೆ. ಸಣ್ಣ ಪುಟ್ಟ ಟ್ರಾವೆಲ್‌ಗಳು ಮುಚ್ಚಿಹೋಗಿವೆ. ಸ್ವಂತ ಟ್ಯಾಕ್ಸಿ ಹೊಂದಿದ ಬಹಳಷ್ಟು ಚಾಲಕರು ತನ್ನ ಎಂದಿನ ಗ್ರಾಹಕರನ್ನು ಕಳೆದುಕೊಂಡಿದ್ದಾರೆ. ಅವರೆಲ್ಲರೂ ರಿಯಾಯ್ತಿ ದರದ ವಿದೇಶಿ ಕಂಪನಿಗಳ ಗ್ರಾಹಕರಾಗಿ ಪರಿವರ್ತಿತರಾಗಿದ್ದಾರೆ. ಇಂದು ಚಾಲಕನೊಬ್ಬ ತಾನು ಕಾರು ಕೊಳ್ಳಲು ಮಾಡಿದ ಸಾಲ ತೀರಿಸಲು, ಬಡ್ಡಿ ಕಟ್ಟಲು, ಕಾರಿನ ಖರ್ಚುವೆಚ್ಚಕ್ಕಾಗಿ, ತನ್ನ ಕುಟುಂಬದ ಜೀವನ ವೆಚ್ಚ ಬರಿಸಲು ಸಮಯದ ಮಿತಿಯಿಲ್ಲದೆ ದುಡಿಯಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾನೆ. ಸಾಲದ ಸುಳಿಯಿಂದ ಹೊರಬರಲಾರದಂತ ಸ್ಥಿತಿಗೆ ತಲುಪಿದ್ದಾನೆ. ಈ ಕಂಪನಿಗಳು ಕೊಡುವ 'ಭಕ್ಷೀಸು' ಎಲ್ಲಾ ಕಾಲಕ್ಕೂ ಒಂದೇ ರೀತಿ ಇರುವುದಿಲ್ಲ. ಕ್ರಮೇಣ ಇಂತಹ ಆಮಿಷಗಳೆಲ್ಲವನ್ನೂ ಸ್ಥಗಿತಗೊಳಿಸಿವೆ. ಆ ಕಂಪನಿಗಳು ನಿಗದಿಪಡಿಸಿದ ದರದಲ್ಲೇ ಮತ್ತು ಅವರು ಕೇಳುವ ಕಮೀಷನ್ ಕೊಟ್ಟೇ ಟ್ಯಾಕ್ಸಿ ಓಡಿಸಲೇಬೇಕಾಗಿದೆ. ಅವು ನಿಗದಿಪಡಿಸಿದ ದರ ಕೊಟ್ಟೇ ಗ್ರಾಹಕರು ಪ್ರಯಾಣ ಮಾಡಬೇಕಾಗಿದೆ. ಇಂದು ಗ್ರಾಹಕರಿಗಾಗಲೀ, ಚಾಲಕ/ಮಾಲೀಕರಿಗಾಗಲೀ ಬೇರೆ ಆಯ್ಕೆಗಳೇ ಇಲ್ಲದಂತಾಗಿದೆ.

ಈ ಪರಿಸ್ಥಿತಿಯಿಂದ ಹೊರಬರಲು ಆಪ್ ಆಧಾರಿತ ಟ್ಯಾಕ್ಸಿ ಸೇವೆಯ – ವಿಧಿಸಬಹುದಾದ ದರ, ಗ್ರಾಹಕ ಸೇವೆ, ಗ್ರಾಹಕ ಭದ್ರತೆ, ಚಾಲಕರ ಜತೆ ಒಪ್ಪಂದಗಳ – ಬಗ್ಗೆ ಬಾಧ್ಯತೆ ಸ್ಪಷ್ಟ ಪಡಿಸುವ ಪ್ರತ್ಯೇಕ ಕಾನೂನು ಅಗತ್ಯ. ಇದಕ್ಕಾಗಿ ಗ್ರಾಹಕರು, ಟ್ಯಾಕ್ಸಿ ಚಾಲಕರು/ಮಾಲಕರು ಜಂಟಿಯಾಗಿ ಹೋರಾಟ ನಡೆಸಬೇಕಾಗಿದೆ.

ನಾಲ್ಕು ಕಂಪನಿಗಳ ಏಕಸ್ವಾಮ್ಯ


ಭಾರತದ ಟ್ಯಾಕ್ಸಿ ಸೇವೆಯ ಒಟ್ಟು ಮಾರುಕಟ್ಟೆಯ ಮುಕ್ಕಾಲು ಭಾಗವನ್ನು ಕೇವಲ ನಾಲ್ಕು ಕಂಪನಿಗಳು – ಓಲಾ, ಉಬರ್, ಮೇರು ಕ್ಯಾಬ್ಸ್, ಈಸಿ ಕ್ಯಾಬ್ಸ್ – ಆಕ್ರಮಿಸಿಕೊಂಡಿವೆ. ಡಿಸೆಂಬರ್ 2015 ಹೊತ್ತಿಗೆ ಉಬರ್ 2.5 ಲಕ್ಷ ಚಾಲಕರನ್ನು ರಿಜಿಸ್ಟರ್ ಮಾಡಿಕೊಂಡು, ಮಾರ್ಚ್ 2016 ಹೊತ್ತಿಗೆ ದಿವಸಕ್ಕೆ 10 ಲಕ್ಷ ಟ್ರಿಪ್ ಗಳನ್ನು ನಡೆಸುವ ಸ್ಕೆಚ್ ಹಾಕಿದೆ. ಓಲಾ 2.5 ಲಕ್ಷ ಟ್ಯಾಕ್ಸಿಗಳನ್ನು ರಿಜಿಸ್ಟರ್ ಮಾಡಿಕೊಂಡು ದಿವಸಕ್ಕೆ 10 ಲಕ್ಷ ಟ್ರಿಪ್ ಗಳನ್ನು ಈಗಾಗಲೇ ನಡೆಸುತ್ತಿದೆ.

'ಉಬರ್ ಸೇವೆಯ ಏಳು ಕುಕೃತ್ಯಗಳು'

(2014 ಡಿಸೆಂಬರ್ ತಿಂಗಳಲ್ಲಿ 'ಅಲ್ಟರ್ನೆಟ್' ಎಂಬ ಅಮೇರಿಕನ್ ಜಾಲಪತ್ರಿಕೆಯಲ್ಲಿ)

1) ಹಬ್ಬದ ದಿನಗಳಲ್ಲಿ ಅದು ಬಾಡಿಗೆ ದರವನ್ನು ಸಿಕ್ಕಾಪಟ್ಟೆ ಹೆಚ್ಚಿಸುತ್ತದೆ. ಚಂಡಮಾರುತದಂಥ ಸಂಕಟ ಸಮಯದಲ್ಲಿ ಅದರ ಸುಲಿಗೆ ತಾರಕಕ್ಕೇರುತ್ತದೆ.
2) ತನಗೆ ಟ್ಯಾಕ್ಸಿ ಬೇಕೆಂದು ಸುಳ್ಳು ಸುಳ್ಳೇ ಪ್ರತಿಸ್ಪರ್ಧಿ ಟ್ಯಾಕ್ಸಿ ಕಂಪನಿಗಳಿಗೆ ಸಂದೇಶ ಕಳಿಸಿ ಆಮೇಲೆ ಕರೆಯನ್ನು ಕ್ಯಾನ್ಸಲ್ ಮಾಡಿ ಭಾರೀ ನಷ್ಟ ಉಂಟು ಮಾಡುತ್ತಿದೆ.
3) ಪ್ರತಿಸ್ಪರ್ಧಿ ಕಂಪನಿಗಳ ಮೇಲೆ ಯಾರೂ ಹಣ ಹೂಡದಂತೆ ಕುತಂತ್ರ ಮಾಡುತ್ತದೆ.
4) ತನ್ನ ಚಾಲಕಿಯರು ಎಷ್ಟು ಸೆಕ್ಸಿ ಆಗಿದ್ದಾರೆಂದು ಫ್ರಾನ್ಸ್ ದೇಶದಲ್ಲಿ ಪ್ರಚುರಪಡಿಸುತ್ತಿದೆ. ಅದನ್ನು ಬಯಲಿಗೆಳೆದು ಛೀಮಾರಿ ಹಾಕಿದ ಪತ್ರಕರ್ತೆಗೆ 'ನಿಮ್ಮದೆಲ್ಲವನ್ನೂ ಬಯಲಿಗೆಳೆಯುತ್ತೀವೆ' ಎಂದು ಹೆದರಿಸುತ್ತದೆ.
5) ತನ್ನ ಚಾಲಕ ಏನೇ ಮಾಡಿದರೂ ಅದು ತನ್ನ ತಪ್ಪಲ್ಲವೆಂದು ನುಣುಚಿಕೊಳ್ಳುತ್ತದೆ.
6) ಪ್ರಯಾಣಿಕರ ಸುರಕ್ಷೆಯ ತನ್ನೆಲ್ಲ ಹೊಣೆಯಿಂದ ನುಣುಚಿಕೊಳ್ಳುತ್ತದೆ.
7) ಅಂಗವಿಕಲರಿಗೆ ಪ್ರಯಾಣದ ಅವಕಾಶವನ್ನು ನಿರಾಕರಿಸುವ ಚಾಲಕರ ತಪ್ಪನ್ನು ನೋಡಿಯೂ ನೋಡದಂತಿರುತ್ತದೆ.

ಈ ಮೇಲಿನ ಆರೋಪಗಳಿಗೂ ಸೂಕ್ತ ಸಾಕ್ಷ್ಯಗಳನ್ನು ನೀಡಿದ ಲೇಖಕ ಕ್ಲಿಫ್ ವೀದರ್ಸ್‌ಗೆ ದಿಲ್ಲಿಯಲ್ಲಿ ನಡೆದ ಘಟನೆಯ ಅರಿವೂ ಇದ್ದಂತಿಲ್ಲ



ಕ್ಯಾಸ್ಟ್ರೋ ಕಥೆ 7

ಯೂನಿವರ್ಸಿಟಿಗೆ ಪ್ರವೇಶಿಸಿದಾಗಿನ ಫಿಡೆಲ್‌ಗೂ ಮತ್ತು ಹೊರಬಂದ ಫಿಡೆಲ್‌ಗೂ ಅಜಗಜಾಂತರ ಬದಲಾವಣೆಯಾಗಿತ್ತು. 'ಕ್ರಿಸ್ಟೋಫರ್ ಕೊಲಂಬಸ್‌ಗೆ ಕಾಂಪಾಸ್ ಇಲ್ಲದಿದ್ದಿದ್ದರೆ, ಆತ ಎಲ್ಲಿಗೂ ತಲುಪಲು ಆಗುತ್ತಿರಲಿಲ್ಲ. ಆದರೆ ಕಾಂಪಾಸ್ ಅಸ್ತಿತ್ವದಲ್ಲಿತ್ತು. ನನಗೂ ಕಾಂಪಾಸ್ ಇತ್ತು. ಅದನ್ನು ಮಾರ್ಕ್ಸ್ ಮತ್ತು ಲೆನಿನ್‌ರವರಲ್ಲಿ ಕಂಡೆ. ನೈತಿಕತೆಯನ್ನು ಮಾರ್ತಿಯಲ್ಲಿ ಕಂಡೆ. ಇತರೆ ಸಂಗತಿಗಳೂ ಪ್ರಭಾವ ಬೀರಿವೆ. ಸಂದರ್ಭಗಳು ವ್ಯಕ್ತಿಯೊಬ್ಬನ ಮೇಲೆ ತಮ್ಮ ಪ್ರಭಾವ ಹೊಂದಿರುತ್ತವೆ' ಎನ್ನುವ ಫಿಡೆಲ್‌ಗೆ ವೈಯುಕ್ತಿಕ ಬದುಕಿನ ಹಿನ್ನೆಲೆಯೂ ಪರಿಣಾಮ ಬೀರಿದೆ. ಹಳ್ಳಿಗಾಡಿನಲ್ಲಿ ಹುಟ್ಟಿದ ಕಾರಣದಿಂದ ಕಲಿತ ಸಂಗತಿಗಳು ಮತ್ತು ಒಬ್ಬ ಬೃಹತ್ ಜಮೀನ್ದಾರನ 'ಮೊಮ್ಮಗ'ನಾಗದೆ ಮಗನಾಗಿದ್ದರಿಂದ ಬಂದ ಅನುಕೂಲಗಳನ್ನು ಫಿಡೆಲ್ ಸ್ಮರಿಸುತ್ತಾರೆ.

ಮಾರ್ಕ್ಸ್ ಮತ್ತು ಲೆನಿನ್‌ರ ಕಾಂಪಾಸ್, ಜೋಸೆ ಮಾರ್ತಿಯ ನೈತಿಕತೆ

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಚೇಬಾಸ್‌ನ ರಾಜಕೀಯ ವಿಚಾರಗಳು ಫಿಡೆಲ್‌ರನ್ನು ಅವರತ್ತ ಆಕರ್ಷಿಸಿತು. ಈತ ಬಟಿಸ್ಟಾನ ಎಲ್ಲಾ ತಪ್ಪುಗಳನ್ನು, ದುಷ್ಕೃತ್ಯಗಳನ್ನು ಬಹಿರಂಗವಾಗಿ ವಿರೋಧಿಸುತ್ತಿದ್ದ. ಪ್ರತಿ ಭಾನುವಾರ ರೇಡಿಯೋದಲ್ಲಿ ಈತ ನೀಡುತ್ತಿದ್ದ ಭಾಷಣವು ಅತ್ಯಂತ ಜನಪ್ರಿಯವಾಗಿತ್ತು. ಇದರಿಂದ ಈತನ ಘನತೆ ಹೆಚ್ಚಾಗಿತ್ತು. ಸರ್ಕಾರದಲ್ಲಿರುವ ಭ್ರಷ್ಟಾಚಾರವನ್ನು ಹೋಗಲಾಡಿಸಲು, ಆಡಳಿತದಲ್ಲಿರುವ ಕಳ್ಳರನ್ನು ಹೊರಗಟ್ಟಲು ಚೇಬಾಸ್ ಆಡುತ್ತಿದ್ದ ಮಾತುಗಳು ಈತನ ಗೌರವವನ್ನು ಇಮ್ಮಡಿಗೊಳಿಸಿತ್ತು. ಫಿಡೆಲ್ ಕಾನೂನು ಅಭ್ಯಾಸ ಮಾಡುವಾಗ ಚೇಬಾಸ್‌ನ ಬೆಂಬಲಿಗರೊಂದಿಗೆ ಸಂಪರ್ಕಕ್ಕೆ ಬಂದರು. 30'ರ ದಶಕದಲ್ಲಿ ಮಚಾಡೋನ ವಿರುದ್ಧ ಹೋರಾಟ ಮಾಡಿದ ವಿದ್ಯಾರ್ಥಿಗಳಿಂದ ಅಥೆಂಟಿಕ್ ಕ್ಯೂಬನ್ ರೆವಲ್ಯೂಷನರಿ ಪಕ್ಷ ಹೊರಹೊಮ್ಮಿತು. ಚೇಬಾಸ್ ಇದರೊಂದಿಗೆ ಗುರುತಿಸಿಕೊಂಡಿದ್ದರು. 1944ರಲ್ಲಿ ಕಾರ್ಲೋಸ್ ಪ್ರಿಯೊ ಸೊಕಾರ್ರಸ್ ಅಧ್ಯಕ್ಷರಾಗಿ ಅಧಿಕಾರ ಹಿಡಿದ ಈ ಪಕ್ಷದ ನೀತಿಗಳೂ ದಾರಿ ತಪ್ಪುತ್ತಿವೆಯೆಂದು ಅನಿಸಿದಾಗ 1947ರಲ್ಲಿ ಚೇಬಾಸ್ ಆರ್ಥೊಡಕ್ಸ್ ಪಕ್ಷವನ್ನು ಸ್ಥಾಪಿಸಿದರು.

ರಾಜಕೀಯ ಪಕ್ಷಗಳು ಈ ರೀತಿ ಸ್ಥಾಪನೆಯಾಗುವುದರ ಕುರಿತು ಫಿಡೆಲ್ ಈ ರೀತಿ ಹೇಳುತ್ತಾರೆ; 'ರಾಜಕೀಯ ಪಕ್ಷಗಳು ಹೇಗೆ ಸ್ಥಾಪನೆಯಾದವು ಎಂಬುದು ಗೊತ್ತಿದೆಯೇ? ಕ್ರಾಂತಿಕಾರಿ ಕಾರ್ಮಿಕರ ಪಕ್ಷ ಹತ್ತು ಅಥವಾ ಹನ್ನೆರಡು ಜನರಿಂದ ಪ್ರಾರಂಭವಾಯಿತು. ಬೈಲೋರಷ್ಯಾದ ರಾಜಧಾನಿ ಮಿನ್ಸ್ಕ್‌ನಲ್ಲಿ ಲೆನಿನ್ ಪಕ್ಷವನ್ನು ಸ್ಥಾಪಿಸಿದಾಗ ಬಹುಶಃ ಹತ್ತು ಜನರಿದ್ದರು. ಇದು ಬೋಲ್ಶೆವಿಕ್ ಪಕ್ಷದ ಚರಿತ್ರೆಯಲ್ಲಿದೆ. ಮೊಂಕಾಡಾ ಬ್ಯಾರಕ್‌ಗಳ ಮೇಲಿನ ದಾಳಿಯನ್ನು ನಡೆಸಿದ ಚಳುವಳಿಯ ಮೂಲದಲ್ಲಿ ಕೇವಲ ಮೂರು ಅಥವಾ ನಾಲ್ಕು ಜನರಿದ್ದರು. ಪ್ರಾರಂಭದಿಂದಲೂ ನಾವು ನಾಯಕರ ಸಣ್ಣ ತಂಡಗಳನ್ನು, ಕೇವಲ ಮೂರು ಜನರ ಕಾರ್ಯಕಾರಿ ಸಮಿತಿಯನ್ನು ಮಾತ್ರ ಹೊಂದಿದ್ದೆವು. ಇದಕ್ಕೆ ಭಿನ್ನವಾಗಿ ಚೇಬಾಸ್ ಪಕ್ಷ ಪ್ರಾರಂಭಿಸಿದಾಗ ಕ್ಯೂಬನ್ ರೆವಲ್ಯೂಷನರಿ ಪಕ್ಷದ ದೊಡ್ಡ ಸಮೂಹ ಇವರೊಂದಿಗೆ ಬಂತು. ರಾಜಕೀಯ ಸಂಘಟನೆಗಳನ್ನು ಪ್ರಾರಂಭಿಸುವ ಎರಡು ರೀತಿಗಳನ್ನು ಇಲ್ಲಿ ಗಮನಿಸಬಹುದು. ರ್‍ಯಾಡಿಕಲ್ ಕ್ರಾಂತಿಕಾರಿ ಪಕ್ಷಗಳು ಹೆಚ್ಚಿನ ಸಂದರ್ಭಗಳಲ್ಲಿ ಗೋಪ್ಯವಾಗಿ, ಭೂಗತವಾಗಿ ಕೆಲವೇ ವ್ಯಕ್ತಿಗಳಿಂದ ಪ್ರಾರಂಭಗೊಂಡಿವೆ. ಸಾಮಾನ್ಯ ನಿಯಮವೆಂಬಂತೆ ಅವು ಹೆಚ್ಚು ಗಟ್ಟಿಯಾಗಿರುತ್ತವೆ ಮತ್ತು ದೀರ್ಘಕಾಲ ಬಾಳುತ್ತವೆ.'

ಬಟಿಸ್ಟಾ ಕ್ಷಿಪ್ರಕ್ರಾಂತಿ

ಚೇಬಾಸ್‌ನ ಪಕ್ಷ ಅಧಿಕಾರ ಹಿಡಿದಾಗ ಅವರು ಶಿಕ್ಷಣ ಮಂತ್ರಿಯಾಗಿದ್ದರು. ಆದರೆ ಆತನ ಮೇಲೆ ಬಂದ ಭ್ರಷ್ಟಾಚಾರದ ಆರೋಪದಿಂದ ತತ್ತರಿಸಿಹೋದರು. ಅದರಿಂದ ಹೊರಬರಲಾಗದೆ 1951ರಲ್ಲಿ ತಮ್ಮ ರೇಡಿಯೋ ಭಾಷಣ ಮುಗಿಸಿ ಗುಂಡಿಟ್ಟು ಆತ್ಮಹತ್ಯೆ ಮಾಡಿಕೊಂಡರು. 1952ರ ಜೂನ್‌ನಲ್ಲಿ ನಡೆಯಬೇಕಿದ್ದ ಚುನಾವಣೆಗಳಲ್ಲಿ ಆರ್ಥೋಡಕ್ಸ್ ಪಕ್ಷದ ಅಭ್ಯರ್ಥಿ ಗೆಲ್ಲಬಹುದಾದ ಸಾಧ್ಯತೆಯಿತ್ತು. ಮೂರು ತಿಂಗಳ ಮೊದಲೇ ಬಟಿಸ್ಟಾ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸಿ ಅಧ್ಯಕ್ಷನಾಗಿದ್ದ ಸೊಕಾರ್ರಿಸ್‌ನನ್ನು ಪದಚ್ಯುತಗೊಳಿಸಿದ. ಈ ಬಗ್ಗೆ ಫಿಡೆಲ್‌ಗೆ ಮೊದಲೇ ಅನುಮಾನ ಬಂದಿತ್ತು ಮತ್ತು ಅದನ್ನು ಆರ್ಥೋಡಕ್ಸ್ ಪಕ್ಷದ ನಾಯಕತ್ವಕ್ಕೆ ತಿಳಿಸಿದ್ದರು. ಆದರೆ ಇದನ್ನು ಸರಿಯಾಗಿ ನಿಗ್ರಹಿಸಲು ಪಕ್ಷ ಮುತುವರ್ಜಿ ವಹಿಸಲಿಲ್ಲ.

1952ರ ಮಾರ್ಚ್‌ನಲ್ಲಿ ಬಟಿಸ್ಟಾ ಕ್ಷಿಪ್ರಕ್ರಾಂತಿ ಮೂಲಕ ಅಧಿಕಾರ ಹಿಡಿದನು. ಅದೇ ವರ್ಷ ಜೂನ್‌ನಲ್ಲಿ ನಡೆದ ಚುನಾವಣೆಗಳಲ್ಲಿ, ಕ್ಷಿಪ್ರಕ್ರಾಂತಿಯಿಂದ ಅತೃಪ್ತಗೊಂಡಿದ್ದ ಫಿಡೆಲ್ ಕಾಂಗ್ರೆಸ್‌ನ ಪ್ರತಿನಿಧಿ ಸ್ಥಾನಕ್ಕೆ ಸ್ವತಂತ್ರವಾಗಿ ಸ್ಪರ್ಧಿಸಿದ್ದರು. ಆಗ ಫಿಡೆಲ್‌ಗೆ 24 ವರ್ಷ. ಆರ್ಥೋಡಕ್ಸ್ ಪಕ್ಷದಲ್ಲಿ ಸಂಪರ್ಕಗಳಿದ್ದರೂ ನಂತರ ಹಲವು ವಿಚಾರಗಳಲ್ಲಿ ಅದರೊಂದಿಗೆ ಹೊಂದಾಣಿಕೆ ಬರಲಿಲ್ಲ. ಫಿಡೆಲ್ ಹೆಚ್ಚೆಚ್ಚು ಮಾರ್ಕ್ಸ್ ಮತ್ತು ಲೆನಿನ್‌ರ ಪುಸ್ತಕಗಳನ್ನು ಓದುತ್ತಿದ್ದರು. ಕ್ರಾಂತಿಕಾರಿ ರಾಜಕೀಯದ ಜ್ಞಾನ ಹೆಚ್ಚು ಗಳಿಸಲು ಆರಂಭಿಸಿದರು. ಏಂಗೆಲ್ಸ್‌ರ ಅರ್ಥಶಾಸ್ತ್ರ ಮತ್ತು ತತ್ವಶಾಸ್ತ್ರವನ್ನು ಮತ್ತು ಮುಖ್ಯವಾಗಿ ಮಾರ್ಕ್ಸ್‌ರ ರಾಜಕೀಯ ಚಿಂತನೆಗಳು ಮತ್ತು ಸಿದ್ಧಾಂತಗಳನ್ನು ಅಭ್ಯಾಸ ಮಾಡಲು ಪ್ರಾರಂಭಿಸಿದರು.

ಮಾರ್ಕ್ಸ್‌ರ ಕಮ್ಯುನಿಸ್ಟ್ ಪ್ರಣಾಳಿಕೆಯ ಜೊತೆಗೆ, 'ಫ್ರಾನ್ಸ್‌ನಲ್ಲಿ ಸಿವಿಲ್ ಯುದ್ಧಗಳು', 'ಹದಿನೆಂಟನೇ ಬ್ರುಮೇರ್'3, 'ದಿ ಕ್ರಿಟಿಕ್ ಆಫ್ ದಿ ಗಯಟೆ ಪ್ರೋಗ್ರಾಂ' ಮುಂತಾದ ರಾಜಕೀಯ ಸ್ವರೂಪದ ಕೃತಿಗಳನ್ನು ಫಿಡೆಲ್ ಅಭ್ಯಾಸ ಮಾಡಿದರು. ಮಾರ್ಕ್ಸ್‌ರ ಸರಳತನ, ತ್ಯಾಗ ಮತ್ತು ತನ್ನ ಸಂಶೋಧನೆಯ ಕುರಿತು ಅವರಿಗಿದ್ದ ಗಾಂಭೀರ್ಯತೆ ಇವೆಲ್ಲವೂ ಫಿಡೆಲ್‌ರ ಮೇಲೆ ಪರಿಣಾಮ ಬೀರಿದವು. ಲೆನಿನ್‌ರ 'ಪ್ರಭುತ್ವ ಮತ್ತು ಕ್ರಾಂತಿ', 'ಸಾಮ್ರಾಜ್ಯವಾದ – ಬಂಡವಾಳಶಾಹಿಯ ಉನ್ನತ ಘಟ್ಟ' ಮತ್ತು ಅವರ ಅಸಂಖ್ಯಾತ ಲೇಖನಗಳನ್ನು ಓದಿದರು. ಏಂಗೆಲ್ಸ್‌ರು ಬರೆದ 'ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಚರಿತ್ರೆ'ಯಿಂದ ಪ್ರಭಾವಿತರಾದರು. 'ದಿ ಡಯಲೆಕ್ಟಿಕ್ಸ್ ಆಫ್ ನೇಚರ್'(The Dielectics of Nature)ನಲ್ಲಿ, ಒಂದು ದಿನ ಸೂರ್ಯ ನಶಿಸುತ್ತಾನೆ, ನಮಗೆ ಬೆಳಕನ್ನು ನೀಡುವ ಅದರ ಬೆಂಕಿಯನ್ನು ಉರಿಸುತ್ತಿರುವ ಇಂಧನ ಒಂದು ದಿನ ಖಾಲಿಯಾಗುತ್ತೆ, ಆಗ ಸೂರ್ಯನ ಬೆಳಕು ನಿಂತು ಹೋಗುತ್ತೆ' ಎಂದು ಏಂಗೆಲ್ಸ್ ಹೇಳಿದ್ದು ಫಿಡೆಲ್‌ಗೆ ಕುತೂಹಲಕಾರಿಯಾಗಿ ಕಂಡಿತು. ಸ್ಟೀಫನ್ ಹಾಕಿಂಗ್ಸ್‌ನ 'ಬ್ರೀಫ್ ಹಿಸ್ಟರಿ ಆಫ್ ಟೈಮ್' (Brief History of Time) ಅಥವಾ ಐನ್‌ಸ್ಟೀನ್‌ನ ಸಾಪೇಕ್ಷ ಸಿದ್ಧಾಂತ(Theory of Relativity)ವನ್ನು ಬಹುಶಃ ಓದದೆಯೇ ಏಂಗೆಲ್ಸ್ ಇದನ್ನು ಬರೆದಿದ್ದರು.

ಕ್ರಾಂತಿ ಮತ್ತು ಕ್ಷಿಪ್ರಕ್ರಾಂತಿ

ಮಾರ್ಚ್ 10, 1952ರಲ್ಲಿ ಕ್ಷಿಪ್ರಕ್ರಾಂತಿ ನಡೆದಾಗ ಸಾಕಷ್ಟು ಜನ ಲೆನಿನ್‌ರ 'ಮಾಡಬೇಕಾದುದು ಏನು?' (What is to be done?) ಲೇಖನವನ್ನು ಓದಲು ಆರಂಭಿಸಿದರು. ಆ ಸನ್ನಿವೇಶಕ್ಕೆ ಏನು ಪರಿಹಾರ ಸೂಚಿಸಲಾಗಿದೆ ಎಂದು ಹುಡುಕತೊಡಗಿದರು. ಮೊಂಕಾಡಾ ದಾಳಿಯ ನಂತರ ಒಮ್ಮೆ ಫಿಡೆಲ್ ಜೈಲಿನಲ್ಲಿದ್ದಾಗ ಕರ್ಸಿಯೊ ಮಲಪಾರ್ಟೆ ಅವರ 'ಕ್ಷಿಪ್ರಕ್ರಾಂತಿ: ಕ್ರಾಂತಿಯ ತಂತ್ರಗಳು' (Coup D'Etat : The Technique of Revolution) ಪುಸ್ತಕವನ್ನು ಕುತೂಹಲಕ್ಕಾಗಿ ಓದತೊಡಗಿದರು. ಮಲಪಾರ್ಟೆ ಪ್ರಕಾರ ಸಂಪರ್ಕಗಳು, ರೈಲ್ವೇ ಮತ್ತು ಇತರ ವ್ಯೂಹಾತ್ಮಕ ಸ್ಥಳಗಳನ್ನು ನಿಯಂತ್ರಿಸಲು ಸಾಧ್ಯವಾದರೆ ಪ್ರಭುತ್ವವನ್ನು ನಿಯಂತ್ರಿಸಬಹುದು ಎಂದಾಗಿತ್ತು. ಫಿಡೆಲ್ ಇದನ್ನು ಒಪ್ಪುವುದಿಲ್ಲ. '2002ರಲ್ಲಿ ವೆನಿಜುವೆಲಾದಲ್ಲಿ ನಡೆದದ್ದು ಬೇರೆಯೇ ಆಗಿದೆ. ಚಾವೇಜ್ ವಿರುದ್ಧ ನಡೆದ ಕ್ಷಿಪ್ರದಂಗೆಯಲ್ಲಿ ಸಾಮ್ರಾಜ್ಯವಾದದ ಸಿದ್ಧಾಂತಗಳಲ್ಲಿ ತರಬೇತಿ ಹೊಂದಿದ ದ್ರೋಹಿ ಮಿಲಿಟರಿ ಕಮಾಂಡರ್‌ಗಳು, ಮಾಲೀಕರ ಪರವಾದ ಕಾರ್ಮಿಕ ಸಂಘಗಳು, ದೊಡ್ಡ ಫ್ಯಾಕ್ಟರಿ ಮಾಲೀಕರು, ಟಿವಿ ಕೇಂದ್ರಗಳ ಮಾಲೀಕರು, ಮಾಧ್ಯಮಗಳ ಪ್ರಧಾನ ಗುಂಪುಗಳು, ಹಳೇ ಭ್ರಷ್ಟ ಪಕ್ಷಗಳು, ಎಲ್ಲ ರೀತಿಯ ಕಳ್ಳರು ಮತ್ತು ದರೋಡೆಕೋರರು, ಫ್ಯಾಸಿಸ್ಟ್ ಚಿಂತನೆಯ ಶಕ್ತಿಗಳು ಮತ್ತು ಅತ್ಯಂತ ಶಕ್ತಿಶಾಲಿ ಸಂಪನ್ಮೂಲಗಳು ಎಲ್ಲವೂ ಒಟ್ಟುಗೂಡಿದ್ದವು. ಪ್ರತಿಕ್ರಾಂತಿಕಾರಿ ದಂಗೆಯ ನಿಜವಾದ ತಂತ್ರ ಇದಾಗಿದೆ'.

ಯೂನಿವರ್ಸಿಟಿಯ ಮೊದಲ ವರ್ಷದಲ್ಲಿ ಮುಖ್ಯವಾಗಿ ಬಂಡವಾಳದಾರರು ಮತ್ತು ಶ್ರೀಮಂತರ ಮಕ್ಕಳಿಗೆಂದು ರೂಪಿಸಲಾಗಿದ್ದ 'ರಾಜಕೀಯ ಅರ್ಥಶಾಸ್ತ್ರ' ಭೋಧಿಸಲಾಗುತ್ತಿತ್ತು. ಫಿಡೆಲ್‌ಗೆ ಅದರಲ್ಲಿ ಆಸಕ್ತಿಯೇ ಬರಲಿಲ್ಲ. ಬದಲಿಗೆ ಅಲ್ಲಿಂದಲೇ ವ್ಯವಸ್ಥೆಯನ್ನು ಪ್ರಶ್ನಿಸಲು ಆರಂಭಿಸಿದರು. ಬಂಡವಾಳಶಾಹಿ ಆರ್ಥಿಕತೆಯು ಅಸಂಬದ್ಧವಾದುದೆಂದು ತೀರ್ಮಾನಕ್ಕೆ ಬಂದರು. ಮಾರ್ಕ್ಸ್‌ವಾದಿ ಅಥವಾ ಲೆನಿನ್‌ವಾದಿ ವಿಚಾರಗಳ ಸಂಪರ್ಕಕ್ಕೆ ಬರುವ ಮೊದಲು ಫಿಡೆಲ್ ಆದರ್ಶವಾದಿ ಕಮ್ಯುನಿಸ್ಟ್ (Utopian Communist) ಆಗಿದ್ದರು. ಫಿಡೆಲ್ ಇದನ್ನೇ ಹೀಗೇಳುತ್ತಾರೆ, 'ವಿಜ್ಞಾನ ಅಥವಾ ಇತಿಹಾಸದಲ್ಲಿ ಆಧಾರವನ್ನು ಯಾರು ಹೊಂದಿರುವುದಿಲ್ಲವೋ ಅವರು ಆದರ್ಶವಾದಿ ಕಮ್ಯುನಿಸ್ಟರು. ಪರಿಸ್ಥಿತಿಗಳು ತೀರಾ ಕೆಟ್ಟದಾಗಿವೆ ಎಂದು ಬಡತನ, ಅಸಮಾನತೆ, ಸಮಾಜ ಮತ್ತು ನಿಜವಾದ ಅಭಿವೃದ್ಧಿಯ ನಡುವೆ ಪರಿಹರಿಸಲಾಗದ ವೈರುಧ್ಯಗಳಿವೆಯೆಂದು ನೋಡುವವರು'. ಫಿಡೆಲ್ ಜೀವನದ ಅನುಭವಗಳು ಮತ್ತು ಮೊದಲೇ ಹೇಳಿದ ಹಾಗೆ ಮಾರ್ಕ್ಸ್ ಮತ್ತು ಇತರರ ವಿಚಾರಗಳಿಂದ ಗಟ್ಟಿಯಾಗುತ್ತಾ ಸಾಗಿದರು.


ದಾರಿತಪ್ಪಿದವನಿಗೆ ಸಿಕ್ಕಿದ ಕಾಂಪಾಸ್

ಫಿಡೆಲ್‌ಗೆ ಸಮಾಜ ಎಂದರೇನೆಂದು ಮಾರ್ಕ್ಸ್‌ವಾದ ಕಲಿಸಿತು. 'ಉತ್ತರವಾವುದು ದಕ್ಷಿಣವಾವುದು ಎಂದು ತಿಳಿಯದೆ ಕಾಡಿನೊಳಗೆ ದಾರಿತಪ್ಪಿದ ಕುರುಡನ ಹಾಗಿದ್ದೆ. ನೀವು ಅಂತಿಮವಾಗಿ ವರ್ಗಹೋರಾಟದ ಇತಿಹಾಸವನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳದಿದ್ದರೆ ಅಥವಾ ಕನಿಷ್ಟ ಶ್ರೀಮಂತರ ಮತ್ತು ಬಡವರ ನಡುವೆ ಸಮಾಜ ವಿಭಜನೆಯಾಗಿದೆ ಎಂದು ಮತ್ತು ಕೆಲವು ಜನರು ಇತರರನ್ನು ಅಧೀನದಲ್ಲಿಟ್ಟುಕೊಂಡಿದ್ದಾರೆ ಮತ್ತು ಶೋಷಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ಕಲ್ಪಿಸಿಕೊಳ್ಳದಿದ್ದರೆ, ಏನೂ ಅರ್ಥವಾಗದೆ ನೀವು ಕಾಡಲ್ಲಿ ಕಳೆದುಹೋಗುತ್ತೀರಿ' ಎನ್ನುತ್ತಾರೆ ಫಿಡೆಲ್. ಯೂನಿವರ್ಸಿಟಿಗೆ ಪ್ರವೇಶಿಸಿದಾಗಿನ ಫಿಡೆಲ್‌ಗೂ ಮತ್ತು ಹೊರಬಂದ ಫಿಡೆಲ್‌ಗೂ ಅಜಗಜಾಂತರ ಬದಲಾವಣೆಯಾಗಿತ್ತು. ಜೋಸೆ ಮಾರ್ತಿಯ ಚಿಂತನೆಗಳಿಂದ ನೈತಿಕ ಮೌಲ್ಯಗಳನ್ನು ಪಡೆದ–ರೆ ಮಾರ್ಕ್ಸ್‌ನಿಂದ ಸಮಾಜದ ಬೆಳವಣಿಗೆಯ ಬಗ್ಗೆ, ಸಾಮಾಜಿಕ ಸಂಬಂಧಗಳ ಬಗ್ಗೆ ತಿಳುವಳಿಕೆ ಪಡೆದರು.

'ಕ್ರಿಸ್ಟೋಫರ್ ಕೊಲಂಬಸ್‌ಗೆ ಕಾಂಪಾಸ್ ಇಲ್ಲದಿದ್ದಿದ್ದರೆ, ಆತ ಎಲ್ಲಿಗೂ ತಲುಪಲು ಆಗುತ್ತಿರಲಿಲ್ಲ. ಆದರೆ ಕಾಂಪಾಸ್ ಅಸ್ಥಿತ್ವದಲ್ಲಿತ್ತು. ನನಗೂ ಕಾಂಪಾಸ್ ಇತ್ತು. ಅದನ್ನು ಮಾರ್ಕ್ಸ್ ಮತ್ತು ಲೆನಿನ್‌ರವರಲ್ಲಿ ಕಂಡೆ. ನೈತಿಕತೆಯನ್ನು ಮಾರ್ತಿಯಲ್ಲಿ ಕಂಡೆ. ಇತರೆ ಸಂಗತಿಗಳೂ ಪ್ರಭಾವ ಬೀರಿವೆ. ಸಂದರ್ಭಗಳು ವ್ಯಕ್ತಿಯೊಬ್ಬನ ಮೇಲೆ ತಮ್ಮ ಪ್ರಭಾವ ಹೊಂದಿರುತ್ತವೆ' ಎನ್ನುವ ಫಿಡೆಲ್‌ಗೆ ವೈಯುಕ್ತಿಕ ಬದುಕಿನ ಹಿನ್ನೆಲೆಯೂ ಪರಿಣಾಮ ಬೀರಿದೆ. ಹಳ್ಳಿಗಾಡಿನಲ್ಲಿ ಹುಟ್ಟಿದ ಕಾರಣದಿಂದ ಕಲಿತ ಸಂಗತಿಗಳು ಮತ್ತು ಒಬ್ಬ ಬೃಹತ್ ಜಮೀನ್ದಾರನ 'ಮೊಮ್ಮಗ'ನಾಗದೆ ಮಗನಾಗಿದ್ದರಿಂದ ಬಂದ ಅನುಕೂಲಗಳನ್ನು ಫಿಡೆಲ್ ಸ್ಮರಿಸುತ್ತಾರೆ. ಲ್ಯಾಟಿಫಂಡಿಯೋಗಳಲ್ಲಿ ಜೀವನ ಹೇಗಿರುತ್ತದೆಂಬ ಅರಿವು ಸಾಕಷ್ಟಿತ್ತು. ಹಾಗೆ ನೋಡಿದರೆ ಇವರ ತಂದೆಯ ಜಮೀನ್ದಾರಿಕೆ ಇದ್ದದ್ದರಲ್ಲಿಯೇ ಅತ್ಯಂತ ಮಾನವೀಯವಾದದ್ದಾಗಿತ್ತು. ಏಕೆ–ಂದರೆ ಇವರ ತಂದೆಗೆ ಜನರೊಂದಿಗೆ ನೇರವಾದ ಸಂಬಂಧವಿತ್ತು, ಒಡನಾಟವಿತ್ತು ಮತ್ತು ಅವರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಿದ್ದರು. ಉಳಿದಂತೆ ಬೈರನ್‌ನಲ್ಲಿದ್ದ ಲ್ಯಾಟಿಫಂಡಿಯೋಗಳ ಮಾಲಕರು ನ್ಯೂಯಾರ್ಕ್‌ನಲ್ಲಿರುತ್ತಿದ್ದ ಅಮೇರಿಕದ ಕಂಪನಿಗಳಾಗಿದ್ದವು. ಹೀಗಾಗಿ ಜನರೊಂದಿಗೆ ಬೆರೆಯುವ ಯಾವ ಸಂದರ್ಭಗಳೂ ಅವರಿಗೆ ಬರುತ್ತಿರಲಿಲ್ಲ. ಈ ರೀತಿಯಲ್ಲಿ ಒಟ್ಟಾರೆ ವಿಶ್ವವಿದ್ಯಾಲಯವು ಮತ್ತು ಅಲ್ಲಿ ಕಲಿತ ವಿಚಾರಗಳು ಮತ್ತು ನಿರ್ವಹಿಸಿದ ಪಾತ್ರಗಳು ಫಿಡೆಲ್‌ರ ಮುಂದಿನ ಜೀವನದ ದಾರಿಯನ್ನು ರೂಪಿಸಿತ್ತು.

1952ರಲ್ಲಿ ಬಟಿಸ್ಟಾನ ಕ್ಷಿಪ್ರದಂಗೆ ನಡೆದಾಗ ಫಿಡೆಲ್ ಮುಂದೆ ಮಾಡಬೇಕಾದ ಯೋಜನೆಯನ್ನು ರೂಪಿಸಿದ್ದರು. ಒಂದು ಕ್ರಾಂತಿಕಾರಿ ಕಾರ್ಯಕ್ರಮವನ್ನು ಮತ್ತು ಜನತೆಯ ದಂಗೆಯನ್ನು ಸಂಘಟಿಸಲು ತೀರ್ಮಾನಿಸಿದ್ದರು. ಅಧಿಕಾರವನ್ನು ಕ್ರಾಂತಿಕಾರಿ ವಿಧಾನಗಳಿಂದ ಪಡೆದುಕೊಳ್ಳುವ ಅನಿವಾರ್ಯತೆಯನ್ನು ಮನಗಂಡರು. ಈ ಬಗ್ಗೆ ಇವರು ಕಲ್ಪಿಸಿಕೊಂಡಿದ್ದ ಮೂಲವಿಚಾರಗಳನ್ನು 'ಇತಿಹಾಸವು ನನ್ನನ್ನು ದೋಷಮುಕ್ತಗೊಳಿಸುತ್ತದೆ' ಎಂಬ ಅವರ ಪ್ರಸಿದ್ಧ ಕೋರ್ಟ್ ಹೇಳಿಕೆಯಲ್ಲಿ ವಿವರಿಸಿದ್ದಾರೆ. ●





ಭಾರತದ ಪೇಟೆಂಟ್ ಅಧಿಕಾರಿಗಳಿಗೆ ಅಮೆರಿಕನ್ ಔಷಧಿ ಪೇಟೆಂಟ್ ವ್ಯವಸ್ಥೆಯ ತರಬೇತಿ –’ರಾಷ್ಟ್ರೀಯವಾದ’ದ ‘ಅಚ್ಛೇ ದಿನ್’ ಮಾದರಿ!

ಭಾರತ ಇನ್ನು ಮುಂದೆ ನಮ್ಮ ಪೇಟೆಂಟ್ ಕಾನೂನಿನ ‘ಕಡ್ಡಾಯ ಲೈಸೆನ್ಸಿಂಗ್’ ಅಂಶವನ್ನು ಬಳಸುವುದಿಲ್ಲ ಎಂದು ಅಮೆರಿಕಾ–ಭಾರತ ವ್ಯಾಪಾರ ಮಂಡಳಿ(ಯುಎಸ್‌ಐಬಿಸಿ)ಯ ಸದಸ್ಯರಿಗೆ ಖಾಸಗಿಯಾಗಿ ಭರವಸೆ ನೀಡಲಾಗಿದೆ ಎಂಬ ಸುದ್ದಿ ಇತ್ತೀಚೆಗೆ ಪ್ರಕಟವಾಗಿತ್ತು. ಇದು ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಔಷಧಿ ಕಂಪನಿಗಳು ರೋಗಿಗಳ ಬದುಕಿನೊಡನೆ ಆಟವಾಡಲು ಮತ್ತೆ ಅವಕಾಶ ಒದಗಿಸುವ ಭರವಸೆಯಲ್ಲದೆ ಬೇರೇನೂ ಅಲ್ಲ ಎಂಬ ಟೀಕೆ ಬಂದಿತ್ತು.

ಭಾರತ ಪೇಟೆಂಟ್ ವ್ಯವಸ್ಥೆಯಲ್ಲಿ ಅದರಲ್ಲೂ ಔಷಧಿಗಳ ಪೇಟೆಂಟ್ ವ್ಯವಸ್ಥೆಯಲ್ಲಿ ಮೂರನೇ ಜಗತ್ತಿನ ರಾಷ್ಟ್ರಗಳಲ್ಲೇ ಅತ್ಯುತ್ತಮ ಕಾನೂನನ್ನು ಹೊಂದಿದೆ. ಇದು ಭಾರತದಲ್ಲಿ ಮಾತ್ರವಲ್ಲ, ಬಹಳಷ್ಟು ಮೂರನೇ ಜಗತ್ತಿನ ದೇಶಗಳಲ್ಲಿ ಜೀವ–ಉಳಿಸುವ ಔಷಧಿಗಳನ್ನು ಜನಸಾಮಾನ್ಯರ ಕೈಗೆಟಕುವ ಬೆಲೆಗಳಲ್ಲಿ ಒದಗಿಸಲು ನೆರವಾಗಿದೆ. ಇದು ಸಾಧ್ಯವಾದದ್ದು ಈ ಕಾನೂನಿನ ‘ಕಡ್ಡಾಯ ಲೈಸೆನ್ಸಿಂಗ್’ ಅಂಶದಿಂದಾಗಿ– ಸಾರ್ವಜನಿಕ ಆರೋಗ್ಯದ ರಕ್ಷಣೆಗೆ ಕೆಲವು ಜೀವ ಉಳಿಸುವ ಔಷಧಿಗಳನ್ನು, ಅವುಗಳ ಮೇಲೆ ವಿದೇಶಿ ಔಷಧಿ ಕಂಪನಿಗಳ ಪೇಟೆಂಟ್ ಇದ್ದರೂ ದೇಶೀಯವಾಗಿ ಅವನ್ನು ಸಾರ್ವತ್ರಿಕ(ಜೆನೆರಿಕ್) ಔಷಧಿ ಎಂದು ಉತ್ಪಾದಿಸಲು ಲೈಸೆನ್ಸ್ ಕೊಡುವ ಅಂಶ. ಇದರಿಂದಾಗಿ ವಿದೇಶಿ ಕಂಪನಿಗಳು ಭಾರೀ ಬೆಲೆ ವಿಧಿಸುವ ಈ ಔಷಧಿಗಳನ್ನು ಭಾರತದಲ್ಲಿ ಕೈಗೆಟಕುವ ಬೆಲೆಗಳಲ್ಲಿ ತಯಾರಿಸಿ ಒದಗಿಸಲು ಇದುವರೆಗೆ ಸಾಧ್ಯವಾಗಿದೆ.

ಭಾರತ ಡಬ್ಲ್ಯುಟಿಒಗೆ ಸಹಿ ಹಾಕಿದಂದಿನಿಂದ ನಮ್ಮ ಪೇಟೆಂಟ್ ಕಾನೂನುಗಳನ್ನು, ಅದರಲ್ಲೂ ಕೆಲವು ಔಷಧಿಗಳಿಗೆ ಕಡ್ಡಾಯ ಲೈಸೆನ್ಸ್ ಕೊಡುವ ಈ ಅಂಶವನ್ನು ಸಡಿಲಗೊಳಿಸಬೇಕು ಎಂದು ಅಮೆರಿಕನ್ ಆಳರಸರು ಭಾರತ ಸರಕಾರದ ಮೇಲೆ ಒತ್ತಡ ಹಾಕುತ್ತಲೇ ಬಂದಿದ್ದಾರೆ. ಹಿಂದಿನ ಯುಪಿಎ ಸರಕಾರಗಳು ಇದಕ್ಕೆ ತಲೆಬಾಗುವ ಪ್ರವೃತ್ತಿ ತೋರಿದ್ದರೂ, ದೇಶದಲ್ಲಿನ ಸಾರ್ವಜನಿಕಾಭಿಪ್ರಾಯದಿಂದಾಗಿ ಅಮೆರಿಕನ್ನರಿಗೆ ಇದುವರೆಗೆ ಇದರಲ್ಲಿ ಯಶಸ್ಸು ಸಿಕ್ಕಿರಲಿಲ್ಲ. ಆದರೆ ಈಗ ‘ಅಚ್ಛೇ ದಿನ್’ ಸರಕಾರ ಕೊನೆಗೂ ಅದಕ್ಕೆ ಅವಕಾಶ ಮಾಡಿಕೊಡುತ್ತಿರುವಂತೆ ಕಾಣುತ್ತದೆ.

ಇದಕ್ಕಾಗಿ ಅಮೆರಿಕನ್ ಪೇಟೆಂಟ್ ಕಚೇರಿಯ ಅಧಿಕಾರಿಗಳಿಂದ ಭಾರತದ ಪೇಟೆಂಟ್ ಕಚೆರಿಯ ಅಧಿಕಾರಿಗಳಿಗೆ ‘ತರಬೇತಿ’ ಕೊಡಿಸಲಾಗುತ್ತಿದೆ ಎಂದು ‘ಮೆಡೆಸಿನ್ಸ್ ಸಾನ್ಸ್ ಬಾರ್ಡರ್ಸ್’(ಎಂಎಸ್‌ಎಫ್–ಗಡಿಗಳಿಲ್ಲದ ವೈದ್ಯರುಗಳು) ಎಂಬ ಮಾನವೀಯ ನೆರವಿನ ಅಂತರ್ರಾಷ್ಟ್ರೀಯ ಸಂಸ್ಥೆ ಹೇಳಿದೆ, ಏಕೆ ಇಂತಹ ತರಬೇತಿ ಕೊಡಿಸುತ್ತಿದ್ದೀರಿ ಎಂದು ಅದು ಭಾರತ ಸರಕಾರವನ್ನು ಪ್ರಶ್ನಿಸಿದೆ ಎಂದು ವರದಿಯಾಗಿದೆ(ದಿ ಹಿಂದು,ಮಾರ್ಚ್30).

ಭಾರತ ಸರಕಾರದಿಂದ ‘ಖಾಸಗಿಯಾಗಿ ಭರವಸೆ’ ಪಡೆದ ‘ಅಮೆರಿಕಾ–ಭಾರತ ವ್ಯಾಪಾರಿಗಳ ಮಂಡಳಿ’ ಈ ‘ತರಬೇತಿ’ಯನ್ನು ವ್ಯವಸ್ಥೆಗೊಳಿಸಿದೆಯಂತೆ! ಈ ಮಂಡಳಿಗೆ ಬಹುರಾಷ್ಟ್ರೀಯ ಔಷಧಿ ಕಂಪನಿಗಳಿಂದ ನೆರವು ನಿಧಿಗಳು ಬರುತ್ತಿವೆ, ಇಂತಹ ತರಬೇತಿ ಭಾರತದ ಪೇಟೆಂಟ್ ಪರೀಕ್ಷಕರನ್ನು ಈ ಬೃಹತ್ ವಿದೇಶಿ ಔಷಧಿ ಕಂಪನಿಗಳ ವ್ಯಾಖ್ಯಾನಗಳಿಗೆ ಒಳಪಡಿಸಬಹುದು ಎಂದು ಈ ಸಂಸ್ಥೆಯ ದಕ್ಷಿಣ ಏಶ್ಯಾ ಮುಖ್ಯಸ್ಥೆ ಲೀನಾ ಮೆಂಘಾನೆ ಭಯ ವ್ಯಕ್ತಪಡಿಸಿದ್ದಾರೆ. ಇದು ಒಳ್ಳೆಯ ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು ತಯಾರಿಸುತ್ತಿರುವ ಭಾರತದ ಮೇಲೆ ವಿಶೆಷವಾಗಿ ದಾಳಿ ಮಾಡುವ ಅಮೆರಿಕನ್ ಧೋರಣೆಗೆ ಅನುಗುಣವಾಗಿದ ಎಂದು ಅವರು ಎಚ್ಚರಿಸಿದ್ದಾರೆ.

ಕಳೆದ ಕೆಲವು ವಾರಗಳಿಂದ ದೇಶದ ಹಣಕಾಸು ಪ್ರಶ್ನೆಗಳಿಗಿಂತ ಹೆಚ್ಚಾಗಿ ಜೆಎನ್‌ಯು ಮತ್ತಿತರ ವಿವಿಗಳಲ್ಲಿ ‘ರಾಷ್ಟ್ರೀಯವಾದ’ದ ಬಗ್ಗೆಯೇ ಹೆಚ್ಚು ತಲೆಕೆಡಿಸಿಕೊಂಡಂತಿರುವ ನಮ್ಮ ಹಣಕಾಸು ಮಂತ್ರಿಗಳು ‘ರಾಷ್ಟ್ರೀಯವಾದ’ದ ಚರ್ಚೆಯಲ್ಲಿ ಬಿಜೆಪಿ ಮೊದಲ ಜಯ ಗಳಿಸಿದೆ ಎಂದಿದ್ದಾರೆ. ಆದರೆ ನಮ್ಮ ರಾಷ್ಟ್ರೀಯ ಪೇಟೆಂಟ್ ಕಾನೂನನ್ನು ವಿದೇಶೀಯರಿಗಾಗಿ ಸಡಿಲಗೊಳಿಸುವುದು, ಅದಕ್ಕಾಗಿ ಅದೇ ವಿದೇಶೀಯರಿಂದ ‘ತರಬೇತಿ’ ಕೊಡಿಸುವುದು ಎಂತಹ ರಾಷ್ಟ್ರೀಯವಾದ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಅಥವ ಇಂತಹ ರಾಷ್ಟ್ರ–ವಿರೋಧಿ ಕ್ರಮಗಳನ್ನು ಮರೆಮಾಚಲಿಕ್ಕಾಗಿಯೇ ಇಂತಹ ಹುಸಿ ಚರ್ಚೆಯನ್ನು ಹುಟ್ಟು ಹಾಕಲಾಗಿದೆಯೇ ಎಂಬ ಪ್ರಶ್ನೆಯೂ ಏಳುತ್ತದೆ.

67 ‘ಅತ್ಯುನ್ನತ’ ತೆರಿಗೆಗಳ್ಳರಲ್ಲಿ 24 ಗುಜರಾತಿನವರು: ನಿಜಕ್ಕೂ‘ಅಚ್ಛೇ ದಿನ್’ಗಳ ಮಾದರಿ ರಾಜ್ಯ

ಹಣಕಾಸು ಮಂತ್ರಿಗಳು ಇತ್ತೀಚೆಗೆ ಸಂಸತ್ತಿನಲ್ಲಿ ಅತಿ ಹೆಚ್ಚು ಆದಾಯ ತೆರಿಗೆ ತೆರದೆ ತಪ್ಪಿಸಿಕೊಂಡು ಬಾಕಿ ಇಟ್ಟುಕೊಂಡಿರುವ 67 ಹೆಸರುಗಳಿದ್ದ ಪಟ್ಟಿಯನ್ನು ಮಂಡಿಸಿದರು. ಈ 67ರಲ್ಲಿ 24 ವ್ಯಕ್ತಿಗಳು ಪ್ರಧಾನಿಗಳ ಮಾದರಿ ರಾಜ್ಯ ಗುಜರಾತಿನವರು ಎಂದು ಟೈಮ್ಸ್ ನ್ಯೂಸ್ ನೆಟ್‌ವರ್ಕ್(ಮಾರ್ಚ್ 31) ಹೇಳಿದೆ. ನಂತರದ ಸ್ಥಾನ ಮತ್ತೊಂದು ಶ್ರೀಮಂತ ರಾಜ್ಯವೆನಿಸಿದ ಮಹಾರಾಷ್ಟ್ರ ಮತ್ತು ತೆಲಂಗಾಣದ್ದು –ತಲಾ 15. ಇತರ ಎಲ್ಲ ರಾಜ್ಯಗಳ ತೆರಿಗೆ ಬಾಕಿದಾರರ ಒಟ್ಟು ಸಂಖ್ಯೆ 13.

ಈ 67 ಮಂದಿ 1980–81ರಿಂದ 2013–14 ರ ವರೆಗೆ ಒಟ್ಟು 3200 ಕೋಟಿ ರೂ.ಗಳಿಗೂ ಹೆಚ್ಚು ತೆರಿಗೆಗಳ್ಳತನ ಮಾಡಿದ್ದಾರೆ. ಗುಜರಾತಿನ ‘ಅತ್ಯುನ್ನತ’ 24 ತೆರಿಗೆಗಳ್ಳರ ಒಟ್ಟು ತೆರಿಗೆ ಬಾಕಿ 576.6 ಕೋಟಿ ರೂ.ಗಳು. ಮೊದಲ 20 ತೆರಿಗೆಗಳ್ಳರಲ್ಲಿ ಮಾತ್ರ ಗುಜರಾತಿನವರ ಪ್ರಮಾಣ ತುಸು ಕಡಿಮೆ–ಕೇವಲ 3. ಈ ಮೂವರ ಒಟ್ಟು ತೆರಿಗೆ ಬಾಕಿ ರೂ.136.38 ಕೋಟಿ. ಈ 24ರಲ್ಲಿ ಹೆಚ್ಚಿನವರು ಭಾರೀ ವ್ಯಾಪಾರೀ ಕುಳಗಳು.

ಹೆಚ್‌ಆರ್‌ಡಿ ಎಂದರೆ ಹಿಂದೂ ರಾಷ್ಟ್ರ ಅಭಿವೃದ್ಧಿ?–ಮುಂದುವರೆದ ವಿದ್ಯಾರ್ಥಿ ಪ್ರತಿರೋಧ

ಹೈದರಾಬಾದ್ ವಿಶ್ವದ್ಯಾಲಯದ ಉಪಕುಲಪತಿಗಳ ವಜಾಕ್ಕೆ ಚಳುವಳಿ ಮುಂದುವರೆಯುತ್ತಿದೆ. ಮಾರ್ಚ್ 22ರಂದು ವಿವಿಯ ಕ್ಯಾಂಪಸಿನಲ್ಲಿ ಪೊಲೀಸರು ಬಂಧಿಸಿದ್ದ 25ವಿದ್ಯಾರ್ಥಿಗಳಿಗೆ ಹಾಗೂ ಇಬ್ಬರು ಅಧ್ಯಾಪಕರಿಗೆ ಮಾರ್ಚ್28 ರಂದು ಜಾಮೀನು ಸಿಕ್ಕಿದೆ. ಆದರೂ ಅವರು ಜೈಲುಗಳಿಂದ ಹೊರಬರಲು ಮತ್ತೆ ಒಂದು ದಿನ ಕಾಯಬೇಕಾಯಿತು. ಈ ವಿದ್ಯಾರ್ಥಿಗಳನ್ನು ಬಂಧಿಸಿದ ನಂತರ ಅವರನ್ನು ಪೊಲೀಸ್ ವ್ಯಾನುಗಳಲ್ಲಿ ಹಲವು ಜೈಲುಗಳಿಗೆ ಸುತ್ತಾಡಿಸಲಾಯಿತು, ಈ ನಡುವೆಯೂ, ಅವರನ್ನು ಕೊನೆಗೂ ಒಂದು ಜೈಲಿಗೆ ಹಾಕಿದ ನಂತರವೂ ಪೋಲೀಸರ ಕಿರುಕುಳ ಮುಂದುವರೆಯಿತು ಎಂದು ಸತ್ಯಶೋಧನ ಸಮಿತಿಯೊಂದು ವರದಿ ಮಾಡಿದೆ. ರಾಷ್ಟ್ರ–ವಿರೋಧಿಗಳೊಂದಿಗೆ ಹೀಗೆಯೇ ವರ್ತಿಸುವುದು ಎಂದು ಪೊಲೀಸರು ಮತ್ತೆ–ಮತ್ತೆ ಅವರನ್ನು ಹೀಗಳೆಯುತ್ತಿದ್ದರಂತೆ.

ಈ ನಡುವೆ ಮಾರ್ಚ್25ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಭಾರತದ ರಾಷ್ಟ್ರಪತಿಗಳಿಗೆ ಪತ್ರ ಬರೆದು ವಿಶ್ವವಿದ್ಯಾಲಯ ಸಮುದಾಯಕ್ಕೆ ಮತ್ತು ದೇಶಕ್ಕೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

“ಹೆಚ್‌ಆರ್‌ಡಿ ಮಂತ್ರಾಲಯವೇ ಈ ವಿಶ್ವವಿದ್ಯಾಲಯದ ಸಂದರ್ಶಕರಾಗಿರುವ ಭಾರತದ ಮಾನ್ಯ ರಾಷ್ಟ್ರಪತಿಗಳನ್ನು ಈ ವಿವಾದಕ್ಕೆ ಎಳೆದಿರುವುದರಿಂದಾಗಿ, ತಾವು ದಯವಿಟ್ಟು ಮಧ್ಯಪ್ರವೇಶಿಸಬೇಕು ಮತ್ತು ಸ್ಪಷ್ಟವಾಗಿ ಕಾಣುವಂತೆ ದಲಿತ–ವಿರೋಧಿ ನಿಲುವು ತಳೆದಿರುವ, ಸಾಮಾಜಿಕವಾಗಿ ಎಲ್ಲರನ್ನು ಒಳಗೊಳ್ಳುವ ಬಗ್ಗೆ ಈಗಾಗಲೇ ಸ್ಥಾಪಿತಗೊಂಡಿರುವ ಎಲ್ಲ ವಿಧಿ–ವಿಧಾನಗಳನ್ನು ಉಲ್ಲಂಘಿಸಿರುವ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಉಪಕುಲಪತಿಗಳನ್ನು ತೆಗೆದು ಹಾಕುವಂತೆ ಮಾಡಬೇಕಾಗಿ ಕೋರುತ್ತೇನೆ. ಅವರ ವಿರುದ್ಧ ದಾಖಲಾಗಿರುವ ಕೇಸಿನಲ್ಲಿ ಕ್ರಮ ಕೈಗೊಳ್ಳಬೇಕು ಹಾಗೂ ವಿಶ್ವವಿದ್ಯಾಲಯ ಸಮುದಾಯ ಮತ್ತು ದೇಶಕ್ಕೆ ನ್ಯಾಯ ಒದಗಿಸಬೇಕು” ಎಂದು ಸೀತಾರಾಮ್ ಯೆಚೂರಿ ತಮ್ಮ ಪತ್ರದಲ್ಲಿ ಹೇಳಿದ್ದರು.

ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವನ್ನು ಹಿಂದೂ ರಾಷ್ಟ್ರ ಅಭಿವೃದ್ಧಿ ಮಂತ್ರಾಲಯವಾಗಿ ಪರಿವರ್ತಿಸಲು ಬಿಡಬಾರದು, ಇದಕ್ಕಾಗಿ ಮಧ್ಯಪ್ರವೇಶಿಸಬೇಕು ಎಂದು ತಮ್ಮ ಪತ್ರದ ಕೊನೆಯಲ್ಲಿ ಸೀತಾರಾಮ್ ಯೆಚೂರಿ ರಾಷ್ಟ್ರಪತಿಗಳನ್ನು ಆಗ್ರಹಿಸಿದ್ದರು.

ಮಾರ್ಚ್28ರಂದು ಅಪ್ಪಾರಾವ್ ಅವರನ್ನು ಉಪಕುಲಪತಿ ಸ್ಥಾನದಿಂದ ವಜಾ ಮಾಡಬೇಕು ಎಂದು ನೂರಾರು ವಿದ್ಯಾರ್ಥಿಗಳು ಮತಪ್ರದರ್ಶನ ನಡೆಸಿದರು. ಮರುದಿನ ಜೈಲಿಗೆ ಅಟ್ಟಲ್ಪಟ್ಟ ವಿದ್ಯಾರ್ಥಿಗಳು ಜಾಮೀನಿನಲ್ಲಿ ಹೊರಬಂದು ವಿವಿ ಕ್ಯಾಂಪಸ್ಸಿಗೆ ಮರಳಿದಾಗ ಮತ್ತೆ ಸಭೆ ನಡೆದು ಮತ್ತೆ ಉಪಕುಲಪತಿಗಳ ವಜಾದ ಬೇಡಿಕೆಯನ್ನು ಎತ್ತಲಾಯಿತು.

ಮಾರ್ಚ್ 31ರಂದು ವಿವಿ ಆವರಣದಲ್ಲಿನ ಒಂದು ಸಭೆಗೆ ಆಹ್ವಾನಿತರಾಗಿದ್ದ ಮೂವರು ಎಂಪಿಗಳು, ಎಂ.ಬಿ.ರಮೇಶ್, ಪಿ.ಕೆ.ಬಿಜು ಮತ್ತು ಎ.ಸಂಪತ್ ಅವರನ್ನು ಹಾಗೂ ನಾಗರಿಕ ಹಕ್ಕು ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರನ್ನು ವಿವಿಯ ಮುಖ್ಯ ದ್ವಾರದಲ್ಲಿಯೇ ತಡೆದು ನಿಲ್ಲಿಸಲಾಯಿತು. **ಈ ಮೂವರು ಎಂಪಿಗಳು ವಿವಿಯ ಉಪಕುಲಪತಿ ಮತ್ತು ರಿಜಿಸ್ಟ್ರಾರ್ ವಿರುದ್ಧ ಸಂಸತ್ತಿನಲ್ಲಿ ಹಕ್ಕು ಚ್ಯುತಿ ನಿಲುವಳಿಯನ್ನು ಮಂಡಿಸುವುದಾಗಿ ಹೇಳಿದ್ದಾರೆ.**

ಅತ್ತ ಬೇರೆಡೆಗಳಲ್ಲೂ ಉನ್ನತ ಶಿಕ್ಷಣದ ಸಂಸ್ಥೆಗಳ ಮೇಲೆ ದಾಳಿ ಮುಮುದುವರೆಯುತ್ತಿದೆ. **ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ** ಎಬಿವಿಪಿ ಮುಖಂಡರ ಅಪಪ್ರಚಾರದ ವಿರುದ್ಧ ದನಿಯೆತ್ತಿದ ವಿದ್ಯಾರ್ಥಿಗಳ ಮೇಲೆ ಮತ್ತೆ ಅದೇ ‘ರಾಷ್ಟ್ರ–ವಿರೋಧಿ’ ಘೋಷಣೆಗಳನ್ನು ಹಾಕಿದ ಆಪಾದನೆ ಹಾಕಲಾಯಿತು. ಕಾಲೇಜಿನ ಪ್ರಿನ್ಸಿಪಾಲರ ಮೇಲೆ ಬಲಪಂಥೀಯ ಶಕ್ತಿಗಳು ಒತ್ತಡ ಹಾಕಿದ್ದರಿಂದ ಹೀಗೆಂದು ಸುಳ್ಳು ದೂರು ಕೊಟ್ಟಿದ್ದ ಪ್ರಿನ್ಸಿಪಾಲರು ಕೊನೆಗೆ ದೂರನ್ನು ಹಿಂತೆಗೆದುಕೊಂಡು ಪೆಚ್ಚು ಮೋರೆ ಹಾಕಿದರು.

ಮರುದಿನ **ಮುಂಬೈಯಲ್ಲಿ** ರೋಹಿತ್ ವೆಮುಲಾಗೆ ನ್ಯಾಯ ಆಗ್ರಹಿಸಿ ಮತ್ತು ಫರ್ಗ್ಯೂಸನ್ ಕಾಲೇಜಿನ ಘಟನೆಯನ್ನು ವಿರೋಧಿಸಿ ಮತಪ್ರದರ್ಶನ ನಡೆಸಿದ ವಿದ್ಯಾರ್ಥಿಗಳ ಮೇಲೆ ಬಲಪಂಥೀಯರಿಂದ ಹಲ್ಲೆ ನಡೆಯಿತು.

ತುರ್ತು ಪರಿಸ್ಥಿತಿಯ ಕಾಲದಲ್ಲಿ ಇಂದಿರಾ ಅಂದರೆ ಇಂಡಿಯಾ ಎಂಬ ಘೋಷಣೆ ಕೇಳಿ ದೇಶ ಅವಾಕ್ಕಾಗಿತ್ತು. ಈಗ ದೇಶ ಇನ್ನೂ ಮುಂದೆ ಹೋಗಿದೆ. ಒಬ್ಬ ಕೇಂದ್ರ ಮಂತ್ರಿಗಳು ಮೋದಿ ನಮಗೆ ದೇವರು ಕೊಟ್ಟ ಉಡುಗೊರೆ ಎಂದರೆ ಮತ್ತೊಬ್ಬ ಮಂತ್ರಿಗಳು 16ನೇ ಶತಮಾನದ ಫ್ರೆಂಚ್ ಜ್ಯೋತಿಷಿ ನೋಸ್ತ್ರಾದಮುಸ್ ಭಾರತದಲ್ಲಿ ಮೋದಿಯವರ ಆಳ್ವಿಕೆಯ ಬಗ್ಗೆಯೂ ಭವಿಷ್ಯವಾಣಿ ನುಡಿದಿದ್ದ, ಎಂದು ತಮ್ಮ ಫೇಸ್‌ಬುಕ್‌ನಲ್ಲಿ ಹೇಳಿದರು. 2014ರಿಂದ 2026 ರವರೆಗೆ ಆಳ್ವಿಕೆ ನಡೆಸುವ ಇವರನ್ನು ದೇಶದ ಜನ ಕೊಂಡಾಡುತ್ತಾರೆ. ಆತನ ನೇತೃತ್ವದಲ್ಲಿ ದೇಶ ‘ಗ್ಲೋಬಲ್ ಮಾಸ್ಟರ್’ ಆಗುತ್ತದೆ ಮಾತ್ರವಲ್ಲ, ಹಲವು ದೇಶಗಳು ಅದರ ಆಶ್ರಯಕ್ಕೆ ಬರುತ್ತವೆ ಎಂದಿದ್ದರಂತೆ. ಈ ಫೇಸ್‌ಬುಕ್ ಟಿಪ್ಪಣಿ ಈಗ ಕಾಣ ಸಿಗುತ್ತಿಲ್ಲ

–ಸುದ್ಧಿ



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಮಾತೆಯ ಹೆಸರಲ್ಲಿ ಬಾಲಕರ ಮೇಲೆ ಹಲ್ಲೆ


ಇಡೀ ಜಗತ್ತೇ ‘ಭಾರತ್ ಮಾತಾಕೀ ಜೈ’ಎಂದು ಹೇಳುವಂತಾಗುತ್ತದೆ ಎಂದು ಅಪ್ಪಣೆ ಕೊಡಿಸಿದ ಸುದ್ದಿಯ ಬೆನ್ನಲ್ಲೇ, ಆರೆಸ್ಸೆಸ್ ಮುಖ್ಯಸ್ಥರು ಈ ಘೋಷಣೆ ಕೂಗಲು ಬಲವಂತ ಮಾಡಬಾರದು ಎಂದು ಹೇಳಿರುವುದಾಗಿಯೂ ವರದಿಯಾಗಿದೆ. ಆದರೆ ಇತ್ತ ದೇಶದ ರಾಜಧಾನಿಯಲ್ಲೇ ಮೂವರು ಮದರಸಾ ವಿದ್ಯಾರ್ಥಿಗಳನ್ನು ‘ಮಾತಾಕೀ ಜೈ’ ಹೇಳಿಲ್ಲ ಎಂದು ಥಳಿಸಿದ ಘಟನೆ ವರದಿಯಾಗಿದೆ.


ದಿಲ್ಲಿಯ ರಮೇಶ್ ಎನ್‌ಕ್ಲೇವ್‌ನಲ್ಲಿರುವ ಒಂದು ಮದರಸಾದಲ್ಲಿ ಕಲಿಯುತ್ತಿರುವ ದಿಲ್‌ಕುಶ್, ನಯೀಮ್ ಮತ್ತು ಅಜ್ಮಲ್ ಈ ಮೂವರು ಬಿಹಾರದಿಂದ ಬಂದ ಬಡಕುಟುಂಬಗಳಿಗೆ ಸೇರಿದವರು. ಈ ಬಾಲಕರನ್ನು ಮಾತಾಕೀ ಜೈ/ಭಾರತ್ ಮಾತಾಕೀ ಜೈ ಎಂದು ಕೂಗಲು ಬಲವಂತ ಮಾಡಿದ ಐದು ಮಂದಿ ಬಲವಾಗಿ ಥಳಿಸಿದರು. ಅವರಲ್ಲಿ ಒಬ್ಬನಿಗೆ ತೀವ್ರ ಗಾಯಗಳಾಗಿವೆ. ಆದರೆ ಪೋಲಿಸರು ಕೊಟ್ಟ ಎಫ್‌ಐಆರ್ ಪ್ರತಿಯಲ್ಲಿ ಇದು ಒಂದು ‘ವೈಯಕ್ತಿಕ ವಿವಾದ’ ಎಂದು ಬರೆಯಲಾಗಿದೆ.

ಈ ಬಾಲಕರ ಮನೆಗಳಿಗೆ ಭೇಟಿ ನೀಡಿ ವಿಚಾರಿಸಿದ ಸಿಪಿಐ(ಎಂ) ತಂಡ ಇದು ಸ್ಪಷ್ಟವಾಗಿ ಕೋಮುದ್ವೇಷದ ಅಪರಾಧ ಎಂದು ಕಂಡು–ಕೊಂಡಿದೆ. ಈ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ನೇತೃತ್ವದ ನಿಯೋಗವೊಂದು ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿ ಬಡಕುಟುಂಬಗಳಿಂದ ಬಂದಿರುವ ಈ ಬಾಲಕರು ಭಯಭೀತರಾಗಿದ್ದಾರೆ, ದಿಲ್ಲಿ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ ಈ ಬಗ್ಗೆ ಯಾವುದೇ ಗಮನ ಹರಿಸಿಲ್ಲವಾದ್ದರಿಂದ ಈ ಬಗ್ಗೆ ಆಯೋಗವೇ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿಯನ್ನು ಸಲ್ಲಿಸಿದೆ.

ಬಿಎಂಡಬ್ಲ್ಯುಗಳು: ಅಂದರೆ ‘ಬ್ರೂಟ್ ಮೆಜಾರಿಟಿ ವಾಲಾ’ ಗಳು ಈಗ ‘ಭಾರತ್ ಮಾತಾ ವಾಲಾ’ಗಳು ಎಂದೆನಿಸಿಕೊಂಡಿದ್ದಾರೆ.

ವ್ಯಂಗ್ಯಚಿತ್ರ: ಅಜಿತ್ ನೈನನ್, ಟೈಂಸ್ ಆಫ್ ಇಂಡಿಯಾ





2009 ರ ನಂತರದ ಅತಿ ಕಡಿಮೆ ಉದ್ಯೋಗ ನಿರ್ಮಾಣ 2015ರಲ್ಲಿ

ಮೋದಿ ಸರಕಾರದ ಲೇಬರ್ ಬ್ಯುರೊ ಸರ್ವೆಯ ಮಾಹಿಗಳ ಪ್ರಕಾರ 2015ರ ಮೊದಲ ಒಂಬತ್ತು ತಿಂಗಳಲ್ಲಿ ಮಾನವ ಶ್ರಮ ಹೆಚ್ಚಾಗಿ ಬೇಕಿರುವ ಎಂಟು ಪ್ರಮುಖ ಉದ್ದಿಮೆಗಳಲ್ಲಿ ಹೊಸ ಉದ್ಯೋಗಗಳ ನಿರ್ಮಾಣ ಕಳೆದ ಆರು ವರ್ಷಗಳಲ್ಲೆ ಅತಿ ಕಡಿಮೆ ಮಟ್ಟಕ್ಕೆ ಇಳಿದಿದೆ. ಅಂದರೆ 1.55 ಲಕ್ಷ ಮಾತ್ರ. ಹಿಂದಿನ ಎರಡು ವರ್ಷಗಳಲ್ಲಿ, ಅಂದರೆ 2013 ಮತ್ತು 2014ರಲ್ಲಿ ಇದೇ ಅವಧಿಯಲ್ಲಿ ಅನುಕ್ರಮವಾಗಿ 3.36ಲಕ್ಷ 3.04ಲಕ್ಷ ಹೆಚ್ಚು ಉದ್ಯೋಗಗಳು ನಿರ್ಮಾಣಗೊಂಡಿದ್ದವು. ಈ ಹಿಂದೆ 2009ರಲ್ಲಿ ಈ ಅವಧಿಯಲ್ಲಿ ಅತೀ ಕಡಿಮೆ ಸಂಖ್ಯೆ ದಾಖಲಾಗಿತ್ತು. ಅಗಲೂ ನಿರ್ಮಾಣಗೊಂಡ ಉದ್ಯೋಗಗಳ ಸಂಖ್ಯೆ 2.49 ಲಕ್ಷ. ಲೇಬರ್ ಬ್ಯೂರೊ 2009ರಿಂದ ಈ ಸರ್ವೆಯನ್ನು ಆರಂಭಿಸಿದೆ.(ದಿ ಹಿಂದೂ, ಮಾರ್ಚ್31)

ಮೇಲಿನ ಸ್ತಂಭಾಲೇಖದಲ್ಲಿ ಮೊದಲ ಸ್ತಂಭ ಜನವರಿ–ಮಾರ್ಚ್ ಅವಧಿಯಲ್ಲಿ, ಎರಡನೆಯದು ಎಪ್ರಿಲ್–ಜೂನ್ ಅವಧಿಯಲ್ಲಿ ಮತ್ತು ಮೂರನೇಯದು ಜುಲೈ–ಸಪ್ಟಂಬರ್ ಅವಧಿಯಲ್ಲಿ ನಿರ್ಮಾಣಗೊಂಡ ಉದ್ಯೋಗಗಳ ಸಂಖ್ಯೆಯನ್ನು ತೋರಿಸುತ್ತದೆ. ವೃತ್ತದಲ್ಲಿರುವ ಸಂಖ್ಯೆ ಈ ಒಂಭತ್ತು ತಿಂಗಳ ಒಟ್ಟು ಸಂಖ್ಯೆಯನ್ನು ತೋರಿಸುತ್ತದೆ.

ಇದರ ಪ್ರಕಾರ 2015ರ ಮೊದಲ ಮೂರು ತಿಂಗಳಲ್ಲಿ ನಿರ್ಮಾಣಗೊಂಡ ಉದ್ಯೋಗಗಳ ಸಂಖ್ಯೆ ಕೇವಲ 64 ಸಾವಿರ, ನಂತರದ ಮುರುತಿಂಗಳಲ್ಲಿ 43000 ಉದ್ಯೋಗಗಳ ಕಡಿತವಾಗಿದೆ. ನಂತರದ ಮೂರುತಿಂಗಳಲ್ಲಿ 1.34 ಲಕ್ಷ ಉದ್ಯೋಗಗಳು ನಿರ್ಮಾನವಾಗಿ ಅದು1.55ಲಕ್ಷ ತಲುಪಿತಷ್ಟೇ. 2009ರಲ್ಲಿ ಮೊದಲ ಆರು ತಿಂಗಳಲ್ಲಿ ಸುಮಾರು 2.5ಲಕ್ಷ ಉದ್ಯೋಗಗಳ ಕಡಿತವಾಗಿದ್ದರೂನಂತರದ ಮೂರು ತಿಂಗಳಲ್ಲಿ 4.97 ಲಕ್ಷ ಉದ್ಯೋಗಗಳ ನಿರ್ಮಾಣವಾಗಿ ಅದು 2.49 ಲಕ್ಷಕ್ಕೆ ಬಂದಿತ್ತು.

ಸಾಮಾನ್ಯವಾಗಿ ಜುಲೈನಿಂದ ಸಪ್ಟಂಬರ್ ಅವಧಿಯಲ್ಲಿ ಹೆಚ್ಚು ಹೊಸ ಉದ್ಯೋಗಗಳಿಗೆ ಭರ್ತಿ ನಡೆಯುತ್ತದೆ. ಹಿಂದಿನ ಎಲ್ಲ ವರ್ಷಗಳಲ್ಲೂ ಇದು 3ಲಕ್ಷ ದಾಟಿತ್ತು ಎಂಬುದನ್ನು ಗಮನಿಸಿದರೆ ಈ ವರ್ಷ ಕೇವಲ 1.34ಲಕ್ಷ ಹೊಸ ಉದ್ಯೋಗಗಳು ಆರೋಗ್ಯಕರ ಸಂಕೇತವೇನೂ ಅಲ್ಲ ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಾರೆ.

"ಉದ್ಯೋಗ ನಿರ್ಮಾಣ ಆಗುತ್ತಿಲ್ಲ, ಪ್ರಧಾನಿಗಳ ವಿದೇಶಯಾತ್ರೆಗಳ ಮೊದಲು ಬಿಜೆಪಿ ಸರಕಾರ ವಿದೇಶಿ ಬಂಡವಾಳವನ್ನು ತುಷ್ಟೀಕರಿಸಬೇಕೆನ್ನುತ್ತದೆ. ಉದ್ಯೋಗಾವಕಾಶವನ್ನು ಅಪಾಯಕ್ಕೊಳಪಡಿಸುವುದು ಅವರ ಮೊದಲ ಆದ್ಯತೆಯೇ?" ಎಂದು ಸೀತಾರಾಮ್ ಯೆಚೂರಿ ಈ ಕುರಿತು ಟಿಪ್ಪಣಿ ಮಾಡಿದ್ದಾರೆ.

ಇ-ವಾಣಿಜ್ಯ ಚಿಲ್ಲರೆ ವ್ಯಾಪಾರದಲ್ಲಿ 100ಶೇ.ಎಫ್‌ಡಿಐ ವಿದೇಶಿ ಬಂಡವಾಳದೆದುರು ಮೊಣಕಾಲೂರಿದ ಸರಕಾರ

ಇಂಟರ್‌ನೆಟ್ ಮೂಲಕ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ ಕಂಪನಿಗಳಲ್ಲಿ 100ಶೇ. ಎಫ್‌ಡಿಐಗೆ ಅವಕಾಶ ನೀಡುವ ಮೋದಿ ಸರಕಾರದ ನಿರ್ಧಾರ ದೊಡ್ಡ ವಿದೇಶಿ ಇಂಟರ್ನೆಟ್ ಚಿಲ್ಲರೆ ವ್ಯಾಪಾರೀ ಕಂಪನಿಗಳ ಎದುರು ಶರಣಾಗತಿಯ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಪ್ರಧಾನ ಮಂತ್ರಿಗಳ ಬ್ರಸೆಲ್ಸ್ ಮತ್ತು ಅಮೆರಿಕ ಭೇಟಿಯ ಸಂದರ್ಭದಲ್ಲಿ ವಿದೇಶಿ ಬಂಡವಾಳವನ್ನು ತುಷ್ಟೀಕರಿಸುವ ಪ್ರಕಟಣೆ ಇದು ಅದು ಟೀಕಿಸಿದೆ. ಯುರೋಪಿಯನ್ ಒಕ್ಕೂಟದೊಡನೆ 'ಮುಕ್ತ ವ್ಯಾಪಾರ ಒಪ್ಪಂದ'ಗಳನ್ನು ಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮತ್ತು ಅಮೆರಿಕನ್ ಬಂಡವಾಳಿಗರನ್ನು ಸಂತುಷ್ಟಗೊಳಿಸಲು ಅವರ ಒತ್ತಡಕ್ಕೆ ಮಣಿದು ಮೋದಿ ಸರಕಾರ ಈ ನಿರ್ಧಾರ ಮಾಡಿದೆ ಎಂದು ಪೊಲಿಟ್‌ಬ್ಯುರೊ ಟೀಕಿಸಿದೆ.

ಈ ಹಿಂದೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಇಂತಹ ಕ್ರಮಗಳನ್ನು ತರಲು ಪ್ರಯತ್ನಿಸಿದಾಗ ಇದೇ ಬಿಜೆಪಿ ಅದನ್ನು ಬಲವಾಗಿ ವಿರೋಧಿಸುತ್ತ ಸಣ್ಣ ಚಿಲ್ಲರೆ ವ್ಯಾಪಾರಿಗಳ ಪರವಾಗಿ ಮಾತಾಡಿತ್ತು. ಆದರೆ ಅವೆಲ್ಲ ಕೇವಲ ನಾಟಕ ಎಂದೀಗ ಸಾಬೀತಾಗಿದೆ.

ಬಿಜೆಪಿ ಮತ್ತೊಂದು ತಿಪ್ಪರಲಾಗ ಹಾಕಿ ಚಿಲ್ಲರೆ ವ್ಯಾಪಾರದಲ್ಲಿ ಹಿಂಬಾಗಿಲಿನಿಂದ ಎಫ್‌ಡಿಐ ಪ್ರವೇಶಿಸಲು ಅವಕಾಶ ಕಲ್ಪಿಸಿದೆ. ಇದು ಲಕ್ಷಾಂತರ ಸಣ್ಣ ಚಿಲ್ಲರೆ ವ್ಯಾಪಾರಿಗಳ ಬದುಕನ್ನು ತಟ್ಟುವ ಕ್ರಮ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕೇಡು ತರುವ ಧೋರಣೆಯನ್ನು ತಕ್ಷಣವೇ ಕೈಬಿಡಬೇಕು ಎಂದು ಆಗ್ರಹಿಸಿದೆ.

ಅಂಕಿ–ಅಂಶಗಳನ್ನೇ ಅವಿಶ್ವಸನೀಯಗೊಳಿಸಿರುವ ಸರಕಾರ – ಗ್ರಾಮೀಣ ವಿದ್ಯುದೀಕರಣ ಇತ್ತೀಚಿನ ಉದಾಹರಣೆ

2016ರ ಬಜೆಟ್ ಭಾಷಣದಲ್ಲಿ ಹಣಕಾಸು ಮಂತ್ರಿಗಳು ಗ್ರಾಮೀಣ ವಿದ್ಯುದೀಕರಣದಲ್ಲಿ ಕಳೆದ ವರ್ಷದ ಸಾಧನೆ ಹಿಂದಿನ ಮೂರು ವರ್ಷದ ಒಟ್ಟು ವಿದ್ಯುದೀಕರಣವನ್ನೂ ಮೀರಿದೆ ಎಂದು ಹೇಳಿಕೊಂಡಿದ್ದಾರೆ. ಇದು ಕೇವಲ ಬಡಾಯಿ ಎಂಬುದು ಪತ್ರಿಕೆಗಳಲ್ಲಿ ವರದಿಯಾಗಿರುವ ಅಂಕಿ–ಅಂಶಗಳಿಂದ ದೃಢಪಟ್ಟಿದೆ.

ಕಳೆದ ವರ್ಷ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನ ಮಂತ್ರಿಗಳು 1000ದಿನದೊಳಗೆ ಎಲ್ಲ ಗ್ರಾಮಗಳ ವಿದ್ಯುದೀಕರಣವಾಗುತ್ತದೆ ಎಂದು ಸಾರಿದ್ದರು. ಇದಕ್ಕಾಗಿ ದೀನ್‌ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನಾ ಎಂಬುದನ್ನು ಆರಂಭಿಸಲಾಯಿತು. ಸರಕಾರದ ಮಾಹಿತಿಗಳ ಪ್ರಕಾರ ಎಪ್ರಿಲ್ 1, 2015 ರಂದು 18,452 ಹಳ್ಳಿಗಳಲ್ಲಿ ವಿದ್ಯುತ್ ಇರಲಿಲ್ಲ.

ಎಪ್ರಿಲ್ 2015ರಲ್ಲಿ ವಿದ್ಯುತ್ ಇಲ್ಲದ ಹಳ್ಳಿಗಳ ಸರ್ವೆ ಆರಂಭವಾಗಿತ್ತು. ವಿದ್ಯುದೀಕರಣದ ಮಾಹಿತಿ ನೀಡಲು ಗರ್ವ್(ಜಿಎಆರ್‌ವಿ) ಎಂಬ ತಂತ್ರಾಂಶವನ್ನು ಅಕ್ಟೋಬರ್ 2015ರಲ್ಲಿ ಆರಂಭಿಸಲಾಯಿತು. ಇದರ ಉಸ್ತುವಾರಿಗೆ 309 ಗ್ರಾಮ ವಿದ್ಯುತ್ ಅಭಿಯಂತ(ಜಿವಿಎ)ರನ್ನು ನೇಮಿಸಲಾಯಿತು.

ಈ ಎಲ್ಲ ಕ್ರಮಗಳಿಂದಾಗಿ ಕಳೆದ ವರ್ಷ 7008 ಹಳ್ಳಿಗಳಲ್ಲಿ ವಿದ್ಯುದೀಕರಣಗೊಂಡಿವೆ ಎಂದು ಹೇಳಲಾಯಿತು. ಆದರೆ ಇವುಗಳಲ್ಲಿ 3604 ಹಳ್ಳಿಗಳ ಬಗ್ಗೆ ಈ ಸರ್ವೆ ನಡೆಯುವ ವೇಳೆಗೆ 'ವಿದ್ಯುದೀಕರಣಗೊಂಡಿರುವುದು ಕಂಡು ಬಂದಿದೆ' ಎಂದು ಈ ತಂತ್ರಾಂಶದಲ್ಲಿ ದಾಖಲಾಗಿದೆ. ಅಧಿಕಾರಿಗಳ ಪ್ರಕಾರ ಈ ಹಳ್ಳಿಗಳು ನಿಜವಾಗಿ ಯಾವಾಗ ವಿದ್ಯುದೀಕರಣಗೊಂಡವು ಎನ್ನುವುದು ಕಷ್ಟ, ಎಪ್ರಿಲ್ 2015 ರ ನಂತರವೇ ಆಗಿರಬಹುದು, ಅಥವ ಮೊದಲೇ ಆಗಿರಬಹುದು. 'ದಿ ಹಿಂದೂ' ಪತ್ರಿಕೆ (ಮಾರ್ಚ್ 26. ಸಮರ್ಥ ಬಂಸಾಲ್ ಅವರ ಲೇಖನ) ಕಲೆ ಹಾಕಿದ ಮಾಹಿತಿಯ ಪ್ರಕಾರ ಅರುಣಾಚಲ ಪ್ರದೇಶದ ಚಾಂಗ್‌ಲಾಂಗ್ ಎಂಬ ಹಳ್ಳಿಯಲ್ಲಿ 2001ರಲ್ಲಿ ವಿದ್ಯುತ್ ಸಂಪರ್ಕ ಬಂದಿತ್ತು. ಅಸ್ಸಾಂನ ಘರ್ಬಂದಿಯ ಕಹರ್‌ನಲ್ಲಿ 2012ರಲ್ಲಿ ಬಂದಿತ್ತು ಮತ್ತು ಬಿಹಾರದ ಮಹದೈಲಿ ಗ್ರಾಮದಲ್ಲಿ 2013ರಲ್ಲಿ ಬಂದಿತ್ತು. ಇವೆಲ್ಲ ಎಪ್ರಿಲ್ 2015ರ ನಂತರ ವಿದ್ಯುದೀಕರಣಗೊಂಡವು ಎನ್ನಲಾದ 7008 ಹಳ್ಳಿಗಳಲ್ಲಿ ಸೇರಿವೆ! ಅಂದರೆ 'ವಿದ್ಯುದೀಕರಣಗೊಂಡಿರುವುದು ಕಂಡು ಬಂದಿದೆ' ಎಂದು ಸರ್ವೆಯಲ್ಲಿ ನಮೂದಿಸಿದ 3604 ಹಳ್ಳಿಗಳಲ್ಲಿ ಎಲ್ಲವೂ ಅಲ್ಲದಿದ್ದರೂ ಹೆಚ್ಚಿನವು 2015ರ ಮೊದಲೇ ವಿದ್ಯುದೀಕರಣಗೊಂಡಿರುವ ಸಂಭವವೇ ಜಾಸ್ತಿಯೆನ್ನಬಹುದು.

ಇನ್ನೊಂದೆಡೆಯಲ್ಲಿ, ವಿದ್ಯುದೀಕರಣಗೊಂಡಿವೆ ಎನ್ನಲಾದ ಈ 7008 ಹಳ್ಳಿಗಳ ಪಟ್ಟಿಯಲ್ಲಿರುವ ಕೆಲವು ಹಳ್ಳಿಗಳಲ್ಲಿ ಈಗಲೂ ವಿದ್ಯುತ್ ಸಂಪರ್ಕವೇ ಇಲ್ಲದಿರುವುದೂ ಕಂಡು ಬಂದಿದೆ ಎಂದು 'ದಿ ಹಿಂದೂ' ಪತ್ರಿಕೆ'ಯ ಈ ವರದಿ ತನಿಖೆ ಮಾಡಿದಾಗ ಕಂಡು ಬಂದಿದೆ. ಉತ್ತರಪ್ರದೇಶದ ಹಲ್ದು ಖಾತ ಎಂಬ ಹಳ್ಳಿಯಲ್ಲಿ ವಿದ್ಯುತ್ ಮೂಲರಚನೆಯೆಂಬುದು ಈಗಲೂ ಇಲ್ಲ ಎಂದು ಸರಕಾರ ನೇಮಿಸಿರುವ ಜಿವಿಎ ಅಂದರೆ ಕ್ಷೇತ್ರ ಇಂಜಿನಿಯರುಗಳೇ ಹೇಳಿದ್ದಾರಂತೆ. ಅದೇ ರೀತಿ ಅಸ್ಸಾಂನ ದೀಮತಾಲಾ, ಛತ್ತೀಸ್‌ಗಡದ ಕದಂ ಜರಿಯ, ಬಿಹಾರದ ಬುಕ್ನಾರಿ ಹಾಗೂ ಮಧ್ಯಪ್ರದೇಶದ ಸುನ್ವಾರ ಹಳ್ಳಿಗಳೂ ಈ 7008 ವಿದ್ಯುದೀಕರಣಗೊಂಡ ಹಳ್ಳಿಗಳ ಪಟ್ಟಿಯಲ್ಲಿದ್ದರೂ, ಅವಿನ್ನೂ ಕತ್ತಲಲ್ಲೇ ಇರುವುದು ಕಂಡು ಬಂದಿದೆ. ಇವು ಕೇವಲ ಅಪವಾದಗಳಲ್ಲ, ಹಣಕಾಸು ಮಂತ್ರಿಗಳು ನೀಡಿರುವ ಅಂಕಿ–ಅಂಶಗಳೇ ಹಿಗ್ಗಿಸಿದ ಅಂಕಿ–ಅಂಶಗಳು ಎಂದು 'ದಿ ಹಿಂದೂ'ಪತ್ರಿಕೆಯ ವಿಶ್ಲೇಷಕರು ಅಭಿಪ್ರಾಯ ಪಡುತ್ತಾರೆ.

ಇದಕ್ಕೆ ಸ್ವಲ್ಪ ಮಟ್ಟಿಗೆ 'ವಿದ್ಯುದೀಕರಣ'ದ ನಿರೂಪಣೆ ಕಾರಣವಾದರೆ, ಇನ್ನ ಸ್ವಲ್ಪ ಮಟ್ಟಿಗೆ 'ಗರ್ವ್' ತಂತ್ರಾಂಶ ಕಾರಣ ಎನ್ನಲಾಗಿದೆ. ಆದರೆ ಬಹುಪಾಲು ಅಪ್ರಮಾಣಿಕತೆಯೇ ಕಾರಣವಾಗಿರುವಂತೆ ಕಾಣುತ್ತದೆ. ಒಂದು ಹಳ್ಳಿಯ ಸಾರ್ವಜನಿಕ ಪ್ರದೇಶ ಮತ್ತು 10ಶೇ. ಮನೆಗಳಲ್ಲಿ ವಿದ್ಯುತ್ ಸಂಪರ್ಕ ಇದ್ದರೆ ಅದು 'ವಿದ್ಯುದೀಕರಣ'ದ ನಿರೂಪಣೆಯಾದರೆ, 'ಗರ್ವ್' ತಂತ್ರಾಂಶಕ್ಕೆ ಕಳಿಸುವ ಫೋಟೋದಲ್ಲಿ ವಿದ್ಯುತ್ ಕಂಬ ಅಥವ ತಂತಿಗಳು ಕಾಣ ಬಂದರೆ ಅದು ವಿದ್ಯುದೀಕರಣಗೊಂಡಿದೆ ಎಂದು ಆ ತಂತ್ರಾಂಶದಲ್ಲಿ ದಾಖಲಾಗುತ್ತದೆಯಂತೆ. ವಾಸ್ತವವಾಗಿ ಅಲ್ಲಿ ವಿದ್ಯುತ್ ಕಂಬಗಳು, ತಂತಿಗಳು ಹೋಗಿಯೇ ಇರುವುದಿಲ್ಲ, ಅಥವ ಹೋಗಿ ಕಳವಾಗಿರುತ್ತವೆ, ಹೋಗಿದ್ದರೂ ಆ ಹಳ್ಳಿಗೆ ವಿದ್ಯುತ್ ಸಂಪರ್ಕವಂತೂ ಬಂದಿರುವುದಿಲ್ಲ. ಇಂತಹ 30 ಹಳ್ಳಿಗಳು ' ದಿ ಹಿಂದೂ' ಪತ್ರಿಕೆಯ ವಿಶ್ಲೇಷಕರ ಗಮನಕ್ಕೆ ಬಂದಿವೆ.

ಒಟ್ಟಿನಲ್ಲಿ ಸರಕಾರ ಕೊಡುತ್ತಿರುವ ಅಂಕಿ–ಅಂಶಗಳಿಗೂ ವಾಸ್ತವತೆಗೂ ಅಜಗಜಾಂತರವಿರುವುದು ಕಂಡು ಬಂದಿದೆ.

ಜಿಡಿಪಿ ಬೆಳವಣಿಗೆ ದರದ ನವ–ಉದಾರವಾದಿ ಗಿರ ಹತ್ತಿಸಿಕೊಂಡು ಅದಕ್ಕಾಗಿ ಜಿಡಿಪಿ ಅಂಕಿ–ಅಂಶಗಳ ಲೆಕ್ಕಾಚಾರವನ್ನೇ ಬದಲಿಸಿ ಅ ಅಂಕಿ–ಅಂಶಗಳನ್ನು ಅತ್ಯಂತ ಅವಿಶ್ವಸನೀಯಗೊಳಿಸಿರುವಾಗ ಮಾತಿನ ಬಡಾಯಿಯನ್ನೇ ಬಂಡವಾಳವಾಗಿಸಿಕೊಂಡಿರುವ ಸರಕಾರದಿಂದ ಬಹುಶಃ ಇದಕ್ಕಿಂತ ಹೆಚ್ಚೇನೂ ನಿರೀಕ್ಷಿಸಲು ಸಾಧ್ಯವಿಲ್ಲ.

"ಜಿಡಿಪಿ ದರದಿಂದ ಹಿಡಿದು ಬಜೆಟ್ ಲೆಕ್ಕಾಚಾರಗಳು ಮತ್ತು ಈಗ ಗ್ರಾಮೀಣ ವಿದ್ಯುದೀಕರಣ–ಈ ಸರಕಾರದ ದಾವೆಗಳನ್ನು ನಂಬಲಾರದಂತಹ ಒಂದು ಹಂತವನ್ನು ಬಂದು ತಲುಪಿದ್ದೇವೆ" ಎಂದು ಸಿಪಿಐ(ಎಂ) ಪ್ರಧಾನ ಮಂತ್ರಿ ಸೀತಾರಾಮ್ ಯೆಚೂರಿ ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

'ವಿಕಾಸ'ದ ಪ್ರತಿಷ್ಠೆಯ ಸಂಕೇತ 'ಗತಿಮಾನ್' ರೈಲು ಉದ್ಘಾಟನೆ ಎಂದು?

ನವದೆಹಲಿ ಮತ್ತು ಆಗ್ರಾದ ನಡುವೆ 'ಗತಿಮಾನ್' ರೈಲು ಮೋದಿ ಸರಕಾರದ ಪ್ರತಿಷ್ಠೆಯ ಅತ್ಯಂತ ವೇಗದ ರೈಲು ಎನ್ನಲಾಗಿದೆ. ಇದು 28 ವರ್ಷಗಳ ಹಿಂದೆ ಆರಂಭವಾದ 'ಶತಾಬ್ದಿ' ರೈಲಿಗಿಂತ ಎರಡು ನಿಮಿಷ ವೇಗವಾಗಿ ಚಲಿಸುತ್ತದೆ. ಇದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಮಾರ್ಚ್ 27 ರಂದು ಪ್ರಕಟವಾದ ಸುದ್ದಿ.

ದಿಲ್ಲಿ–ಝಾಂಸಿ ನಡುವೆ 1988ರಲ್ಲಿ ನೆಹರೂ ಜನ್ಮ ಶತಾಬ್ದಿ ಸಂದರ್ಭದಲ್ಲಿ ಆರಂಭಿಸಿದ 'ಶತಾಬ್ದಿ' ರೈಲು ದಿಲ್ಲಿಯಿಂದ ಆಗ್ರಾ ತಲುಪಲು 115 ನಿಮಿಷ ತಗೊಳ್ಳುತ್ತದೆ. ಮೋದಿ ಸರಕಾರದ ಪ್ರತಿಷ್ಠೆಯ 'ಗತಿಮಾನ್ ರೈಲು ಪರಿಕ್ಷಾ ಓಟದಲ್ಲಿ 113 ನಿಮಿಷ ತಗೊಂಡಿದೆ. ಮೂರು ದಶಕಗಳ ತಾಂತ್ರಿಕ ಮುನ್ನಡೆ, ಹಣವನ್ನೆಲ್ಲ ಮೈಗೂಡಿಸಿಕೊಂಡಿರುವ ಈ ರೈಲು ಪ್ರಯಾಣಿಕರಿಗೆ ಕೊಡಬಹುದಾದದ್ದು ಇಷ್ಟೇ. ಬಹುಶಃ ಸಾಮಾನ್ಯ ಪ್ರಯಾಣಿಕರಿಗೆ ಇದೂ ದಕ್ಕಲಿಕ್ಕಿಲ್ಲ.

'ವಿಕಾಸ, ವಿಕಾಸ, ವಿಕಾಸ' ಎಂಬ ಮಂತ್ರ ಜಪಿಸುತ್ತಿರುವ ಈಗಿನ ಆಳುವ ಮಂದಿಯ 'ಅಚ್ಛೇದಿನ' ಕನಸುಗಳಲ್ಲಿ ಸ್ಮಾರ್ಟ್‌ಸಿಟಿ ಮತ್ತು ಶರವೇಗದ ರೈಲುಗಳು ಆದ್ಯತೆಯನ್ನು ಪಡೆದಿವೆ. ಈ 'ಗತಿಮಾನ್' ಆ ಭವ್ಯ ಯೋಜನೆಯ ಒಂದು ಭಾಗ. ಇದಕ್ಕೆ ಸಾಕಷ್ಟು ಹಣವನ್ನೂ ಸುರಿಯಲಾಗಿದೆ. ಉತ್ತರ ರೈಲ್ವೆಯ ಅಡಿಯಲ್ಲಿ ಬರುವ ಕೇವಲ 58 ಕಿ.ಮೀ. ದೂರಕ್ಕೆ 60 ಕೋಟಿ ರೂ. ಖರ್ಚಾಗಿದೆಯಂತೆ. ಇನ್ನೂ 15 ಕೋಟಿ ಖರ್ಚು ಮಾಡಬೇಕಾಗಿದೆಯಂತೆ. ಉತ್ತರ–ಮಧ್ಯ ರೈಲ್ವೆ ಇನ್ನೂ ಹೆಚ್ಚು ಖರ್ಚು ಮಾಡಿದೆ ಎನ್ನಲಾಗಿದೆ. ಮಾರ್ಚ್ 31 ರಂದು ಇದರ ಉದ್ಘಾಟನೆ ಯಾಗಬೇಕಿತ್ತು. ಸ್ವಾಭಾವಿಕವಾಗಿ ಈ ಪ್ರತಿಷ್ಠೆಯ ರೈಲನ್ನು ಪ್ರಧಾನ ಮಂತ್ರಿಗಳೇ ಉದ್ಘಾಟಿಸುವುದು ಎಂದು ಕಳೆದ ವರ್ಷ ನಿರ್ಧಾರವಾಗಿತ್ತಂತೆ. ಆದರೆ ಈ ಎರಡು ನಿಮಿಷಗಳ ಅಂತರದಿಂದಾಗಿ ಅದನ್ನು ಮುಂದೂಡಲಾಗಿದೆ ಎಂದು ವರದಿಯಾಗಿದೆ.

ಲಾಹೋರ್ ಸ್ಫೋಟ: ಅತ್ಯಂತ ಹೀನ ಕೃತ್ಯ –ಸಿಪಿಐ(ಎಂ) ಖಂಡನೆ

ಮಾರ್ಚ್ 27ರಂದು ಪಾಕಿಸ್ತಾನದ ಪ್ರಮುಖ ನಗರ ಲಾಹೋರ್‌ನ ಗುಲ್ಶನ್–ಎ–ಇಕ್ಬಾಲ್ ಉದ್ಯಾನದಲ್ಲಿ ಸಂಭವಿಸಿದ ಸ್ಫೋಟದಲ್ಲಿ 72 ಮಂದಿ ಪ್ರಾಣ ಕಳಕೊಂಡಿದ್ದಾರೆ. ಮುನ್ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಒಬ್ಬ ಆತ್ಮಹತ್ಯಾ ಬಾಂಬರ್ ಈ ಸ್ಫೋಟ ನಡೆಸಿದ್ದಾನೆ ಎಂದು ಪಾಕಿಸ್ತಾನದ ಪೋಲೀಸ್ ವಕ್ತಾರರು ಹೇಳಿರುವುದಾಗಿ ವರದಿಯಾಗಿದೆ. ಅದು ಈಸ್ಟರ್ ಭಾನುವಾರವಾದ್ದರಿಂದ ಉದ್ಯಾನದಲ್ಲಿ ಬಹಳಷ್ಟು ಜನರಿದ್ದರು. ಸತ್ತವರಲ್ಲಿ ಬಹಳಷ್ಟು ಮಹಿಳೆಯರು ಮತ್ತು ಮಕ್ಕಳೂ ಇದ್ದರು ಎನ್ನಲಾಗಿದೆ.

ಸಿಪಿಐ(ಎಂ) ಪೊಲಿಟ್‌ಬ್ಯುರೋ ಈ ಭಯೋತ್ಪಾದಕ ಕೃತ್ಯಕ್ಕೆ ಆಕ್ರೋಶ ವ್ಯಕ್ತಪಡಿಸುತ್ತ ಅದನ್ನು ಬಲವಾಗಿ ಖಂಡಿಸಿದೆ. ಕ್ರೈಸ್ತ ಸಮುದಾಯವನ್ನು ಗುರಿಮಾಡಿ ಈ ಕೃತ್ಯ ನಡೆಸಲಾಗಿದೆ ಎಂದು ಇದನ್ನು ನಡೆಸಿದವರು ಹೇಳಿಕೊಂಡಿರುವುದು ಇದನ್ನು ಅತ್ಯಂತ ಹೀನಕೃತ್ಯವಾಗಿಸಿದೆ ಎಂದು ಸಿಪಿಐ(ಎಂ) ಹೇಳಿದೆ. ತಮ್ಮ ಪ್ರಿಯಜನರನ್ನು ಕಳಕೊಂಡಿರುವ ಕುಟುಂಬಗಳಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿರುವ ಸಿಪಿಐ(ಎಂ), ಪಾಕಿಸ್ತಾನೀ ಆಡಳಿತ ಇಂತಹ ಭಯೋತ್ಪಾದಕ ಹಿಂಸಾಚಾರಕ್ಕೆ ಇಳಿಯುವ ಮತೀಯ ಉಗ್ರವಾದಿಗಳ ದಮನಕ್ಕೆ ದೃಢ ಕ್ರಮಗಳನ್ನು ಕೈಗೊಳ್ಳಬೇಕು ಎಂದಿದೆ.

ಪಾಕಿಸ್ತಾನದ ಅವಾಮಿ ವರ್ಕರ್ಸ್ ಪಾರ್ಟಿ "ನಾವೀಗ ಮತ್ತೊಮ್ಮೆ ನಿರಾಶರಾಗಿದ್ದೇವೆ, ಮತ್ತೊಂದು ದಾಳಿಯನ್ನು ಖಂಡಿಸುತ್ತಿದ್ದೇವೆ, ಮತ್ತಷ್ಟು ಅಮಾಯಕರ ಸಾವಿಗೆ ಮರುಗುತ್ತಿದ್ದೇವೆ" ಎಂದು ಹೇಳಿಕೆಯೊಂದರಲ್ಲಿ ತನ್ನ ನೋವನ್ನು ವ್ಯಕ್ತಪಡಿಸಿದೆ. ಈ ದಾಳಿಯಿಂದ ಆಘಾತಗೊಂಡಿರುವವರು, ಇದನ್ನು ಖಂಡಿಸುವವರು ಎಲ್ಲರೂ ಇನ್ನೂ ಹೆಚ್ಚಲಿರುವ ಈ ಉಗ್ರ ಬಲಪಂಥೀಯ ದಾಳಿಗಳ ಎದುರು ಐಕ್ಯತೆಯನ್ನು ಕಾಪಾಡಿಕೊಳ್ಳಬೇಕಾಗಿದೆ ಎಂದು ಅವಾಮಿ ವರ್ಕರ್ಸ್ ಪಾರ್ಟಿ ಹೇಳಿದೆ.

ರಾಜ್ಯಗಳ ಸುತ್ತ

ಆರ್. ರಾಮಕೃಷ್ಣ

ಕೇರಳ: ಎಲ್‌ಡಿಎಫ್‌ನ ಪ್ರಥಮ ಪಟ್ಟಿ ಬಿಡುಗಡೆ

ಕೇರಳದ ಎಡ ಪ್ರಜಾಸತ್ತಾತ್ಮಕ ರಂಗವು ಮೇ 16 ರ ವಿಧಾನ ಸಭಾ ಚುನಾವಣೆಗೆ ತನ್ನ ಅಭ್ಯರ್ಥಿಗಳ ಪ್ರಥಮ ಪಟ್ಟಿಯನ್ನು ಬಿಡುಗಡೆ ಮಾಡಿದೆ. 140 ಸದಸ್ಯ ಬಲದ ವಿಧಾನ ಸಭಾಗೆ ಮೊದಲ ಪಟ್ಟಿಯಲ್ಲಿ 124 ಸ್ಥಾನಗಳ ವಿವರ ನೀಡಲಾಗಿದೆ. 124 ಸ್ಥಾನಗಳ ಪೈಕಿ ಸಿಪಿಐ(ಎಂ) 92 ಸ್ಥಾನಗಳಲ್ಲೂ, ಸಿಪಿಐ 27 ಸ್ಥಾನಗಳಲ್ಲೂ, ಜನತಾದಳ(ಜಾತ್ಯತೀತ)5 ಸ್ಥಾನಗಳಲ್ಲೂ ಎನ್‌ಸಿಪಿ, ಜನಾಧಿಪಕ್ಷ ಕಾಂಗ್ರೆಸ್ ತಲಾ 4 ಸ್ಥಾನಗಳಲ್ಲೂ ಸ್ಪರ್ಧಿಸುತ್ತಿವೆ. ಐಎನ್‌ಎಲ್ 3 ಸ್ಥಾನಗಳಲ್ಲಿ, ಸಿಎಂಪಿ ಕಾಂಗ್ರೆಸ್(ಎಸ್), ಆರ್‌ಎಸ್‌ಪಿ, ಕೇರಳ ಕಾಂಗ್ರೆಸ್(ಬಿ), ಕೇರಳ ಕಾಂಗ್ರೆಸ್(ಸ್ಕಾರಿಯಾ)ಗಳೂ ತಲಾ ಒಂದೊಂದು ಸ್ಥಾನಗಳಲ್ಲಿ ಸ್ಪರ್ಧಿಸಲಿವೆ. ಮೊದಲ ಪಟ್ಟಿಯಲ್ಲಿ ಒಟ್ಟು 16 ಜನ ಮಹಿಳಾ ಅಭ್ಯರ್ಥಿಗಳಿದ್ದಾರೆ. ಎಲ್‌ಡಿಎಫ್ ನ ಚುನಾವಣಾ ಪ್ರಣಾಳಿಕೆಯು ಏಪ್ರಿಲ್ 5 ರಂದು ಬಿಡುಗಡೆಯಾಗಲಿದೆ.



ಕೃಷಿಬಿಕ್ಕಟ್ಟಿಗೆ ಪರಿಹಾರಕ್ಕಾಗಿ ಆಗ್ರಹ ನಾಸಿಕ್‌ನಲ್ಲಿ ಲಕ್ಷ ರೈತರ ಯಶಸ್ವಿ ಅನಿರ್ದಿಷ್ಟ ಧರಣ

ಮಹಾರಾಷ್ಟ್ರದಲ್ಲಿ ಕೃಷಿ ಬಿಕ್ಕಟ್ಟು ಗಂಭೀರವಾಗಿದೆ. 2015ರ ವರ್ಷದಲ್ಲಿ 3,228 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಭೀಕರ ಬರ ರಾಜ್ಯದ ಜನರ ಬದುಕನ್ನು ಸುಡುತ್ತಿದೆ. ಇಂತಹ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಮಾರ್ಚ್ 29, 2016 ರಂದು ಒಂದು ಬೃಹತ್ ಸಾಮೂಹಿಕ ಅನಿರ್ದಿಷ್ಟ ಧರಣವೊಂದು ಆರಂಭಗೊಂಡು ಹಲವು ಬೇಡಿಕೆಗಳ ಈಡೇರಿಕೆಯ ಯಶಸ್ಸಿನೊಂದಿಗೆ ಮತ್ತು ಆಶಾಭಾವನೆಯೊಂದಿಗೆ ಮಾರ್ಚ್ 31 ರಂದು ಮುಕ್ತಾಯಗೊಂಡಿತು.

ರೈತ ವಿರೋಧಿ ನೀತಿಗಳನ್ನು ಕೈಬಿಟ್ಟು ಕೃಷಿ ಬಿಕ್ಕಟ್ಟಿಗೆ ಸೂಕ್ತ ಪರಿಹಾರ ನೀಡಬೇಕೆಂದು ನೆರೆದ ಬೃಹತ್ ಜನಸ್ತೋಮವು ಮಹಾರಾಷ್ಟ್ರದ ಬಿಜೆಪಿ–ಶಿವಸೇನೆ ಸರಕಾರವನ್ನು ಒತ್ತಾಯಿಸಿತು.

ಮಾರ್ಚ್ 29 ರಂದು ನಾಸಿಕ್‌ನ ಗಾಲ್ಫ್ ಕ್ಲಬ್ ಮೈದಾನ ಅನಿರ್ದಿಷ್ಟ ಅಹೋರಾತ್ರಿ ಧರಣ ಆರಂಭಿಸಿದ ರೈತರು ಸಿಬಿಎಸ್‌ನ ಚೌಕವನ್ನು ಆಕ್ರಮಿಸಿಕೊಂಡು ಅಲ್ಲಿಗೂ ಮಹಾಧರಣವನ್ನು ವಿಸ್ತರಿಸಿದರು. ಮೈದಾನ ಮತ್ತು ಚೌಕದಲ್ಲಿಯೇ ಟೆಂಟುಗಳನ್ನು ಕಟ್ಟಿಕೊಂಡು ನೆಲೆನಿಂತರು. ಈಡೀ ರಾತ್ರಿಯನ್ನು ಅಲ್ಲಿಯೇ ಕಳೆದರು. ಮರುದಿನ ಮತ್ತಷ್ಟು ಉತ್ಸಾಹದಿಂದ ಧರಣ ಮುಂದುವರಿಸಿದರು.

ಈ ಬೃಹತ್ ಕಾರ್ಯಾಚರಣೆಯ ಫಲವಾಗಿ ರಾಜ್ಯ ಸರ್ಕಾರವು ರೈತ ಪ್ರತಿನಿಧಿಗಳೊಂದಿಗೆ ಮಾತುಕತೆಗೆ ಮುಂದಾಯಿತು. ರೈತರ ಸಾಲಾ ಮನ್ನಾ ಮಾಡಬೇಕು. ಡಾ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಕೃಷಿ ವೆಚ್ಚದ ಶೇ. 150 ರಷ್ಟನ್ನು ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯಾಗಿ ನಿಗದಿ ಮಾಡಬೇಕು. ತುರ್ತು ಮತ್ತು ದೃಢವಾದ ಬರಪರಿಹಾರ ಕ್ರಮಗಳ ಪ್ಯಾಕೇಜ್ ಪ್ರಕಟಿಸ ಬೇಕು. ಆದಿವಾಸಿಗಳು ಮತ್ತು ಬಡ ರೈತರಿಗೆ ಅರಣ್ಯ ಭೂಮಿ ನೀಡಬೇಕು. ದೇವಾಲಯಗಳ ವಶದಲ್ಲಿರುವ ಹೆಚ್ಚುವರಿ ಭೂಮಿಯನ್ನು ವಶಕ್ಕೆ ಪಡೆದುಕೊಂಡು ಭೂಹೀನರಿಗೆ ಹಂಚಬೇಕು ಮುಂತಾದ ಹಲವು ಪ್ರಮುಖ ಬೇಡಿಕೆಗಳ ಮೇಲೆ ಈ ಬೃಹತ್ ಪ್ರತಿಭಟನಾ ಕಾರ್ಯಕ್ರಮ ನಡೆಯಿತು.

ಫಲಿತಾಂಶ

ರೈತರ ಸಾಲಮನ್ನಾ ಮಾಡುವುದಕ್ಕೆ ಮತ್ತು ಸ್ವಾಮಿನಾಥನ್ ಆಯೋಗದ ವರದಿಯಂತೆ ಕೃಷಿವೆಚ್ಚದ ಶೇ. 150 ರಷ್ಟನ್ನು ಕೃಷಿ ಉತ್ಪನ್ನವಾರಾಗಿ ಬೆಂಬಲ ಬೆಲೆ ನಿಗದಿ ಮಾಡಲು ಒತ್ತಾಯಿಸಿ ಕೇಂದ್ರ ಸರಕಾರಕ್ಕೆ ಒಂದು ತಂಡವನ್ನು ಕಳುಹಿಸಲು ರಾಜ್ಯ ಸರಕಾರವು ಒಪ್ಪಿದೆ. ಬರಪೀಡಿತ ಪ್ರದೇಶದ ರೈತರ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಲು ಒಪ್ಪಿಕೊಂಡಿದೆ. ಉಳಿದ ಪ್ರದೇಶದಲ್ಲಿಯೂ ಶೇ. 30 ರಷ್ಟು ರಿಯಾಯಿತಿ ನೀಡಲು ಸರಕಾರ ಒಪ್ಪಿದೆ. ಕುಡಿಯುವ ನೀರು ಪೂರೈಕೆಗೆ ತುರ್ತು ಕ್ರಮವಹಿಸಲು, ಜನರಿಗೆ ದನಕರುಗಳಿಗೆ ಮೇವು, ಪಶು ಆಹಾರ ಒದಗಿಸುವ ಸಂಬಂಧ ಅಗತ್ಯ ಕ್ರಮ ವಹಿಸಲು ಸರಕಾರ ಒಪ್ಪಿದೆ.

ಅದೇ ರೀತಿಯಾಗಿ ಅರಣ್ಯ ಹಕ್ಕು ಕಾಯ್ದೆ ಪ್ರಕಾರ ಭೂಮಿ ಹಕ್ಕು ನಿರಾಕರಿಸಿರುವ ಪ್ರಕರಣಗಳನ್ನು ಮರುಪರಿಶೀಲಿಸಲು ಸರಕಾರ ಒಪ್ಪಿದೆ. ದೇವಾಲಯ ಭೂಮಿಯನ್ನು ಸರಿಯಾಗಿ ಗುರುತಿಸಲು ರಾಜ್ಯವ್ಯಾಪಿಯಾಗಿ ಮರು ಸರ್ವೆ ಮಾಡಲು ರಾಜ್ಯ ಸರಕಾರ ಸಮ್ಮತಿಸಿದೆ. ಪಶ್ಚಿಮದ ಅರಬ್ಬಿ ಸಮುದ್ರದ ಕಡೆಗೆ ಹರಿಯುವ ನದಿ ನೀರಿನಿಂದ ನಾಸಿಕ್‌ನಂತಹ ಜಿಲ್ಲೆಗೆ ಹರಿಸುವ ಬಗೆಗೆ ಪರಿಶೀಲಿಸುವುದಾಗಿಯೂ ಸರಕಾರ ಭರವಸೆ ನೀಡಿದೆ.

ಸರಕಾರ ನೀಡಿದ ಖಚಿತ ಭರವಸೆ ಆಧಾರದಲ್ಲಿ ಚಳುವಳಿಯನ್ನು ವಾಪಸ್ ಪಡೆಯಲಾಗಿದೆ. ಒಂದೊಮ್ಮೆ ಸರಕಾರ ಭರವಸೆ ಈಡೇರಿಕೆಯ ವಿಷಯದಲ್ಲಿ ಮಾತು ತಪ್ಪಿದರೆ ಮತ್ತಷ್ಟು ಉಗ್ರ ಹೋರಾಟ ನಡೆಸುವ ಎಚ್ಚರಿಕೆಯನ್ನು ಈ ಬೃಹತ್ ಚಳುವಳಿ ಸಂಘಟಿಸಿದ 'ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾ('ಎಐಕೆಎಸ್'ಗೆ ಸಂಯೋಜಿತ)'ನೀಡಿದೆ.

ಈ ಚಳುವಳಿಯಲ್ಲಿ ಕಿಸಾನ್ ಸಭಾದ ರಾಜ್ಯ ಮುಖಂಡರಲ್ಲದೇ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್, ಕಿಸಾನ್ ಸಭಾದ ರಾಷ್ಟ್ರೀಯ ಮುಖಂಡರಾದ ಹನ್ನನ್ ಮೊಲ್ಲ, ಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ಮುಂತಾದವರು ಪಾಲ್ಗೊಂಡು ಮಾತನಾಡಿದ್ದಾರೆ.

ಭುವನೇಶ್ವರದಲ್ಲಿ ಎಡಪಕ್ಷಗಳ ಬೃಹತ್ ರ್‍ಯಾಲಿ

ಮಾರ್ಚ್ 19 ರಂದು ಒರಿಸ್ಸಾದ ರಾಜಧಾನಿ ಭುವನೇಶ್ವರ ಒಂದು ಬೃಹತ್ ರ್‍ಯಾಲಿಗೆ ಸಾಕ್ಷಿಯಾಯಿತು. ದುಡಿಯುವ ಜನರ–ಬಡಜನರ ಬದುಕಿನ ಜ್ವಲಂತ ಪ್ರಶ್ನೆಗಳ ಆಧಾರದಲ್ಲಿ ಐದು ಎಡಪಕ್ಷಗಳು ಜಂಟಿಯಾಗಿ ಈ ಪ್ರತಿಭಟನಾ ರ್‍ಯಾಲಿಯನ್ನು ಸಂಘಟಿಸಿದ್ದವು. ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ.ಎಲ್.–ಲಿಬರೇಷನ್), ಎಸ್‌ಯುಸಿಐ (ಕಮ್ಯೂನಿಸ್ಟ್), ಫಾರ್ವರ್ಡ್ ಬ್ಲಾಕ್ ಪಕ್ಷಗಳು ಜಂಟಿಯಾಗಿ ಹೋರಾಟವನ್ನು ಸಂಘಟಿಸಿದ್ದವು. 19 ರ ಹೋರಾಟವು ಒರಿಸ್ಸಾ ರಾಜ್ಯದಲ್ಲಿ ಕಳೆದ 25 ವರ್ಷಗಳಲ್ಲಿ ಎಂದೂ ಕಾಣದಂತಹ ಅಭೂತಪೂರ್ವ ರ್‍ಯಾಲಿ ಎನಿಸುವಂತಿತ್ತು. ಅದು ಕೆಂಬಾವುಟಗಳ ಸಾಗರದಂತೆ ಕಾಣುತ್ತಿತ್ತು.

ನೆತ್ತಿ ಸುಡುವ ಬಿಸಿಲು, ಬೀಸುವ ಸುಡುಸುಡು ಬಿಸಿಗಾಳಿ ಯಾವುದೂ ಹೋರಾಟಗಾರರ ಕೆಚ್ಚು ತಗ್ಗಿಸಲಿಲ್ಲ. ರಾಜ್ಯದ ನಾಲ್ಕು ದಿಕ್ಕಿನಿಂದ ರಾಜಧಾನಿಗೆ ಜನ ಹರಿದು ಬಂದರು. ಇವರಲ್ಲಿ ಎಷ್ಟೋ ಜನರು ಚಪ್ಪಲಿ ಕೂಡ ಧರಿಸದ ಬರಿಗಾಲ ಯೋಧರು. ಬಂದವರು ಸಾಮಾನ್ಯರಲ್ಲ. ಅವರು ಕಾರ್ಪೋರೇಟ್ ಕಂಪನಿಗಳ ಅಕ್ರಮ ಗಣಿಗಾರಿ–ಕೆ ಮತ್ತು ಭೂಕಬಳಿಕೆಗಳ ವಿರುದ್ಧ ಧೀರ ಹೋರಾಟವನ್ನು ನಡೆಸುತ್ತಿರುವ ಆದಿವಾಸಿಗಳು. ಕಾಲಹಂಡಿಯಲ್ಲಿ 'ವೇದಾಂತ' ಕಂಪನಿಯ ಭೂ ಕಬಳಿಕೆ ವಿರುದ್ಧ, ಅನುಗುಲ್ ಜಿಲ್ಲೆಯಲ್ಲಿ 'ಜಿಂದಾಲ್' ಕಂಪನಿಯ ಅಕ್ರಮ ಭೂಕಬಳಿಕೆ ವಿರುದ್ಧ ಹೋರಾಟ ನಡೆಸುತ್ತಿರುವ ಆದಿವಾಸಿ ಚಳುವಳಿಗಾರರು ಅವರು. ಅದಲ್ಲದೇ ವಸತಿ ಸೌಕರ್ಯಕ್ಕಾಗಿ ಆಗ್ರಹಿಸುತ್ತಿದ್ದ ವಸತಿ ಹೀನರು, ಗಣಿ ಕಾರ್ಮಿಕರು, ನಗರಗಳ ಗುಡಿಸಲು ವಾಸಿಗಳು, ಕಟ್ಟಡ ಕಾರ್ಮಿಕರು, ಸ್ಕೀಂ ನೌಕರರು, ಮಹಿಳೆಯರು, ದಲಿತರು, ಮೀನುಗಾರರು, ವಿದ್ಯಾರ್ಥಿ–ಯುಜನರು ಎಲ್ಲರೂ ಸೇರಿದ್ದ ಬೃಹತ್ ರ್‍ಯಾಲಿಯು

ಗೌರವಯುತ ನ್ಯಾಯಬದ್ಧವಾದ ಕನಿಷ್ಠ ಕೂಲಿ, ಭೂಹೀನರಿಗೆ ಭೂಮಿ, ಆದಿವಾಸಿಗಳ ಅಕ್ರಮ ಒಕ್ಕಲೆಬ್ಬಿಸುವಿಕೆಗೆ ತಡೆ, ಕಾರ್ಪೋರೇಟ್ ಕಂಪನಿಗಳ ಲೂಟಿ ಮತ್ತು ಶೋಷಣೆಯಿಂದ ಮುಕ್ತಿ, ಅಕ್ರಮ ಗಣಿಗಾರಿಕೆ ತಡೆ, ಸೂಕ್ತ ಬರಪರಿಹಾರ ಕ್ರಮಗಳು, ರೇಷನ್ ಕಾರ್ಡು ಇಲ್ಲದವರಿಗೆ ರೇಷನ್ ಕಾರ್ಡು ಹೀಗೆ ನಾನಾ ಬೇಡಿಕೆಗಳಿಗಾಗಿ ಆಗ್ರಹಿಸುವ



ರ್‍ಯಾಲಿಯಾಗಿತ್ತು ಅದು.

ರ್‍ಯಾಲಿಯನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿ, ವಿವಿಧ ಎಡಪಕ್ಷಗಳ ರಾಜ್ಯ ಮುಖಂಡರು ಮಾತನಾಡಿದರು. ಸೀತಾರಾಮ್ ಯೆಚೂರಿಯವರು ಮಾತನಾಡುತ್ತ ಒರಿಸ್ಸಾದಲ್ಲಿ ಸುಮಾರು 200 ರಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ನವೀನ್ ಪಟ್ನಾಯಕ್ ಸರಕಾರ ಆತ್ಮಹತ್ಯೆಗಳ ತಡೆಗೆ ಸೂಕ್ತ ಕ್ರಮವನ್ನು ಕೈಗೊಂಡಿಲ್ಲ. ಸಂಪನ್ಮೂಲಗಳ ವಿಷಯದಲ್ಲಿ ಒಂದು ಶ್ರೀಮಂತ ರಾಜ್ಯವಾದ ಒರಿಸ್ಸಾದಲ್ಲಿ ಬಡತನ ತಾಂಡವವಾಡುತ್ತಿದೆ. ರಾಜ್ಯ ಸರಕಾರವು ಜನವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಕೇಂದ್ರದ ಬಿಜೆಪಿ ಸರಕಾರವೂ ಜನವಿರೋಧಿಯಾದ ಮತ್ತು ಕಾರ್ಪೋರೇಟ್ ಕಂಪನಿಗಳ ಪರವಾದ ಉದಾರೀಕರಣ ನೀತಿಗಳನ್ನೇ ಜಾರಿಗೆ ತರುತ್ತಿದೆ. ಎಂದು ಕಟುವಾಗಿ ಟೀಕಿಸಿದರು. ಒರಿಸ್ಸಾದಿಂದ ಪ್ರತಿವರ್ಷ ಸುಮಾರು 30 ಲಕ್ಷದಷ್ಟು ಜನರು ಉದ್ಯೋಗಾವಕಾಶಗಳನ್ನು ಹುಡುಕಿಕೊಂಡು ಹೊರರಾಜ್ಯಗಳಿಗೆ ಹೋಗುತ್ತಿದ್ದಾರೆ ಎಂದು ಒರಿಸ್ಸಾದ ದಾರುಣ ಪರಿಸ್ಥಿತಿಯ ಬಗ್ಗೆ ವಿವರಿಸಿದರು.

ಜನರು ಸಂಕಟದಲ್ಲಿರುವಾಗ ಕೋಮುವಾದಿ ಶಕ್ತಿಗಳು ಜನರ ಅತೃಪ್ತಿಯನ್ನು ಬಳಸಿಕೊಂಡು ಕೋಮು ವಿಭಜನೆ ತಂದು ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಾರೆ ಎಂಬ ವಿಷಯದ ಬಗೆಗೆ ಸಹ ಚಳುವಳಿಕಾರರು ಎಚ್ಚರ ಪ್ರದರ್ಶಿಸಿದರು. ಕಂದಮಾಲ್ ಕೋಮುಗಲಭೆಗಳ ದುರಂತವನ್ನು ನೆನಪಿಟ್ಟುಕೊಂಡಿರುವ ಚಳುವಳಿಕಾರರು ಹಿಂದೂತ್ವ ಕೋಮುವಾದಿ ಸಂಚುಗಳ ವಿರುದ್ಧ ಘೋಷಣೆ ಮೊಳಗಿಸುತ್ತಿದ್ದುದ್ದು ಕಂಡು ಬರುತ್ತಿತ್ತು.

ಆಂಧ್ರ ಪ್ರದೇಶ : ಎಡಪಕ್ಷಗಳ ವಿಧಾನ ಸಭಾ ಚಲೋ

ತೆಲಂಗಾಣ ಪ್ರತ್ಯೇಕ ರಾಜ್ಯ ರಚನೆ ಮಾಡುವ ಸಂದರ್ಭದಲ್ಲಿ ಮತ್ತು ಕಳೆದ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಮತ್ತು ತೆಲುಗುದೇಶಂ ಪಕ್ಷಗಳು ರಾಯಲ ಸೀಮಾ ಪ್ರದೇಶದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ನೀಡಲಾಗಿದ್ದ ಭರವಸೆಗಳನ್ನು ಈಡೇರಿಸಬೇಕು. ರಾಯಲ ಸೀಮೆಯ ಭಾಗದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಅನುಕೂಲವಾಗುವಂತೆ ಮತ್ತು ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ರಾಯಲ ಸೀಮೆಗೆ 1,00,000 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಬೇಕು ಎಂದು ಆಗ್ರಹಿಸಿ ಎಡಪಕ್ಷಗಳು ಬೃಹತ್ ವಿಧಾನ ಸಭಾ ಚಲೋ ಹೋರಾಟವನ್ನು ಸಂಘಟಿಸಿದ್ದವು. ಇದು ಆಂಧ್ರ ವಿಧಾನ ಸಭಾ ಅಧಿವೇಶನ ನಡೆಯುತ್ತಿರುವ ಸಮಯ. ಇಂದಿರಾ ಪಾರ್ಕ್‌ನಲ್ಲಿ ಸೇರಿದ್ದ ಚಳುವಳಿಕಾರರು ಬೃಹತ್ ಮೆರವಣಿಗೆಯ ಮೂಲಕ ವಿಧಾನ ಸಭೆಯ ಕಡೆಗೆ ನಡೆದರು. ಪೋಲಿಸರು ತಡೆಗೋಡೆ ಇಟ್ಟು ತಡೆ ಹಾಕಿದರು. ಮುಖಂಡರು ಕಾರ್ಯಕರ್ತರು ತಡೆ ಮೀರಿ ಮುನ್ನುಗ್ಗಲು ಪ್ರಯತ್ನಿಸಿದರು. ಮುಖಂಡರು ಕಾರ್ಯಕರ್ತರನ್ನು ಪೋಲಿಸರು ಒತ್ತಾಯದಿಂದ ಬಂಧಿಸಿ ದೂರ ಕರೆದೊಯ್ದರು. ಈ ತಿಕ್ಕಾಟದಲ್ಲಿ ಹಲವಾರು ಜನರು ಗಾಯಗೊಂಡರು. ವಿಧಾನ ಸಭೆಯ ಒಳಗೆ ಸಹ ಈ ಬೇಡಿಕೆ ಪ್ರತಿಧ್ವನಿಸಿತು.

ಚಳುವಳಿಗೆ ಸಿಕ್ಕ ಜನಸ್ಪಂದನೆ ಎಡಪಕ್ಷಗಳ ಕಾರ್ಯಕರ್ತರಲ್ಲಿ ಹೊಸ ಹುರುಪು ತಂದಿದೆ. ರ್‍ಯಾಲಿಯನ್ನು ವಿಫಲಗೊಳಿಸಲು ಹೈದರಾಬಾದ್‌ಗೆ ಬರುವ ಜನರನ್ನು ರಾಯಲ ಸೀಮಾದ ವಿವಿಧ ಜಿಲ್ಲೆಗಳಲ್ಲೇ ಪೋಲಿಸರು ಬಂಧಿಸಿದರೂ ಸಹ ಸಹಸ್ರಾರು ಜನತೆ ಅಡೆತಡೆಗಳನ್ನು ಮೀರಿ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದಾರೆ. ವಿಧಾನ ಪರಿಷತ್‌ನಲ್ಲಿ ಪಿಡಿಎಫ್ ಮತ್ತು ಸಿಪಿಐನ ಸದಸ್ಯರು ಸದನದ ಬಾವಿಗೆ ಇಳಿದು ರಾಯಲ ಸೀಮಾ ಅಭಿವೃದ್ಧಿ ಸಂಬಂಧದ ಪ್ರಶ್ನೆಗಳನ್ನು ಎತ್ತಿದರು. ಈ ಪ್ರಯತ್ನಕ್ಕೆ ಉಳಿದ ವಿರೋಧ ಪಕ್ಷಗಳಿಂದ ಬೆಂಬಲ ವ್ಯಕ್ತವಾಯಿತು.

PEÁV¸ÀZÀÄV

ಮೋದಿಜಿ,

ನೀವು ಆಸ್ಸಾಂ ಟೀ ಮಾರುತ್ತಿದ್ದರಿಂದ ಆಸ್ಸಾಂ ಜತೆ ವಿಶೇಷ ಸಂಬಂಧ ಇದೆ ಅಂತೀರಿ, ಆದರೆ ಟೀ ಉತ್ಪಾದಿಸುವ ಕಾರ್ಮಿಕರ ಜತೆ ನಿಮಗೆ ಏನೂ ಸಂಭಂಧ ಇಲ್ಲ. ಟೀ ಉತ್ಪಾದಿಸುವ ಆರು ಟೀ ಆದಿವಾಸಿಗಳನ್ನು ಆದಿವಾಸಿಗಳು ಎಂದು ಮಾನ್ಯ ಮಾಡಲು ನಿರಾಕರಿಸಿದ್ದೀರಿ, ಪ್ಲೀಸ್ ಈ ರೀತಿಯ ಬೊಗಳೆಯೊಂದಿಗೆ ಜನರ ಅಪಮಾನ ಮಾಡುವುದನ್ನು ನಿಲ್ಲಿಸಿ!

– ಕಾ. ಬೃಂದಾ ಕಾರಟ್,

ಆಸ್ಸಾಂ ಸಿಪಿಐ(ಎಂ) ನ 25 ವರ್ಷದ ಅತ್ಯಂತ ಕಿರಿಯ ಅಭ್ಯರ್ಥಿ ಸಂಗೀತಾ ದಾಸ್ ಅವರ ಚುನಾವಣಾ ಪ್ರಚಾರ ಭಾಷಣದಲ್ಲಿ

ಆಶಾ ಕಾರ್ಯಕರ್ತೆಯರ ವಿಧಾನಸೌಧ ಚಲೋ

ವೇತನ ನಿಗಧಿ ಮತ್ತು ಪ್ರೋತ್ಸಾಹಧನ ಬಿಡುಗಡೆಗಾಗಿ ಒತ್ತಾಯಿಸಿ ದಿ: 28.03.2016ರಂದು ವಿಧಾನಸೌಧ ಚಲೋ ನಡೆಸಲಾಯಿತು. ರ್‍ಯಾಲಿಯು ನಗರದ ರೈಲ್ವೆ ನಿಲ್ದಾಣದಿಂದ ಹೊರಟು ಫ್ರೀಡಂ ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಸಲಾಯಿತು. ವಿವಿಧ ಜಿಲ್ಲೆಗಳಿಂದ ಸುಮಾರು ಎರಡು ಸಾವಿರ ಆಶಾ ಕಾರ್ಯಕರ್ತೆಯರು ಹೋರಾಟದಲ್ಲಿ ಭಾಗವಹಿಸಿದ್ದರು.

ಸಂಘಟನೆಯ ರಾಜ್ಯಾಧ್ಯಕ್ಷರಾದ ಕಾಂ॥ ಎನ್. ವರಲಕ್ಷ್ಮಿಯವರು ಸಭೆ ಉದ್ದೇಶಿಸಿ ಮಾತನಾಡುತ್ತಾ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯು ಗ್ರಾಮೀಣ ಜನರ ಆರೋಗ್ಯ ರಕ್ಷಿಸಲು ಭಾರತ ಸರ್ಕಾರವು ಪ್ರಯೋಜಿಸಿರುವ ಯೋಜನೆಗಳಲ್ಲಿ ಅತ್ಯಂತ ಮಹತ್ವದ ಯೋಜನೆ. ಆದರೆ ಈ ಯೋಜನೆಯಲ್ಲಿ ಕಳೆದ 8 ವರ್ಷಗಳಿಂದ ದುಡಿಯುತ್ತಿರುವ ಈ ಮಹಿಳೆಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಈ ಮಹಿಳೆಯ ಬದುಕು ನಿರ್ನಾಮ ಮಾಡಲು ಹೊರಟಿದೆ.

ಈ ಯೋಜನೆ ಅನುಷ್ಠಾನಕ್ಕೆ ಬಂದ ನಂತರದಲ್ಲಿ 2006–07ರಲ್ಲಿ ದೇಶದಲ್ಲಿ ಮತ್ತು ರಾಜ್ಯದಲ್ಲಿ ಆರೋಗ್ಯ ಸೂಚಿ ಮಾಪಕಗಳು ಉತ್ತಮವಾಗಿದೆ. ಕ್ರಮವಾಗಿ ಐಎಂಆರ್ ಸಾವಿರಕ್ಕೆ 54 ಶಿಶುಗಳ ಸಾವು ಆಗುತ್ತಿದ್ದು ಈಗ 32ಕ್ಕೆ ನಿಂತಿದೆ. ತಾಯಿಯ ಮರಣ ಪ್ರಮಾಣ 1ಲಕ್ಷಕ್ಕೆ 225 ಇದ್ದುದ್ದು ಈಗ 178ಕ್ಕೆ ಬಂದಿದೆ. ಅಲ್ಲದೇ ಗ್ರಾಮೀಣ ಪ್ರದೇಶದ ಮಹಿಳೆಯರು ಆಸ್ಪತ್ರೆಗಳಲ್ಲಿಯ ಹೆರಿಗೆ ಮಾಡಿಸಿಕೊಳ್ಳಲು ಆಸಕ್ತಿ ತೆ–ೂರುತ್ತಿದ್ದಾರೆ. ಒಟ್ಟಾರೆ ಆರೋಗ್ಯ ಪಾಲನೆ ಮತ್ತು ಅರಿವನ್ನು ಮೂಡಿಸುವ ವಿಚಾರದಲ್ಲಿ ಒಳ್ಳೆಯ ಫಲಿತಾಂಶ ಕೊಡಲು ಸಾಧ್ಯವಾಗಿದೆ.



2014 ಜೂನ್ ತಿಂಗಳಿನಲ್ಲಿ 4 ದಿನದ ಹಗಲು–ರಾತ್ರಿಯ ಹೋರಾಟ ನಡೆಸಿ ಸರ್ಕಾರದಿಂದ ಕೆಲ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಭರವಸೆ ತೆಗೆದುಕೊಳ್ಳಲಾಗಿತ್ತು. ಈ ಬೇಡಿಕೆ ಈಡೇರಿಸಿಕೊಳ್ಳಲು ನಾವು ಸಂಘಟಿತ ಶಕ್ತಿಯಾಗಿ ಹೋರಾಡೋಣ. ಎಲ್ಲಾ ಜಿಲ್ಲೆಗಳಲ್ಲಿಯೂ ಸಂಘಟನೆ ಬಲಪಡಿಸಿ ನಮ್ಮ ಬೇಡಿಕೆ ಗೆಲ್ಲೋಣ ಎಂದು ಹೇಳಿದರು.

ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೆಸ್ತಾ ಮಾತನಾಡಿ ಬೇರೆ, ಬೇರೆ ರಾಜ್ಯದಲ್ಲಿ ಕನಿಷ್ಟವಾದರೂ ವೇತನ ಪ್ರತಿ ತಿಂಗಳಿಗೆ ತೆಗೆದುಕೊಳ್ಳಲು ನಮ್ಮ ಸಂಘಟನೆಯ ಶಕ್ತಿಯಿಂದ ಸಾಧ್ಯವಾಗಿದೆ. ನಾವು ಸಹ ಹೋರಾಟ ಬಲಪಡಿಸಬೇಕಿದೆ.

ಇಂದಿನ ಸರ್ಕಾರಕ್ಕೆ ಆರೋಗ್ಯ ಕಾಪಾಡುವ ಜನರ ಬಗ್ಗೆ ಕನಿಷ್ಟ ಕಾಳಜಿ ಇಲ್ಲ. ಆಸ್ಪತ್ರೆಗಳಲ್ಲಿ ಕನಿಷ್ಟ ಕುಳಿತುಕೊಂಡು ಕೆಲಸ ಮಾಡಲು ಸಾಧ್ಯತೆ ಇಲ್ಲ. ೦ಓ೦, ಡಾಕ್ಟರ್ ಎಲ್ಲರ ಕೋಪಕ್ಕೆ ಬಲಿಯಾಗುವ ಈ ಹೆಣ್ಣುಮಕ್ಕಳಿಗೆ ಸಾಮಾಜಿಕವಾಗಿ ಸಹ ಭದ್ರತೆ ಇಲ್ಲ. ಒಟ್ಟಾರೆ ಸರ್ಕಾರದ ಈ ನೀತಿಗಳನ್ನು ಎಲ್ಲರೂ ಒಗ್ಗಟ್ಟಾಗಿ ಎದುರಿಸಿ ಹೋರಾಡೋಣ ಎಂದು ಕರೆ ನೀಡಿದರು.

SFI ರಾಜ್ಯಾಧ್ಯಕ್ಷರಾದ ಕಾ. ಗುರುರಾಜ ದೇಸಾಯಿ ಅಂಗನವಾಡಿ ರಾಜ್ಯ ಖಜಾಂಚಿ ಕಾ. ಕಮಲಾ, ಚಿಕ್ಕಬಳ್ಳಾಪುರ ಜಿಲ್ಲೆ ಆಶಾಕಾರ್ಯಕರ್ತೆಯರ ಅಧ್ಯಕ್ಷರು ಅಂಗನವಾಡಿ ಮುಖಂಡರಾದ ಕಾ. ಲಕ್ಷ್ಮಿದೇವಮ್ಮ, 108 ಅಂಬ್ಯುಲೆನ್ಸ್ ಡ್ರೈವರ್ ಮುಖಂಡರು, ಹಾಸನ ಅಂಗನವಾಡಿ ಹಾಗೂ ಆಶಾ ಮುಖಂಡರಾದ ಕಾ. ರಾಘವೇಂದ್ರ ಮತ್ತಿತ್ತರು ನೌಕರರನ್ನು ಉದ್ದೇಶಿಸಿ ಮಾತನಾಡಿದರು.

ಹೋರಾಟದ ಸ್ಥಳಕ್ಕೆ NRHM ಯೋಜನೆಯ ನಿರ್ದೇಶಕರಾದ ಶ್ರೀಮತಿ ಉಮಲಾ ಪಾಟೀಲ ಮತ್ತು ಯೋಜನಾ ನಿರ್ದೇಶಕರಾದ ಶ್ರೀ ರಾಜಕುಮಾರ ರವರು ಹೋರಾಟದ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿ ನಿಮ್ಮ ಬಗ್ಗೆ ಸಂಪೂರ್ಣ ಕಾಳಜಿ ನನಗೆ ಇದೆ. ನಾನು ನಿಮ್ಮ ಪರವಾಗಿ ಕೆಲಸ ಮಾಡುತ್ತೇನೆ. 30.03.2016 ರಂದು ನಿಮ್ಮ ಪರ ಚರ್ಚೆ ನಡೆಸಲು ನಿಮ್ಮ ಸಂಘಟನೆಯ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಬಗೆಹರಿಸುತ್ತೇವೆ. ಈ ಸಭೆಗೆ ಸಚಿವರು, ನಮ್ಮ ಯೋಜನೆಯ ಎಲ್ಲಾ ಅಧಿಕಾರಿಗಳು ಭಾಗವಹಿಸುತ್ತೇವೆ. ಹೋರಾಟ ಹಿಂತೆಗೆದುಕೊಳ್ಳಿ ಎಂದು ಹೇಳಿದರು.

ಸರ್ಕಾರದೊಂದಿಗೆ ನಂತರ ಸಭೆ ನಡೆಸಿ 30.03.2016 ರಂದು ಬೇಡಿಕೆಗಳ ಬಗ್ಗೆ ಚರ್ಚಿಸುತ್ತೇವೆ. ಮುಂದಿನ ದಿನಗಳಲ್ಲಿ ತೀರ್ಮಾನ ಕೈಗೊಳ್ಳಿ ಎಂದು ಸಭೆ ಮುಕ್ತಾಯಗೊಳಿಸಲಾಯಿತು.



ಹಾಸ್ಟೆಲ್ ಹೊರಗುತ್ತಿಗೆ ನೌಕರರ ಅನಿರ್ದಿಷ್ಟ ಮುಷ್ಕರ

ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘಟನೆ ವತಿಯಿಂದ ಮಾರ್ಚ್ 30ರಿಂದ ಬೆಂಗಳೂರಿನಲ್ಲಿ ಎರಡು ಪ್ರಮುಖ ಹಕ್ಕೊತ್ತಾಯಗಳಿಗೆ ಅನಿರ್ದಿಷ್ಟ ಮುಷ್ಕರವನ್ನು ನಡೆಸಿದರು. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಡಿಯಲ್ಲಿರುವ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾಪ ಕೈಬಿಟ್ಟು ಕಳೆದ ಹತ್ತಾರು ವರ್ಷಗಳಿಂದ ದುಡಿಯುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕು. ಹಾಸ್ಟೆಲ್ ಹಾಗೂ ವಸತಿ ಶಾಲಾ ಹೊರಗುತ್ತಿಗೆ ನೌಕರರಿಗೆ ಅನ್ವಯಿಸುವ ಕನಿಷ್ಠ ವೇತನ ಪರಿಷ್ಕರಣೆಯ ಅಧಿಸೂಚನೆಯ ವಿರುದ್ಧ ತರಲಾದ ತಡೆಯಾಜ್ಞೆಯನ್ನು ತೆರವುಗೊಳಿಸಬೇಕು – ಇವೇ ಆ ಎರಡು ಪ್ರಮುಖ ಹಕ್ಕೊತ್ತಾಯಗಳು.

ಹೊರಗುತ್ತಿಗೆ ನೌಕರರು ಕೇವಲ ರೂ. 200/– ರಿಂದ ರೂ. 500/– ದರಗಳಲ್ಲಿ ಅತ್ಯಲ್ಪ ವೇತನಕ್ಕೆ ದುಡಿಯುತ್ತಿದ್ದಾರೆ. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಮಾತ್ರವಲ್ಲ ಸಮಾಜ ಕಲ್ಯಾಣ, ಆದಿವಾಸಿಗಳ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ಇರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಮತ್ತು ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ ಹಾಗೂ ವಸತಿ ಆಶ್ರಮ ಶಾಲೆಗಳಲ್ಲಿ ಸುಮಾರು 17,000 ಮಂದಿ ಅಡುಗೆಯವರು, ಅಡುಗೆ ಸಹಾಯಕರು, ಜವಾನರು, ಸ್ವಚ್ಛತಾ ಸಿಬ್ಬಂದಿ, ಕಾವಲುಗಾರರು, ನರ್ಸುಗಳು ಹೊರಗುತ್ತಿಗೆ ನೌಕರರಾಗಿ ದುಡಿಯುತ್ತಿದ್ದಾರೆ.

2008 ರಿಂದ ಇವರನ್ನು ಹೊರಗುತ್ತಿಗೆ ನೌಕರ–ರೆಂದು ಪರಿಗಣಿಸಿದ ದಿನದಿಂದ ಇವರು ಲಾಭಕೋರ ಗುತ್ತಿಗೆದಾರರ/ ಏಜೆನ್ಸಿದಾರರ ಶೋಷಣೆ ಸುಲಿಗೆಗೆ ಒಳಗಾಗಿದ್ದಾರೆ. ಅಸಹಾಯಕರಾದ ಈ ಹೊರಗುತ್ತಿಗೆ ನೌಕರರನ್ನು ಇಲಾಖೆಯ ನೌಕರ–ರೆಂದು ಪರಿಗಣಿಸಿ, ಹೊರಗುತ್ತಿಗೆ ಎಂಬ ಜೀತ ಪದ್ಧತಿಯಿಂದ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಮೊರೆಯಿಡುತ್ತಾ ಬಂದಿದ್ದಾರೆ. ಸರ್ಕಾರ ಸಹಾನುಭೂತಿಯ ಭರವಸೆಯನ್ನು ನೀಡುತ್ತಾ ಬಂದಿದ್ದರೂ. ಹೊರಗುತ್ತಿಗೆ ನೌಕರರ ವಿಮೋಚನೆ ಇದುವರೆಗೂ ಆಗಿಲ್ಲ. ಏಜೆನ್ಸಿದಾರರ ದೌರ್ಜನ್ಯ ಹೆಚ್ಚುತ್ತಿದೆ. ಇತ್ತೀಚೆಗೆ ಹಾವೇರಿ ಜಿಲ್ಲೆಯಲ್ಲಿ ಒಬ್ಬ ಏಜೆನ್ಸಿದಾರ, ನೌಕರರ ವೇತನದಿಂದ ಶೇ.12 ರಿಂದ ಶೇ. 15 ರ ವರೆಗೆ ಕಡಿತ ಮಾಡಿಕೊಳ್ಳುವುದಕ್ಕೆ ನೌಕರ–ರಿಂದ ಬಾಂಡ್ ಪೇಪರ್ ಮೇಲೆ ಒಪ್ಪಿಗೆ ಪತ್ರವನ್ನು ಬರೆಯಿಸಿಕೊಳ್ಳಲು ಆರಂಭಿಸಿದ್ದಾನೆ.

ಸರ್ಕಾರ ನೇರ ನೇಮಕಾತಿಗೆ ಮುಂದಾಗಿರುವುದು ಈ ಅಸಾಯಕ ಹೊರಗುತ್ತಿಗೆ ನೌಕರರಿಗೆ ಅಘಾತವನ್ನು ಉಂಟುಮಾಡಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿದ್ದು ಓದುತ್ತಿರುವ ಬಾಲಕ ಬಾಲಕೀಯರ ಹಿತ ದೃಷ್ಟಿಯಿಂದ ಡಿ–ವರ್ಗದ ಹುದ್ದೆಗಳಿಗೆ ಕಾಯಂ ನೌಕರರನ್ನೇ ನೇಮಿಸುವ ಸರ್ಕಾರದ ಉದ್ದೇಶ ಸ್ವಾಗತಾರ್ಹವೇ ಆಗಿದೆ. ಆದರೆ ಆ ಹುದ್ದೆಗಳಲ್ಲಿ ದುಡಿಯುತ್ತಿರುವವರನ್ನು ಕಡೆಗಣಿಸಿ ನೇರ ನೇಮಕಾತಿ ಮಾಡಿಕೊಳ್ಳುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ, ಅಡುಗೆ ಮಾಡುವವರು 10ನೇ ತರಗತಿ ವಿದ್ಯಾರ್ಹತೆ ಹೊಂದಿರಬೇಕೆಂಬ ಷರತ್ತು ಹೇರುವುದು ಸರಿಯಾದ ಕ್ರಮವಲ್ಲ.

ಆದ್ದರಿಂದ ಸರ್ಕಾರ, ನೇರ ನೇಮಕಾತಿಯ ತನ್ನ ಆದೇಶವನ್ನು ಹಿಂಪಡೆದು ಹಾಲಿ ಹೊರಗುತ್ತಿಗೆ ನೌಕರರನ್ನೇ ಆ ಹುದ್ದೆಗಳಲ್ಲಿ ಕಾಯಂಗೊಳಿಸಬೇಕೆಂದು ಸಂಘ ಒತ್ತಾಯಿಸುತ್ತಿದೆ. ಅಡುಗೆ ಮಾಡುವವರು ಮಾತ್ರವಲ್ಲ, ಇತರ ಡಿ–ವರ್ಗದ ಹುದ್ದೆಗಳು ಸಹ ಕಾಯಂ ಸ್ವರೂಪದ ಕೆಲಸಗಳಾಗಿದ್ದು ಅವರೆಲ್ಲರನ್ನು ಕಾಯಂಗೊಳಿಸಲು ಸರ್ಕಾರ ತನ್ನ ದೋರಣೆಯನ್ನು ಬದಲಾಯಿಸಬೇಕು. ಅವಶ್ಯವಾದರೆ ನೇಮಕಾತಿ ನಿಯಮಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕು.

ವೇತನ ಪರಿಷ್ಕರಣಾ ಅಧಿಸೂಚನೆಯ ವಿರುದ್ಧದ ತಡೆಯಾಜ್ಞೆ ತೆರವುಗೊಳಿಸಿ:

ಕಳೆದ 1 ಏಪ್ರಿಲ್ 2015 ರಂದು ಜಾರಿಗೆ ಬರುವಂತೆ ಹಾಸ್ಟೆಲ್ ನೌಕರರ ಕನಿಷ್ಠ ವೇತನವನ್ನು ಕಾರ್ಮಿಕ ಇಲಾಖೆ ಪರಿಷ್ಕರಿಸಿತ್ತು. ಸರ್ಕಾರದ ಅಧಿಸೂಚನೆಯಲ್ಲಿ ಅದು ಪ್ರಕಟವಾಗಿತ್ತು. ಹಲವು ವರ್ಷಗಳಿಂದ ಪರಿಷ್ಕರಣೆ ಆಗದ ಹಾಸ್ಟೆಲ್ ನೌಕರರ ವೇತನವನ್ನು 15 ಸಾವಿರಕ್ಕೆ ಹೆಚ್ಚಿಸುವಂತೆ ಸಂಘ ಕಾರ್ಮಿಕ ಇಲಾಖೆಯನ್ನು ಒತ್ತಾಯಿಸುತ್ತಾ ಬಂದಿತ್ತು. ಕೊನೆಗೂ ಕನಿಷ್ಟ ವೇತನ ಪರಿಷ್ಕರಣೆಯ ಆದೇಶ ಹೊರಬಿತ್ತು. ಅದರೆ ಕೆಲವು ಖಾಸಗಿ ಹಾಸ್ಟೆಲ್ ಮಾಲೀಕರು ಒಟ್ಟಾಗಿ ಸರ್ಕಾರದ ಆದೇಶದ ವಿರುದ್ಧ ರಾಜ್ಯ ಹೈಕೋರ್ಟನಲ್ಲಿ ತಡೆಯಾಜ್ಞೆ ಪಡೆಯವಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದಾಗಿ ಹಾಸ್ಟೆಲ್ ಹೊರಗುತ್ತಿಗೆ ನೌಕರರರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಸರ್ಕಾರ ಕೂಡಲೇ ತನ್ನ ಅಧಿಸೂಚನೆಯ ವಿರುದ್ಧದ ಹೈಕೋರ್ಟ್ ತಡೆಯಾಜ್ಞೆಯನ್ನು ತೆರವುಗೊಳಿಸಬೇಕೆಂದು ಸಂಘವು ಒತ್ತಾಯಿಸಿದೆ.

ಗುಲ್ಬರ್ಗಾ, ಬೀದರ್, ಹಾವೇರಿ, ಉತ್ತರ ಕನ್ನಡ, ಬೆಳಗಾವಿ, ಬಿಜಾಪುರ, ಮಂಡ್ಯ, ಧಾರವಾಡ, ಚಿತ್ರದುರ್ಗ, ಉಡುಪಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಗದಗ, ಹಾಸನ, ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಯ 2000ಕ್ಕೂ ಹೆಚ್ಚು ಸರ್ಕಾರಿ ಹಾಸ್ಟೆಲ್ ವಸತಿ ಶಾಲಾ ಹೊರಗುತ್ತಿಗೆ ನೌಕರರು ಬೆಂಗಳೂರಿನ ಸಿಟಿ ರೈಲ್ವೆ ನಿಲ್ದಾಣದಿಂದ ಆನಂದರಾವ್ ಸರ್ಕಲ್ ಮೂಲಕ ಫ್ರೀಡಂ ಪಾರ್ಕನಲ್ಲಿ ಸೇರಿ ಸಾಮೂಹಿಕ ಅನಿರ್ಧಿಷ್ಠ ಮುಷ್ಕರವನ್ನು ಆರಂಭಿಸಲಾಯಿತು.

ಮುಷ್ಕರವನ್ನು ಉದ್ಘಾಟಿಸಿ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ, ಸಹಕಾರ್ಯದರ್ಶಿ ಕೆ.ಹನುಮೇಗೌಡ, ಖಜಾಂಚಿ ಚಂದ್ರಪ್ಪ ಹೊಸ್ಕೇರಾ ಹಾಸ್ಟೆಲ್ ನೌಕರರನ್ನು ಉದ್ದೇಶಿಸಿ ಮಾತನಾಡಿದರು.

ಮುಷ್ಕರವನ್ನು ಬೆಂಬಲಿಸಿ ದಲಿತ ಹಕ್ಕುಗಳ ಸಮಿತಿಯ ರಾಜ್ಯಸಂಚಾಲಕರಾದ ಶ್ರೀ ಗೋಪಾಲಕೃಷ್ಣ ಅರಳಹಳ್ಳಿ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ, ಸಿಐಟಿಯುನ ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಸಿಐಟಿಯುನ ಜಿಲ್ಲಾ ಕಾರ್ಯದರ್ಶಿ ಪ್ರತಾಪ್‌ಸಿಂಹ್ ಮಾತನಾಡಿದರು.

ಸಂಘದ ನಿಯೋಗವು ಮಾನ್ಯ ಮಂತ್ರಿ ಶ್ರೀ ಆಂಜನೇಯರವನ್ನು ಭೇಟಿ ಮಾಡಿ ಚರ್ಚಿಸಿತು. ಸಂಘದ ಬೇಡಿಗೆಗಳ ಬಗ್ಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ ಬಿಸಿಎಂ ಇಲಾಖೆಯ ನೇರ ನೇಮಕಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ತಕ್ಷಣ ಎಲ್ಲ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡುವುದಾಗಿ ಭರವಸೆ ನೀಡಿದರು.

ಸರ್ಕಾರದ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನಿಶ್ ಅವರನ್ನು ನಿಯೋಗವು ಭೇಟಿ ಮಾಡಿ ಮನವಿ ಸಲ್ಲಿಸಿತು. ಸರ್ಕಾರದ ಈ ಭರವಸೆಯ ಮೇರೆಗೆ ಹೊರಗುತ್ತಿಗೆ ನೌಕರರ ಅನಿರ್ಧಿಷ್ಠ ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಯಿತು.

ಎರಡು ದಿನಗಳ ಕಾಲ ನಡೆದ ಮುಷ್ಕರದ ನೇತೃತ್ವವನ್ನು ನಿತ್ಯಾನಂದಸ್ವಾಮಿ, ಭೀಮಶೆಟ್ಟಿ ಯಂಪಳ್ಳಿ, ಚಂದ್ರಪ್ಪ ಹೊಸ್ಕೇರಾ, ಕೆ.ಹನುಮೇಗೌಡ, ಕರಿಯಪ್ಪ ಅಚ್ಚೊಳಿ, ಇ.ಆರ್. ಯಲ್ಲಪ್ಪ, ಲಿಂಗಪ್ಪ ಹಣವಾಳ, ಇಸಾಮೊದಿನ್, ದೇವಾನಂದ, ಶಿವರಾಜ, ನಧಾಪ್, ನಂಜುಡಸ್ವಾಮಿ, ನೇತ್ರ, ಪ್ರಭಾ, ಮಂಜುನಾಥ, ಶಶಿವರ್ಧನ, ಶಿವಾನಂದ, ನರಸಿಂಹಮೂರ್ತಿ, ದೇವಕ್ಕ, ಶರಣಮ್ಮ, ಜಯಮ್ಮ, ಸರಸ್ವತಿ, ಲಕ್ಷ್ಮಿ, ಶಾಂತಕ್ಕ, ಕಲ್ಪನ್, ಗಜಾನನ ವಹಿಸಿದರು.

ವರದಿ ಕೆ.ಹನುಮೇಗೌಡ

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ 'ಕಾರ್ಮಿಕರು ಮತ್ತು ಬಜೆಟ್' ಲೇಖನದಲ್ಲಿ ಈ ಕೆಳಗಿನ ತಿದ್ದುಪಡಿಗಳನ್ನು ಗಮನಿಸಿ:

ಪಾರಾ 7 ರಲ್ಲಿ

"ರೂ. 18 ಸಾವಿರ ಕನಿಷ್ಟಕೂಲಿ" ಬದಲು "ರೂ. 10,100 ಕನಿಷ್ಟ ಕೂಲಿ"

ಪಾರಾ 8ನ್ನು (ಮೊದಲಿನ 2 ವಾಕ್ಯ ತೆಗೆದು) ಹೀಗೆ ಓದಿಕೊಳ್ಳಬೇಕು :

ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಭವಿಷ್ಯನಿಧಿ ರೂಪಿಸಬೇಕು, ಸಾಮಾಜಿಕ ಭದ್ರತಾ ಮಂಡಳಿಗೆ ಅಗತ್ಯ ಹಣಕಾಸು ನೀಡಿ ಕಲ್ಯಾಣ ಯೋಜನೆಗಳನ್ನು ರೂಪಿಸಲು, ಆರ್‌ಎಸ್‌ಬಿವೈ ವಿಮಾ ಮೊತ್ತ 1 ಲಕ್ಷ ರೂ.ಗಳಿಗೇರಿಸಲು ಒತ್ತಾಯ ಮಾಡಲಾಗುತ್ತಿದೆ. ಆದರೆ ಬಜೆಟ್‌ನಲ್ಲಿ ಈ ಅಂಶಗಳಿಗೆ ಸಂಬಂಧಿಸಿ ಯಾವ ಪ್ರಸ್ತಾಪಗಳು ಇಲ್ಲ.

"ಬಜೆಟ್: ಬೊಗಳೆ ಮತ್ತು ವಾಸ್ತವ" ಲೇಖಕರ ಹೆಸರು (ಎಂ.ಜಿ.ವೆಂಕಟೇಶ್) ಬಿಟ್ಟು ಹೋಗಿದೆ.

ಈ ತಪ್ಪುಗಳಿಗಾಗಿ ವಿಷಾದಿಸುತ್ತೇವೆ.

JANASHAKTHI KANNADA VARA PATRIKE APR 10, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಗಯ್ಯಾಳಿಗಳಲ್ಲ.. .. ..ಹೆಣ್ಮಕ್ಳೇ ಸ್ಟಾಂಗು ಗುರು !

ಶಿವು ಹೊಸಹಳ್ಳಿ

ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿ "ಕಿರಗೂರಿನ ಗಯ್ಯಾಳಿಗಳು" ರಾಜ್ಯದ ಸಾಂಸ್ಕೃತಿಕ ವಲಯದವರಿಗೆ ಚಿರಪರಿಚಿತವಾದ ಕಾದಂಬರಿ. ತೇಜಸ್ವಿಯವರ ಈ ಕಾದಂಬರಿಯನ್ನು ಮೂಲ ಕಥೆಗೆ ಮತ್ತು ಭಾಷಾ ಸೊಗಡಿಗೆ ಯಾವುದೇ ಧಕ್ಕೆಯಾಗದಂತೆ ಸಿನಿಮಾ ಮೂಲಕ ರಾಜ್ಯದ ಜನತೆಗೆ ತಲುಪಿಸುವ ಕಾರ್ಯದಲ್ಲಿ ನಿರ್ದೇಶಕಿ ಡಿ. ಸುಮನಾ ಕಿತ್ತೂರು ಯಶಸ್ವಿಯಾಗಿದ್ದಾರೆ. ಸಿನಿಮಾದ ಶಿರ್ಷಿಕೆ ಹೇಳುವಂತೆ ಇದು ಮಲೆನಾಡಿನ ಕಿರಗೂರು ಎಂಬ ಹಳ್ಳಿಯಲ್ಲಿ ನಡೆಯುವ ಘಟನೆಗಳನ್ನೇ ಆಧರಿಸಿಕೊಂಡು ಮೂಡಿಸಿರುವ ಚಿತ್ರ. ಹೊಲಗೆಲಸವನ್ನು ಮಾಡದೇ ಸೋಮಾರಿಗಳಾಗಿ ಹರಟುವ ಒಕ್ಕಲಿಗ ಗಂಡಸರು, ಅವರು ನೀಡುವ ಅರೆ ಕೂಲಿಗೆ ಮತ್ತು ಶೇಂದಿಗೆ ಅವರ ಕೆಲಸಗಳನ್ನು ಮಾಡಿಕೊಡುವ ಕೆಳ ಜಾತಿಯ ಗಂಡಸರು, ಅದರೆ ಅವರಲ್ಲಿ ಯಾವುದೇ ಜಾತಿ ತಾರತಮ್ಯದ ಬೇದಭಾವಗಳಿಲ್ಲ. ಎಲ್ಲರೂ ಒಟ್ಟಿಗೆ ಕುಡಿಯುತ್ತಾರೆ, ಹರಟುತ್ತಾರೆ, ಅವರ ಮನೆಗಳಿಗೆ ಇವರು ಇವರ ಮನೆಗಳಿಗೆ ಅವರು ಬಂದು ಕೆಲಸಗಳನ್ನು ಮಾಡುತ್ತಾರೆ. ಇವರ ಮನೆಗಳಲ್ಲಿ ಹೆಂಗಸರದ್ದೇ ಹೆಚ್ಚು ಸದ್ದು. ಮನೆಗೆಲಸವೂ ಸೇರಿದಂತೆ ಹೊಲದಲ್ಲಿ ರಾಗಿಯನ್ನು ಒಕ್ಕಣೆ ಮಾಡಿ ಧಾನ್ಯವನ್ನು ಮನೆಗೆ ತರುವಂತಹ ಎಲ್ಲಾ ಕೆಲಸಗಳನ್ನು ಮಾಡುವಷ್ಟು ಗಟ್ಟಿಗಿತ್ತಿಯರು. ಯಾರ ಮುಲಾಜಿಗೂ ಒಳಗಾಗದ ಗಯ್ಯಾಳಿಯರು. ಇಂತಹ ಕುಟುಂಬಗಳ ನಡುವೆ ಒಕ್ಕಲಿಗ ಮತ್ತು ದಲಿತರು ಎಂಬ ವಿಷಬೀಜವನ್ನು ಭಿತ್ತಿ ಅವರ ಅನ್ಯೋನ್ಯತೆಯನ್ನು ಒಡೆದು ಅಮೂಲಕ ಸರ್ಕಾರಕ್ಕೆ ಮತ್ತು ಜನತೆಗೆ ಮೋಸಮಾಡಿ ತನಗೆ ಲಾಭ ಮಾಡಿಕೊಂಡು ಹೆಚ್ಚು ಸಂಪಾದಿಸಿಕೊಳ್ಳಲು ಊರಿನ ಗ್ರಾಮ ಸೇವಕ ಕಮ್ ಶೇದಿ ಅಂಗಡಿ ಮತ್ತು ಬಡ್ಡಿ ವ್ಯಾಪಾರಿ ಶಂಕರ ತನ್ನ ಗುರು ಭೂತದ ಸ್ವಾಮಿಯ ಸಹಾಯವನ್ನು ಪಡೆದು ಊರಿನ ಗಂಡಸರ ಒಗಟ್ಟನ್ನು ಒಡೆಯಲು ಸಾಧ್ಯವಾಗುತ್ತದೆಯೇ ವಿನಃ ಹೆಂಗಸರ ಒಗ್ಗಟ್ಟನ್ನಲ್ಲ.

ನಂತರ, ಅವರು ಮಾಡಿದ ಕುತಂತ್ರ ಊರಿನ ಮಹಿಳೆಯರಿಂದಲೇ ಬಯಲಾಗುತ್ತದೆ. ಅದು ಹೇಗೆ ಎಂಬುದನ್ನು ಸಿನಿಮಾದಲ್ಲೇ ನೋಡಬೇಕು.

ತೇಜಸ್ವಿಯವರ ಕಾದಂಬರಿಯನ್ನು ಸಿನಿಮಾಗೆ ತರುವ ಪ್ರಯತ್ನ ಸುಲಭದ ಮಾತಲ್ಲ, ಸಂಪೂರ್ಣ ಹಳ್ಳಿಯ ಶೈಲಿಯಲ್ಲಿ ಸಿನಿಮಾವನ್ನು ಮೂಡಿಸಲು ನಿರ್ದೇಶಕರು ಹೂಡಿರುವ ಶ್ರಮ



ಚಿತ್ರದಲ್ಲಿ ವ್ಯಕ್ತವಾಗುತ್ತದೆ. ಪಾತ್ರಧಾರಿಗಳ ಆಯ್ಕೆ, ಸಂಭಾಷಣೆಗಳು, ಛಾಯಾಗ್ರಹಣ ಹಿನ್ನೆಲೆ ಧ್ವನಿ ಮತ್ತು ವಸ್ತ್ರಾಲಂಕಾರಗಳಾವುದರಲ್ಲಿಯೂ ರಾಜಿಯಾಗದೆ ಸಮಾನ ನ್ಯಾಯವನ್ನು ಒದಗಿಸಿದ್ದಾರೆ. ಪಾತ್ರವರ್ಗದಲ್ಲಿ ಗಯ್ಯಾಳಿಗಳ ಮುಖಂಡೆ ದಾನಮ್ಮನಾಗಿ ಶ್ವೇತ ಶ್ರೀವಾಸ್ತವ್, ಕಾಳಿಯಾಗಿ ಸುಕೃತ ವಾಗ್ಲೆ, ರುದ್ರಿಯಾಗಿ ಮಾನಸ ಜೋಷಿ, ನಾಗಮ್ಮನಾಗಿ ಸೋನುಗೌಡರ ಜೊತೆಗೆ ಕಾರುಣ್ಯ ರಾಮ್, ಲಕ್ಷ್ಮಿ ಚಂದ್ರಶೇಖರ್, ಗಿರಿಜಾ ಲೋಕೇಶ್, ಕಿಶೋರ್, ಅಚ್ಯುತ್ ಕುಮಾರ್, ಶರತ್ ಲೋಹಿತಾಶ್ವ, ಅನಂತವೇಲು ಮುಂತಾದ ನಟರ ದಂಡನ್ನೇ ತಂದು ಕೂಡಿಸಲಾಗಿದೆ. ಚಿತ್ರದ ಯಾವುದೇ ಪಾತ್ರವೂ ಸಪ್ಪೆಯಲ್ಲ ಹಾಗೂ ಯಾವುದೇ ಸನ್ನಿವೇಶವೂ ವ್ಯರ್ಥವಲ್ಲದ ರೀತಿಯಲ್ಲಿ ಚಿತ್ರವನ್ನು ತೋರಿಸಲಾಗಿದೆ. ತೇಜಸ್ವಿಯವರ ಮೂಲ ಕಥೆ-ಯ ಆಸ್ತಿಯಾದ ಹಳ್ಳಿಯ ಸೊಗಡು, ಗ್ರಾಮೀಣ ಜನತೆಯ ಬದುಕು, ಅವರ ನಿಸ್ವಾರ್ಥ ಸೇವೆ, ಜಾತಿ ತಾರತಮ್ಯವಿಲ್ಲದ ಬದುಕು ಮತ್ತು ಅವರ ಒಗಟ್ಟನ್ನು ಹೊಡೆದು ತಮಗೆ ಲಾಭಮಾಡಿಕೊಳ್ಳುವ ದುರುಳರು ಹೀಗೆ ಎಲ್ಲಾ ವಿಷಯಗಳನ್ನು ಯಾವುದೇ ಮೋಸವಿಲ್ಲದೆ 2 ಗಂಟೆ 20 ನಿಮಿಷಗಳಲ್ಲಿ ಕಥೆಕಟ್ಟಿ ಅದನ್ನು ಸಿನಿಮಾದ ಮೂಲಕ ತೋರಿಸಲಾಗಿದೆ.

ಆದರೂ ಮೂಲ ಕೃತಿಗೆ ಹೋಲಿಸಿದರೆ ಸಿನಿಮಾ ಮಾಧ್ಯಮದಲ್ಲಿ ಕಥನ ಅಲ್ಲಿ-ಇಲ್ಲಿ ತನ್ನ ಗಂಭಿರತೆಯನ್ನು ಸ್ವಲ್ಪ ಕಳಕೊಂಡಂತೆ ಭಾಸವಾಗದಿರದು. ಈ ಬಗ್ಗೆ ಗಮನ ನೀಡಬಹುದಾಗಿತ್ತು.

ಒಟ್ಟಾರೆಯಾಗಿ ಈ ಪ್ರಯತ್ನಕ್ಕೆ ವಾಣಿಜ್ಯ ಮಂಡಳಿಯ ಸಹಕಾರ ಲಭ್ಯವಾಗಬೇಕಿತ್ತು ಆದರೆ ಭಾಷಾ ಸೊಗಡಿನ ಅರಿವಿಲ್ಲದ ಅಧಿಕಾರಿಗಳಿಂದ ಕೆಲ ಶಬ್ಧಗಳಿಗೆ ಧ್ವನಿಯನ್ನು ಅಡಗಿಸಿರುವುದರಿಂದ ಸಿನಿಮಾ ನೋಡುವ ಪ್ರೇಕ್ಷಕನಿಗೆ ಅಲ್ಲಲ್ಲಿ ನಿರಾಸೆಯಾಗುತ್ತದೆ.

ಈ ಕೆಲ ನಕಾರತ್ಮಕತೆಯಿದ್ದರೂ ಸಿನಿಮಾ ಒಂದು ಉತ್ತಮ ಕೃತಿಯಾಗಿ ನಿಂತಿದೆ.



ಹಾಸ್ಟೆಲ್ ಹಾಗೂ ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸಲು, ಕನಿಷ್ಠ ವೇತನ ಪರಿಷ್ಕರಣೆಯ ವಿರುದ್ಧ ತಡೆ-ಯಾಜ್ಞೆ ತೆರೆವುಗೊಳಿಸಬೇಕೆಂದು, ನೇರ ನೇಮಕಾತಿಯನ್ನು ಕೈಬಿಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ವತಿಯಿಂದ ಬೆಂಗಳೂರಿನಲ್ಲಿ ಅನಿರ್ದಿಷ್ಟಾವಧಿ ಧರಣೆಯನ್ನು ನಡೆಸಲಾಯಿತು. (ವರದಿ ಪುಟ 15ರಲ್ಲಿ)



ವೇತನ ನಿಗದಿ ಮತ್ತು ಸಾಮಾಜಿಕ ಭದ್ರತೆಗಾಗಿ ಒತ್ತಾಯಿಸಿ ಸಿಐಟಿಯು ವತಿಯಿಂದ ಸಾವಿರಾರು ಆಶಾ ಕಾರ್ಯಕರ್ತರ ವಿಧಾನಸೌಧ ಚಲೋ ನಡೆಸಿದರು. (ವರದಿ ಪುಟ 15ರಲ್ಲಿ)

ಚಿತ್ರ ನೋಟ

ಹೆಚ್.ಆರ್. ನವೀನ್‌ಕುಮಾರ್





ರಾಜ್ಯ ಸರ್ಕಾರಿ ನೌಕರದ ಸಚಿವಾಲಯ ನೌಕರರ ಸಂಘ, ವಿಧಾನಪರಿಷತ್ ಸಚಿವಾಲಯಗಳ ನೌಕರರ ಸಂಘಟನೆಯ ನೌಕರರು ಸಮಾನ ವೇತನ ಭತ್ಯೆಗಾಗಿ ಒತ್ತಾಯಿಸಿ ಕಛೇರಿ ಕೆಲಸ ಬಹಿಷ್ಕರಿಸಿ ಹೋರಾಟ ನಡೆಸಿದರು. ಈ ಹೋರಾಟದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ಎಸ್.ವರಲಕ್ಷ್ಮಿರವರು ಸೇರಿದಂತೆ ಇತರ ಮುಖಂಡರು ಭಾಗವಹಿಸಿದ್ದರು.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**